ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–570 006

Karnataka State Open University
Mukthagangothri, Mysore - 570 006

# M.A. (FINAL)

# SANSKRIT
## - KANNADA MEDIUM

# वैदिकसूक्तानि–१

तमसो मा ज्योतिर्गमय



**COURSE - 6**

**BLOCK - 1**

# ಕರಾಮುವಿ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆ

- ❖ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಆದೇಶ ಸಂಖ್ಯೆ : ED1/UOV/dated 12th February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ. 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.

- ❖ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.

- ❖ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು "ದೂರ ಶಿಕ್ಷಣ ಮಂಡಳಿ" (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.

- ❖ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ ನವದೆಹಲಿಯಲ್ಲಿರುವ ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.

- ❖ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.

- ❖ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.

- ❖ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

KSOU

# MA – SANSKRIT

## वैदिकसूक्तानि - १

# BLOCK

# 1


| | |
|---|---|
| ಘಟಕ – 1 : ವೇದದ ಅಧ್ಯಯನ (ಸಾಮಾನ್ಯ ವಿಷಯ) | 01 - 30 |
| ಘಟಕ – 2 : ವೇದದ ಅಧ್ಯಯನ (ಸಾಮಾನ್ಯ ವಿಷಯ - ಮುಂದುವರೆದಿದೆ) ಮತ್ತು ವೈದಿಕ ವ್ಯಾಕರಣ (ರೂಪಗಳು ಮತ್ತು ಸ್ವರ) | 31 - 60 |
| ಘಟಕ – 3 : ವೇದಸೂಕ್ತಗಳು – ಸವಿತೃ ಮತ್ತು ವಿಷ್ಣು ಸೂಕ್ತಗಳು | 61 - 96 |
| ಘಟಕ – 4 : ವೇದಸೂಕ್ತಗಳು – ಇಂದ್ರಸೂಕ್ತ | 97 - 124 |

## COURSE DESIGN AND EDITORIAL COMMITTEE

**Prof. M. G. Krishnan**
Vice-Chancellor & Chairman,
Karnataka State Open University,
Mysore - 570006.

**Prof. S. N. Vikram Raj Urs**
Dean (Academic) - Convener,
Karnataka State Open University,
Mysore - 570006.

**Dr. N. Radhakrishna Bhat**
Professor & Chairman,
Department of Studies & Research in Sanskrit,
Karnataka State Open University,
Mysore - 570006.

**Editor & Subject Co-ordinator**

**Dr. Sivakumaraswamy**
Professor of Sanskrit (Retd.)
Bangalore University,
Bangalore

**Course Writer**

**Developed by Academic Section, KSOU, Mysore.**

Karnataka State Open University, 2013-2014.

All rights reserved. No part of this work may be reproduced in any form, by mimeography or any other means, without permission in writing from the Karnataka State Open University.

Further information on the Karnataka State Open University programmes may be obtained from the University's office at Mukthagangotri, Mysore-570006

---

# प्रस्तावना

प्रियाः संस्कृतविद्यार्थिनः

अस्मदीयकर्णाटकराज्यमुक्तविश्वविद्यानिलयस्य स्नातकोत्तरशिक्षणविभागे अन्तिमवर्षस्य संस्कृतकक्ष्यां प्रवेष्टृभ्यः भवद्भ्यः सर्वेभ्यः हार्दं सुस्वागतं व्याहरामि।

जगतीतलस्य प्राचीनतमभाषासु अग्रिमपङ्क्तौ विराजमाना संस्कृतभाषा अद्वितीयत्वेन वर्तते। वैदिकसंस्कृतं लौकिकसंस्कृतमिति संस्कृतं द्विधा विभक्तमस्ति। क्रिस्तपूर्वकाले वेदेषु दृश्यमानेयं भाषा क्रिस्तपूर्वपञ्चमशतके काव्यस्वरूपमलभत इति विदग्धाः विद्वांसः वदन्ति। उत्तरोत्तरकाले संस्कृतभाषासौ उन्नतशिक्षण-शासन-लेखन-काव्यादिषु सततं समुपयुज्यमाना सती सर्वत्र व्याप्तासीत्। विश्वस्य प्राचीनतमभाषासु संस्कृतभाषैव प्रप्रथमा इति भाषाविदः विमर्शकाश्च कथयन्ति। प्रायः लोके पञ्चसहस्र-वर्षाधिकम् इतिहासं लब्धवती संस्कृतादन्या भाषा एकापि नास्ति।

चत्वारो वेदाः विविधानि शास्त्राणि रामायण-महाभारतनामकादीतिहासाः अष्टादशपुराणानि-उपपुराणानि षड्दर्शनानि अनेकानि काव्यानि शास्त्र-व्याख्यानानि प्रशस्तयः शासनानि चाटुपद्यानि सुभाषितानीत्येवं रीत्या विविधप्रकारेषु निबद्धाः कृतयः संस्कृतवाङ्मये भूरि विलसन्ति। एतेषां परिचयः पाठ्यक्रमानुरोधेन यथावकाशं कारयिष्यते। संस्कृते विशेषाध्ययनार्थं गहनतमसंशोधनार्थं च युष्माकं सज्जीकरणमेव स्नातकोत्तरशिक्षणस्य मुख्यः उद्देशः।

आसु अन्तिमवर्षस्य कक्ष्यासु यूयं वेदसूक्तानि उपनिषदं-भगवद्गीतां वैदिकसाहित्यचरित्रं कौटलीयम्-अर्थशास्त्रम् याज्ञवल्क्यस्मृतिं वाल्मीकिरामायणे सुन्दरकाण्डस्य कांश्चन सर्गान् प्रबन्धलेखनानि वैयाकरणसिद्धान्तकौमुद्यां समासप्रकरणं भाषाशास्त्रम् आनन्दवर्धनस्य ध्वन्यालोकं मम्मटस्य काव्यप्रकाशं प्राचीनार्वाचीनालङ्कारिकाणां परिचयं भारतीय-पाश्चात्यसाहित्यविमर्शयोः तुलनात्मकमध्ययनं च करिष्यथ।

युष्माकं स्वाध्यायसुलभाय स्वयंबोधनपद्धत्या (SIM) उपर्युक्तविषयेषु पाठाः विशिष्टरूपेण विद्वद्भिः आरचितास्सन्ति। अनेके विद्वांसः एतान् पाठान् महता परिश्रमेण सज्जीकृतवन्तः तेषां साहाय्यं सकार्तज्ञं संस्मरामि।

यूयं सर्वे एतान् सम्यगधीत्य एतेषु विषयेषु विशिष्टं ज्ञानं सम्पादयत इत्याशासे। "श्रद्धयाग्निः ज्ञानं समिध्यते" इति वेदवाण्यनुसारात् युष्माभिः श्रद्धाकृतमध्ययनं फलप्रदं यशःप्रदं च भूयादिति मदीयः आशयः। शुभं भवतु।

जीयात् गीर्वाणभारती

डा.एन्. राधाकृष्ण भट्
संस्कृतविभागाध्यक्षः
कर्णाटकराज्य-मुक्तविश्वविद्यानिलयः
मानसगङ्गोत्री, मैसूरु

**ಪತ್ರಿಕೆ - VI**

**ಖಂಡ - I — ಘಟಕ - 1**

# ವೇದದ ಅಧ್ಯಯನ (ಸಾಮಾನ್ಯ ವಿಷಯ)


1.1.1 ಮುನ್ನುಡಿ

1.1.2 ಉದ್ದೇಶಗಳು

1.1.3.1 ವೇದ ಶಬ್ದದ ಅರ್ಥ

1.1.3.2 ಮಂತ್ರ ಮತ್ತು ಬ್ರಾಹ್ಮಣ

1.1.3.3 ವೇದದ ಉಗಮ

1.1.3.4 ವೇದದ ವರ್ಗೀಕರಣ

1.1.3.5 ಸಂಹಿತೆಗಳು

1.1.3.6 ಬ್ರಾಹ್ಮಣಗಳು

1.1.3.7 ಆರಣ್ಯಕಗಳು

1.1.3.8 ಉಪನಿಷತ್ತುಗಳು

1.1.3.9 ಋಗ್ವೇದದ ಅಧ್ಯಯನದ ಪ್ರಾಮುಖ್ಯ

1.1.3.10 ಋಗ್ವೇದದ ಸೂಕ್ತಗಳ ವ್ಯವಸ್ಥೆ

1.1.3.11 ಋಗ್ವೇದದ ವಿಷಯ ವೈವಿಧ್ಯ

1.1.3.12 ಋಗ್ವೇದದ ಧರ್ಮಸ್ವರೂಪ

1.1.3.13 ಋಗ್ವೇದದ ಕಾಲದ ಬಗ್ಗೆ ವಾದಗಳು

1.1.4 ಪುನರಾವೃತ್ತಿಯ ಅಂಶಗಳು ಮತ್ತು ಸಾರಾಂಶ

1.1.5 ಪ್ರಶ್ನೆಗಳು

1.1.6 ಪರಾಮರ್ಶನ ಗ್ರಂಥಗಳು

# ಘಟಕ - 1

# ವೇದದ ಅಧ್ಯಯನ (ಸಾಮಾನ್ಯ ವಿಷಯ)

## 1.1.1 ಮುನ್ನುಡಿ

ಸಂಸ್ಕೃತ ವಿದ್ಯಾರ್ಥಿಗಳಿಗೆ ಬಿ.ಎ. ಐಚ್ಛಿಕ ಸಂಸ್ಕೃತ ಮತ್ತು ಎಂ.ಎ. ಸಂಸ್ಕೃತ ಸ್ತರದಲ್ಲಿ ವೇದದ ಅಧ್ಯಯನವು ನಿಯುಕ್ತವಾಗಿದೆ. ವಿದ್ಯಾರ್ಥಿಗಳು ಋಗ್ವೇದದಿಂದ ಆಯ್ದ ಸೂಕ್ತಗಳನ್ನು ಸಾಯಣಭಾಷ್ಯ ಮತ್ತು ಮ್ಯಾಕ್‌ಡೋನಲ್ಡ್, ಮ್ಯಾಕ್ಸ್ ಮ್ಯುಲರ್ ಮುಂತಾದ ಆಧುನಿಕ ವ್ಯಾಖ್ಯಾನಕಾರರ ವ್ಯಾಖ್ಯಾನಗಳೊಂದಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಬೇಕೆಂದು ವಿಧಿಸಲಾಗಿದೆ. ಸಾಯಣಭಾಷ್ಯದೊಂದಿಗಿನ ವೇದಸೂಕ್ತಗಳ ಅಧ್ಯಯನದಲ್ಲಿ ವೇದಾಧ್ಯಯನಕ್ಕೆ ವೇದಾಂಗಗಳು ಹೇಗೆ ಉಪಯುಕ್ತವೆಂಬುದನ್ನು ಸ್ಪಷ್ಟಗೊಳಿಸಲಾಗುತ್ತದೆ. ಪ್ರಮುಖವಾಗಿ ಭಾಷಾಶಾಸ್ತ್ರೀಯ ಪದ್ಧತಿಯೆಂದು ಕರೆಯಲಾಗುವ ಆಧುನಿಕ ವೇದವ್ಯಾಖ್ಯಾನ ಪದ್ಧತಿಯ ಪರಿಚಯವೂ ವಿದ್ಯಾರ್ಥಿಗಳಿಗೆ ಆಗುತ್ತದೆ. ಋಗ್ವೇದದ ಸೂಕ್ತಗಳ ಜೊತೆಗೆ ಒಂದು ಉಪನಿಷತ್ತಿನ ಅಥವಾ ಅದರ ಭಾಗದ ಮತ್ತು ಭಗವದ್ಗೀತೆಯ ಒಂದು ಭಾಗದ ಅಧ್ಯಯನವನ್ನೂ ವೈದಿಕ ಸಾಹಿತ್ಯ ಚರಿತ್ರೆಯ ಅಭ್ಯಾಸವನ್ನೂ ಅವರು ಮಾಡಬೇಕಾಗಿದೆ. ಹೀಗೆ ಎಂ.ಎ. ಸ್ತರದಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳು ವೈದಿಕ ಸಾಹಿತ್ಯದ ವ್ಯಾಪ್ತಿಯನ್ನು ತಿಳಿದುಕೊಳ್ಳುತ್ತಾರೆ ಮತ್ತು ಸಾಂಪ್ರದಾಯಿಕ ಹಾಗೂ ಆಧುನಿಕ ವೈದಿಕ ವ್ಯಾಖ್ಯಾನ ಪದ್ಧತಿಗಳಲ್ಲಿ ಶಿಕ್ಷಣವನ್ನು ಪಡೆಯುತ್ತಾರೆ.

## 1.1.2 ಉದ್ದೇಶಗಳು

ಎಂ.ಎ. ಸ್ತರದ ಸಂಸ್ಕೃತ ವಿದ್ಯಾರ್ಥಿಗಳು ವೈದಿಕ ಸಾಹಿತ್ಯದಲ್ಲಿ ಪ್ರಯುಕ್ತವಾದ ಪ್ರಾಚೀನ ಸಂಸ್ಕೃತ ಭಾಷೆಯನ್ನು ತಿಳಿಯಬೇಕು ಮತ್ತು ಲೌಕಿಕ ಗ್ರಾಂಥಿಕ ಸಂಸ್ಕೃತ ಭಾಷೆಗೆ ಹೋಲಿಸಿದರೆ ಕಂಡು ಬರುವ ವೈದಿಕ ಭಾಷೆಯ ವೈಚಿತ್ರ್ಯಗಳನ್ನು ಅರಿಯಬೇಕು. ಇದು ಮೊದಲನೆಯ ಉದ್ದೇಶ. ಎರಡನೆಯ ಉದ್ದೇಶವೆಂದರೆ ವೇದದ ವಿವಿಧ ಭಾಗಗಳ ವಿಷಯಗಳನ್ನು ತಿಳಿದು ಅವು ಹೇಗೆ ಅನಂತರ ಕಾಲದ ಸಂಸ್ಕೃತ ಸಾಹಿತ್ಯ, ವ್ಯಾಕರಣ, ದರ್ಶನಗಳು, ಧಾರ್ಮಿಕ ಪರಂಪರೆಗಳು, ಸಮಾಜಶಾಸ್ತ್ರೀಯ ಪರಂಪರೆ, ಮುಂತಾದವುಗಳಿಗೆ ಮೂಲಸ್ಫೂರ್ತಿಯಾಗಿವೆಯೆಂಬುದನ್ನು ತಿಳಿದುಕೊಳ್ಳುವುದೇ ಆಗಿದೆ.

## 1.1.3.1 ವೇದ ಶಬ್ದದ ಅರ್ಥ

'ವಿದ-ಜ್ಞಾನೇ' ಎಂಬ ಧಾತುವಿನಿಂದ ನಿಷ್ಪನ್ನವಾದ ವೇದ ಶಬ್ದವು ಜ್ಞಾನವಾಚಕ. ವೇದವೆಂದರೆ ವಿದ್ಯೆ, ಪವಿತ್ರವೂ, ಪ್ರಮಾಣಭೂತವೂ ಆದ ಜ್ಞಾನ. "विद्यते अनेन इति वेदः - विद् + घञ् - हलश्च | पा. 3.3.122". ಆ ವಿದ್ಯೆಯನ್ನು ಒಳಗೊಂಡ ಗ್ರಂಥ ಅಥವಾ ಗ್ರಂಥಸಮುದಾಯಕ್ಕೆ ವೇದವೆಂದು ಹೆಸರು, ವೇದದ ಲಕ್ಷಣವನ್ನು ಹೇಳುವ ಹಲವಾರು ಪ್ರಯತ್ನಗಳಿವೆ. ತೈತ್ತಿರೀಯಸಂಹಿತಾಭಾಷ್ಯದಲ್ಲಿ ಸಾಯಣರು इष्टप्राप्त्यनिष्टपरिहार-योरलौकिकमुपायं यो ग्रन्थो वेदयति स वेदः | ಎಂದು ಹೇಳಿದ್ದಾರೆ. ಇಷ್ಟವಾದುದನ್ನು ಪಡೆಯಲು ಮತ್ತು ಅನಿಷ್ಟವಾದುದನ್ನು ಪರಿಹರಿಸಿಕೊಳ್ಳಲು ಯಾವ ಗ್ರಂಥವು ಅಲೌಕಿಕವಾದ ಉಪಾಯವನ್ನು ತಿಳಿಸುತ್ತದೆಯೋ ಅದು ವೇದ. ಅದು ಹೇಗೆ ಅಲೌಕಿಕ ಉಪಾಯವಾಗಿದೆಯೆಂಬುದನ್ನು ಸಾಯಣರೇ ಋಗ್ಭಾಷ್ಯಭೂಮಿಕೆಯಲ್ಲಿ ಹೇಳಿದ್ದಾರೆ -

प्रत्यक्षेनानुमित्या वा यस्तूपायो न बुध्यते |
एनं विदन्ति वेदेन तस्माद् बेदस्य वेदता | |

ಪ್ರತ್ಯಕ್ಷಪ್ರಮಾಣ ಅಥವಾ ಅನುಮಾನಪ್ರಮಾಣದಿಂದ ಯಾವ ಉಪಾಯವು ತಿಳಿಯಲ್ಪಡುವುದಿಲ್ಲವೋ ಅಂತಹ ಉಪಾಯವನ್ನು ವೇದದಿಂದ ತಿಳಿಯುತ್ತಾರೆ. ಅದೇ ವೇದದ ವೇದತ್ವ. ವೇದವು ದೇವತೆಗಳ ಬಗ್ಗೆ, ಮನುಷ್ಯನ ನೈತಿಕ ಹಾಗೂ ದೈವಿಕ ಧ್ಯೇಯಗಳ ಬಗ್ಗೆ ಮತ್ತು ಪರಮಾರ್ಥತತ್ತ್ವದ ಬಗ್ಗೆ ಹೇಳುತ್ತದೆ.

सकलदेवतानां धर्मस्य परब्रह्मतत्त्वस्य च प्रतिपादके वेदे |

## 1.1.3.2 ಮಂತ್ರ ಮತ್ತು ಬ್ರಾಹ್ಮಣ

ಆಪಸ್ತಂಬರ ಯಜ್ಞಪರಿಭಾಷೆಯಲ್ಲಿ (1.33) मन्त्र-ब्राह्मणयोर्वेदनामधेयम् | ಮಂತ್ರ ಮತ್ತು ಬ್ರಾಹ್ಮಣಗಳಿಗೆ ವೇದವೆಂದು ಹೆಸರು, ಎಂದು ವೇದದ ಪಾರಿಭಾಷಿಕವಾದ ಲಕ್ಷಣವು ಬಂದಿದೆ. ಸಾಯಣರು ಇದನ್ನು ತಮ್ಮ ಋಗ್‌ಭಾಷ್ಯಭೂಮಿಕೆಯಲ್ಲಿ ಉಲ್ಲೇಖಿಸಿ ಮಂತ್ರವೆಂದರೆ ಯಾವುದು, ಬ್ರಾಹ್ಮಣವೆಂದರೆ ಯಾವುದು ಎಂದು ವಿವರಿಸಿದ್ದಾರೆ. ಸಂಹಿತೆಯೆಂದು ಕರೆಯಲಾಗುವ ಭಾಗವೇ ಮಂತ್ರಭಾಗ ಮತ್ತು ಬ್ರಾಹ್ಮಣವೆಂಬ ಭಾಗದಲ್ಲಿ ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳು ಕೂಡಿಕೊಂಡಿವೆ. "अपौरुषेयं वाक्यं

वेदः" (अर्थसंग्रह, 1.10) ಇದು ಮೀಮಾಂಸಕರು ಕೊಡುವ ವೇದದ ಲಕ್ಷಣ. ಈ ಲಕ್ಷ ವೇದದ ಉಗಮದ ಬಗ್ಗೆ ಇರುವ ಸಾಂಪ್ರದಾಯಕ ಮತವನ್ನು ಆಧರಿಸಿದೆ.

## 1.1.3.3 ವೇದದ ಉಗಮ

ವೇದವೆಂಬುದು ಅನುಸ್ಯೂತವಾಗಿ ಗುರುವಿನಿಂದ ಶಿಷ್ಯನಿಗೆ ಎಂಬ ಕ್ರಮದಲ್ಲಿ ಶ್ರವಣಪರಂಪರೆಯಿಂದ ಬಂದಿತ್ತು. ವಸಿಷ್ಠ, ವಾಮದೇವ ಮುಂತಾದ ಋಷಿಗಳಿಗೆ ಸಂಬಂಧಿಸಿದ ಸೂಕ್ತಗಳಿಗೆ ಅವರು ಮಂತ್ರದ್ರಷ್ಟಾರರು, ಅವರು ಮಂತ್ರಗಳನ್ನು ದರ್ಶನಮಾಡಿಕೊಂಡವರು, ಕರ್ತೃಗಳಲ್ಲ. ಹೀಗೆ ವೇದವು ಧರ್ಮವನ್ನು ಸಾಕ್ಷಾತ್ಕಾರಗೊಳಿಸಿಕೊಂಡ ಋಷಿಗಳ ದರ್ಶನವಾಗಿದ್ದು, ನಿರ್ದುಷ್ಟವಾಗಿದೆ, ನಿರ್ಣಾಯಕವಾದ ಪ್ರಮಾಣವಾಗಿದೆ. ಇಂತಹ ವೇದದ ಉಗಮದ ಬಗ್ಗೆ ಅತ್ಯಂತ ಪ್ರಾಚೀನವಾದ ಉಲ್ಲೇಖವೆಂದರೆ ಋಗ್ವೇದದ ಪುರುಷಸೂಕ್ತದ (10 ಮಂ. 90 ಸೂ.) ಈ ಮಂತ್ರಗಳಲ್ಲಿ ಬಂದಿದೆ -

यत्पुरुषेण हविषा देवायज्ञमतन्वत | (ಋ. 10.90.6)

तस्माद् यज्ञात्सर्वहुतः ऋचस्सामानि जज्ञिरे |

छन्दांसि जज्ञिरे तस्माद्यजुस्तस्मादजायत | | (ಋ. 10.90.9)

ಈ ಉಲ್ಲೇಖದ ಪ್ರಕಾರ ಪುರುಷರೂಪದ ಸರ್ವಹವಿಸ್ಸಿನಿಂದ ವಿಶಿಷ್ಟವಾದ ಯಜ್ಞದಿಂದ ಋಕ್ಕುಗಳು ಮತ್ತು ಸಾಮಗಳು ಹುಟ್ಟಿಬಂದವು; ಅದರಿಂದ ಛಂದಸ್ಸುಗಳು ಹುಟ್ಟಿದವು ; ಅದರಿಂದಲೇ ಯಜುಸ್ಸುಗಳು ಹುಟ್ಟಿದವು. ಹೀಗೆ ಋಕ್, ಯಜುಸ್ ಮತ್ತು ಸಾಮಗಳೆಂಬ ವೇದಗಳು ಯಜ್ಞದಿಂದಲೇ ಮೂಡಿಬಂದವು.

ಶ್ವೇತಾಶ್ವತರೋಪನಿಷತ್ತು (6.10) 'ಪರಮಾತ್ಮನು ಬ್ರಹ್ಮನನ್ನು ಸೃಷ್ಟಿಸಿ ಅವನಿಗೆ ವೇದಗಳನ್ನು ಬೋಧಿಸಿದನು' ಎಂದು ಹೇಳುತ್ತದೆ. ಬೃಹದಾರಣ್ಯಕೋಪನಿಷತ್ತು (6.15.11) ಹೇಳುವಂತೆ ಋಗ್ವೇದ ಮುಂತಾದ ವೇದಗಳು ಪರಮಾತ್ಮನ ನಿಃಶ್ವಸಿತವಾಗಿವೆ. ಬಾದರಾಯಣರು ತಮ್ಮ ಬ್ರಹ್ಮಸೂತ್ರದಲ್ಲಿ (1.1-3; 1.2-29) ಬ್ರಹ್ಮವೇ ವೇದಗಳ ಮೂಲವೆಂದೂ, ಅವು ನಿತ್ಯವೆಂದೂ ಹೇಳುತ್ತಾರೆ. ಶ್ರೀಮದ್ಭಾಗವತದ ಮೊದಲ ಶ್ಲೋಕದಲ್ಲಿ ಪರಮಾತ್ಮನು ಬ್ರಹ್ಮನಲ್ಲಿ ವೇದವನ್ನು ಮೂಡಿಸಿದನು; ಬ್ರಹ್ಮನೇ ಆದಿಕವಿ ಎಂದು ಹೇಳಿದೆ.

ಹೀಗೆ ಭಾರತೀಯ ಪರಂಪರೆಯಲ್ಲಿ ವೇದವು ಅಪೌರುಷೇಯವೆಂದೂ ಸ್ವತಃಸಿದ್ಧವಾದ ಪ್ರಮಾಣವೆಂದೂ ಅಂಗೀಕೃತವಾಗಿದೆ. ವೇದದ ನಿತ್ಯತ್ವದ ವಿಷಯದಲ್ಲಿ ಎರಡು ವಾದಗಳಿವೆ.

ಮೊದಲನೆಯದು ಮೀಮಾಂಸಕರದು, ಎರಡನೆಯದು ನೈಯಾಯಿಕರದು. ಮೀಮಾಂಸಕರ ಪ್ರಕಾರ ವೇದವು ನಿತ್ಯವಾದ ಧರ್ಮ ಮತ್ತು ಬ್ರಹ್ಮಗಳ ಮೂಲ ಆಕರವಾಗಿದೆ. ಆದ್ದರಿಂದ ಅದು ನಿತ್ಯ. ಶಬ್ದ ಮತ್ತು ಅರ್ಥಗಳ ಸಂಬಂಧವು 'ಔತ್ಪತ್ತಿಕ'ವಾದ್ದರಿಂದ ವೇದದ ಭಾಷೆಯೂ ನಿತ್ಯ. ಮೀಮಾಂಸಕರ ಈ ಮತವನ್ನು ಒಪ್ಪದ ನೈಯಾಯಿಕರು ಹೇಳುವಂತೆ ವೇದದ ವಿಷಯವು ನಿತ್ಯವಾದುದು, ಆದರೆ ಋಷಿಗಳ ವಾಕ್ಯವಾದ ವೇದವು ಕಾಲಿದಾಸ ಮುಂತಾದವರ ಕೃತಿಗಳಂತೆ ಭಾಷೆಯ ದೃಷ್ಟಿಯಿಂದ ಅನಿತ್ಯ.

## 1.1.3.4 ವೇದದ ವರ್ಗೀಕರಣ

ವೇದವನ್ನು ಪ್ರಥಮತಃ ಪರಾ ಮತ್ತು ಅಪರಾ ವಿದ್ಯಾ ಎಂದು ವರ್ಗೀಕರಿಸುತ್ತಾರೆ. ಇದು ಜ್ಞಾನಕಾಂಡ ಮತ್ತು ಕರ್ಮಕಾಂಡ ಎಂಬ ವರ್ಗೀಕರಣಕ್ಕೆ ಸಮವಾಗಿದೆ. ಇವುಗಳಲ್ಲಿ ಜ್ಞಾನಕಾಂಡವೆಂದರೆ ಉಪನಿಷತ್ತುಗಳನ್ನೊಳಗೊಂಡ ಭಾಗ. ಕರ್ಮಕಾಂಡವೆಂದರೆ ವೇದದ ಮಿಕ್ಕ ಭಾಗ. ಮೊದಲನೆಯದು ಬ್ರಹ್ಮ, ಜೀವ ಮತ್ತು ಜಗತ್ತನ್ನು ಕುರಿತು ತತ್ತ್ವವಿಚಾರವನ್ನು ಮಾಡುತ್ತದೆ; ಎರಡನೆಯದು ಧರ್ಮ ಮತ್ತು ಧಾರ್ಮಿಕ (ಯಾಜ್ಞಿಕ) ಕ್ರಿಯೆಗಳನ್ನು ನಿರೂಪಿಸುತ್ತದೆ. ಈ ವರ್ಗೀಕರಣವು ಅಷ್ಟು ನಿಶ್ಚಿತವೆಂದು ಬಗೆಯುವುದು ಸಾಧ್ಯವಿಲ್ಲ; ಏಕೆಂದರೆ ಉಪನಿಷತ್ತುಗಳ ಕೆಲಭಾಗಗಳಲ್ಲಿ ಯಾಜ್ಞಿಕ ಕರ್ಮದ ವಿಚಾರವು ಬರುತ್ತದೆ; ಹಾಗೆಯೇ ಇತರ ಭಾಗದಲ್ಲಿ ಅಲ್ಲಲ್ಲಿ ರಹಸ್ಯಾತ್ಮಕವಾದ ಆಧ್ಯಾತ್ಮ ವಿಚಾರವು ಬರುತ್ತದೆ. ಆದರೆ 'ಪ್ರಾಧಾನ್ಯೇನ ವ್ಯಪದೇಶಾಃ ಭವಂತಿ' ಎಂಬಂತೆ ಪ್ರಾಧಾನ್ಯದ ದೃಷ್ಟಿಯಿಂದ ಉಪನಿಷತ್ತುಗಳ ಭಾಗವು ಜ್ಞಾನಕಾಂಡವೇ ಮತ್ತು ಮಿಕ್ಕಭಾಗವು ಕರ್ಮಕಾಂಡವೇ ಎಂದು ತಿಳಿಯಬಹುದು.

ಇನ್ನೊಂದು ವರ್ಗೀಕರಣದ ಪ್ರಕಾರ ವೇದವು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದವೆಂದು ನಾಲ್ಕು ಭಾಗವಾಗಿದೆ. ಋಗ್ ಎಂದರೆ ಪ್ರಶಂಸಾತ್ಮಕ ಸ್ತೋತ್ರ; ಯಜುಸ್ ಎಂದರೆ ಯಜ್ಞಕರ್ಮಬೋಧಕವಾದ ವಾಕ್ಯ; ಸಾಮನ್ ಎಂದರೆ ಗೀತಕ್ಕೆ ಅಳವಡಿಸಲ್ಪಟ್ಟ ಋಕ್, ಅಥರ್ವನ್ ಎಂದರೆ ಮಾಟ ಮತ್ತು ಮದ್ದುಗಳು. ಇವುಗಳ ಸಂಗ್ರಹಗಳನ್ನು ಕ್ರಮವಾಗಿ ಋಗ್ವೇದಸಂಹಿತಾ, ಯಜುರ್ವೇದಸಂಹಿತಾ, ಸಾಮವೇದಸಂಹಿತಾ ಮತ್ತು ಅಥರ್ವವೇದಸಂಹಿತಾ ಎಂದು ಕರೆಯುತ್ತಾರೆ. ಬ್ರಾಹ್ಮಣಗಳು ಮತ್ತು ಮೂಲತಃ ಅವುಗಳ ಭಾಗಗಳಾದ ಅರಣ್ಯಕಗಳು ಹಾಗೂ ಉಪನಿಷತ್ತುಗಳು ಆಯಾಯ ಸಂಹಿತೆಗಳಿಗೆ ಸಂಬಂಧಿಸಿವೆ.

ಸ್ವಯಂ ಅಭಿವ್ಯಕ್ತವಾದ ವೇದವು ಒಂದೇ ಅವಿಭಕ್ತ ಜ್ಞಾನರಾಶಿಯಾಗಿತ್ತೆಂದೂ,

ಆದಿಯಲ್ಲಿ ಅದು ಹಾಗೆಯೇ ಬ್ರಹ್ಮನಿಗೆ ವೇದ್ಯವಾಗಿತ್ತೆಂದೂ, ಕಾಲಾಂತರದಲ್ಲಿ ವೇದದ ಅಧ್ಯೇತೃಗಳ ಅನವಧಾನ ಮತ್ತು ಭ್ರಾಂತಿಯ ಕಾರಣದಿಂದ ಅದು ಹೆಚ್ಚು ಹೆಚ್ಚು ದುರ್ಬೋಧವಾಗಿ ಪರಿಣಮಿಸಿತೆಂದೂ, ದ್ವಾಪರಯುಗದ ಆರಂಭದಲ್ಲಿ ಕೃಷ್ಣ ದ್ವೈಪಾಯನ ವ್ಯಾಸರು ಅದನ್ನು ಋಕ್, ಯಜುಸ್, ಸಾಮನ್ ಮತ್ತು ಅಥರ್ವನ್ ಎಂದು ವರ್ಗೀಕರಿಸಿ ವ್ಯವಸ್ಥೆಗೆ ಒಳಪಡಿಸಿದರೆಂದೂ ಪುರಾಣಗಳ ಸಂಪ್ರದಾಯವು ಹೇಳುತ್ತದೆ. ಈ ವ್ಯವಸ್ಥೆಯನ್ನು ಯಜ್ಞಕರ್ಮದ ಹೋತೃ, ಅಧ್ವರ್ಯು, ಉದ್ಗಾತೃ ಮತ್ತು ಬ್ರಹ್ಮ ಎಂಬ ನಾಲ್ವರು ಋತ್ವಿಕ್ಕುಗಳ ಉಪಯೋಗಕ್ಕಾಗಿ ಮಾಡಲಾಯಿತು. ಹೀಗೆ ನಾಲ್ಕು ಭಾಗವಾಗಿ ವೇದವನ್ನು ವರ್ಗೀಕರಿಸಿದ ವ್ಯಾಸರು ತಮ್ಮ ಶಿಷ್ಯರುಗಳಾದ ಪೈಲ, ವೈಶಂಪಾಯನ, ಜೈಮಿನಿ ಮತ್ತು ಸುಮಂತು ಎಂಬುವರಿಗೆ ಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳನ್ನು ಅನುಗ್ರಹಿಸಿದರು. ಈ ಆಚಾರ್ಯರುಗಳ ಪರಂಪರೆಯಲ್ಲಿ ಆಯಾಯ ವೇದಗಳ ಬಹಳ ಶಾಖೆಗಳು ಬೆಳೆದು ಬಂದವು.

ಮೇಲೆ ಹೇಳಿದ ವರ್ಗೀಕರಣದಂತೆ ಅಂತಿಮವಾಗಿ ವೇದದ ನಾಲ್ಕು ಭಾಗಗಳನ್ನು ಸಂಹಿತೆಗಳು, ಬ್ರಾಹ್ಮಣಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳೆಂದು ಗುರುತಿಸಬಹುದು. ಅವುಗಳ ಸಂಕ್ಷಿಪ್ತವಾದ ಪರಿಚಯವನ್ನಿಲ್ಲಿ ಮಾಡಿಕೊಡಲಾಗಿದೆ.

## 1.1.3.5 ಸಂಹಿತೆಗಳು.

ಈ ಮೊದಲೆ ಹೇಳಿದಂತೆ ವೇದದ ನಾಲ್ಕು ಸಂಹಿತೆಗಳಿವೆ. ಅವುಗಳಲ್ಲಿ ಮೊದಲನೆಯದಾದ ಋಗ್ವೇದಸಂಹಿತೆಯು ಮೂಲತಃ ಪ್ರಾಕೃತಿಕ ಶಕ್ತಿಗಳಾದ ಅಗ್ನಿ, ಇಂದ್ರ, ವರುಣ, ರುದ್ರ, ಉಷಸ್, ಪರ್ಜನ್ಯ ಮುಂತಾದ ದೇವತೆಗಳ ಸ್ತೋತ್ರರೂಪದಲ್ಲಿರುವ ಸೂಕ್ತಗಳ ಸಂಗ್ರಹವಾಗಿದೆ. ಪ್ರಾಚೀನ ಸಾಮಾಜಿಕ ಆಚರಣೆಗಳು, ಕ್ರೀಡಾ-ವಿನೋದಗಳು, ಮುಂತಾದವುಗಳ ಮೇಲೆ ಬೆಳಕು ಚೆಲ್ಲುವ ಕೆಲವು ಸೂಕ್ತಗಳು ಅದರಲ್ಲಿ ಬಂದಿವೆ. ಅವುಗಳಿಗೆ ಲೌಕಿಕ ಸೂಕ್ತ (Secular hymns)ಗಳೆಂದು ಕರೆಯುತ್ತಾರೆ. ಅದರಲ್ಲಿ ಕೆಲವು ಸೂಕ್ತಗಳು ತತ್ತ್ವವಿಚಾರವನ್ನು ಒಳಗೊಂಡಿವೆ. ಇದರ ಶಾಕಲಶಾಖೆಯ ಸಂಹಿತೆಯು ಉಪಲಬ್ಧವಾಗಿದೆ.

ಯಜುರ್ವೇದಸಂಹಿತೆಯು ಮತ್ತೆ ಎರಡು ಪರಂಪರೆಗಳಲ್ಲಿ ವಿಭಕ್ತವಾಗಿದೆ. ಕೃಷ್ಣಯಜುರ್ವೇದ ಮತ್ತು ಶುಕ್ಲಯಜುರ್ವೇದವೆಂದು ಆ ಪರಂಪರೆಗಳ ಹೆಸರು. ಕೃಷ್ಣಯಜುರ್ವೇದದ ನಾಲ್ಕು ಶಾಖೆಗಳ ಸಂಹಿತೆಗಳಿಂದು ಉಪಲಬ್ಧವಾಗಿದೆ. ಅವುಗಳು : ಮೈತ್ರಾಯಣೀಸಂಹಿತಾ, ಕಾಠಕಸಂಹಿತಾ, ಕಪಿಷ್ಠಲಕಠಸಂಹಿತಾ ಮತ್ತು ತೈತ್ತಿರೀಯಸಂಹಿತಾ.

ಇವುಗಳಲ್ಲಿ ಮೊದಲಿನ ಎರಡು ಸಂಹಿತೆಗಳು ಭಾಷೆ ಮತ್ತು ವಿಷಯದಲ್ಲಿ ಪರಸ್ಪರವಾಗಿ ನಿಕಟವಾದ ಸಂಬಂಧವನ್ನು ಹೊಂದಿವೆ. ಮೂರನೆಯ ಸಂಹಿತೆಯು ಕೇವಲ ಭಾಗಶಃ ಉಪಲಬ್ಧವಾಗಿದೆ. ತೈತ್ತಿರೀಯಸಂಹಿತೆಯೆಂಬ ನಾಲ್ಕನೆಯದು ಹೆಚ್ಚು ಪ್ರಸಿದ್ಧವಾದುದು. ಅದರಲ್ಲಿ 44 ಅನುವಾಕಗಳುಳ್ಳ ಏಳು ಅಧ್ಯಾಯಗಳಿವೆ. ಇನ್ನು ಶುಕ್ಲಯಜುರ್ವೇದದ ಸಂಹಿತೆಯಾದ ವಾಜಸನೇಯೀ ಸಂಹಿತೆಯು ಮಾಧ್ಯಂದಿನ ಮತ್ತು ಕಾಣ್ವ ಎಂಬ ಎರಡುಶಾಖೆಗಳಲ್ಲಿ ಉಪಲಬ್ಧವಾಗಿವೆ. ಈ ಎರಡೂ ಶಾಖೆಗಳ ಸಂಹಿತೆಗಳಲ್ಲಿ ಪರಸ್ಪರ ಸಾಮ್ಯವಿದೆ. ಇದರಲ್ಲಿ ಯಜ್ಞಕರ್ಮವನ್ನು ನಡೆಸುವ ಅಧ್ವರ್ಯು ಎಂಬ ಋತ್ವಿಜನಿಗೆ ಸಂಬಂಧಪಟ್ಟ ಮಂತ್ರಗಳೂ ಕರ್ಮವಿಧಾನಸೂಚಕ ವಾಕ್ಯಗಳೂ ಸಂಗೃಹೀತವಾಗಿವೆ. ಇವು ಬ್ರಾಹ್ಮಣಗಳೆಂಬ ಭಾಗಗಳೊಂದಿಗೆ ಮಿಶ್ರಿತವಾಗದೆ ವೈಶದ್ಯವಿರುವುದರಿಂದ ಇದಕ್ಕೆ ಶುಕ್ಲಯಜುರ್ವೇದವೆಂದು ಹೆಸರು ಬಂದಿದೆ. ಹಾಗಿಲ್ಲದೆ ಮಂತ್ರ ಯಾವುದು ಬ್ರಾಹ್ಮಣ ಯಾವುದು ಎಂಬ ಭೇದವು ಸ್ಪಷ್ಟವಾಗದಂತೆ, ಇವುಗಳ ಮಿಶ್ರಣವಿರುವುದರಿಂದ ಕೃಷ್ಣಯಜುರ್ವೇದಕ್ಕೆ ಆ ಹೆಸರು. ವಾಜಸನೇಯೀ ಸಂಹಿತೆಯ ವ್ಯಾಖ್ಯಾತೃಗಳಾದ ಉಪಟ ಮತ್ತು ಮಹೀಧರರ ಅಭಿಪ್ರಾಯವಿದು. ಶತಪಥಬ್ರಾಹ್ಮಣದಲ್ಲಿ ಶುಕ್ಲಯಜುರ್ವೇದದಲ್ಲಿ ಶುಕ್ಲಮಂತ್ರಗಳಿಗೆ (ಶುಕ್ಲಾನಿ ಯಜೂಂಷಿ) 'ಆದಿತ್ಯಾನಿ', ಆದಿತ್ಯನಿಗೆ ಸಂಬಂಧಿಸಿದವುಗಳು ಎಂಬ ಹೆಸರಿದೆ. ವಿಷ್ಣುಪುರಾಣದಲ್ಲಿ ಹೇಳಿದಂತೆ ಯಾಜ್ಞವಲ್ಕ್ಯನು ತಪಸ್ಸನ್ನು ಮಾಡಿ ಸೂರ್ಯನಿಂದ ಯಜುರ್‌ಮಂತ್ರಗಳನ್ನು ಪಡೆದರು. ಹೀಗೆ ವಾಜಸನೇಯೀ ಸಂಹಿತೆಗೆ ಶುಕ್ಲ ಎಂಬ ಹೆಸರು ಬಂದದ್ದು ಸೂರ್ಯನಿಂದ. ಇದಕ್ಕಿಂತ ಭಿನ್ನವಾದ ಯಜುರ್ವೇದ ಸಂಹಿತೆಗೆ ಭೇದಕ್ಕಾಗಿ ಕೃಷ್ಣ ಎಂಬ ಹೆಸರು ರೂಢಿಗೆ ಬಂತು. ಬೃಹದಾರಣ್ಯಕೋಪನಿಷತ್ತಿನಲ್ಲಿ ಶುಕ್ಲ ಯಜುರ್ಮಂತ್ರಗಳಿಗೆ 'ಆದಿತ್ಯಾನಿ' ಎಂಬ ಹೆಸರುಂಟು (6.4.3); ಅಲ್ಲದೆ ಸಂಹಿತೆಗೆ 'ವಾಜಸನೇಯೀ' ಎಂಬ ಹೆಸರು ಬಂದದ್ದು ಕೂಡ ಯಾಜ್ಞವಲ್ಕ್ಯ ವಾಜಸನೇಯ ಎಂಬ ಹೆಸರಿನಿಂದ ಎಂಬುದನ್ನು ಹೇಳಿದೆ.

ಯಜುರ್ವೇದದಂತೆ ಸಾಮವೇದವು ಕೂಡ ಯಜ್ಞಕರ್ಮಕ್ಕೆ ಸಂಬಂಧಪಟ್ಟಂತೆ ಸಂಗ್ರಹಿಸಲ್ಪಟ್ಟಿತು. ಒಂದು ವಿಶೇಷವೆಂದರೆ ಸಾಮವೇದವು ಸೋಮಯಾಗವೆಂಬ ವಿಶೇಷಯಾಗಕ್ಕೆ ಮಾತ್ರ ಸಂಬಂಧಸಿದೆ. ಅದರ ವಿಷಯದ ದೃಷ್ಟಿಯಿಂದ ಅದು ಋಗ್ವೇದಕ್ಕೆ ಸನ್ನಿಹಿತವಾಗಿದೆ. ಅದರಲ್ಲಿ ಬರುವ ಮಂತ್ರಗಳಲ್ಲಿ ಬಹುಭಾಗವನ್ನು ಋಗ್ವೇದದ ಎಂಟನೆ ಮತ್ತು ಒಂಬತ್ತನೆ ಮಂಡಲಗಳಿಂದ ತೆಗೆದುಕೊಳ್ಳಲಾಗಿದೆ. ಈ ಋಕ್‌ಗಳು ಸೋಮಯಾಗದಲ್ಲಿ ಉದ್ಗಾತೃವಿನ ಗಾನಕ್ಕಾಗಿ ಸಾಮಗಳ ರೂಪವನ್ನು ಧರಿಸಿವೆ. ಸಾಮವೇದದಲ್ಲಿ ಅರ್ಚಿಕಾ ಮತ್ತು ಉತ್ತರಾರ್ಚಿಕಾ ಎಂದು ಎರಡು ವಿಭಾಗಗಳಿವೆ. ಮೊದಲನೆ ಅರ್ಚಿಕಾದಲ್ಲಿ ಆರು ಪ್ರಪಾಠಕಗಳಿವೆ. ಒಂದೊಂದು ಪ್ರಪಾಠಕದಲ್ಲಿ ಹತ್ತು 'ದಶತ್' (ಹತ್ತು ಋಕ್‌ಗಳ ಸಮುದಾಯ)ಗಳಿವೆ. ಆರನೆ ಪ್ರಪಾಠಕದಲ್ಲಿ ಮಾತ್ರ ಒಂಬತ್ತು 'ದಶತ್'ಗಳಿವೆ.

ಉತ್ತರಾರ್ಚಿಕಾದಲ್ಲಿ ಎರಡರಿಂದ ಮೂರು ಖಂಡಗಳುಳ್ಳ ಒಂಬತ್ತು ಪ್ರಪಾಠಕಗಳಿವೆ. ಈ ಸಂಹಿತೆಯು ಕೌಥುಮಸ್ ಮತ್ತು ರಾಣಾಯನೀಯ ಎಂಬ ಎರಡು ಶಾಖೆಗಳ ಆವೃತ್ತಿಗಳು ಉಪಲಬ್ಧವಾಗಿದೆ. ಇವುಗಳಲ್ಲಿ ಕೌಥುಮಸ್ ಆವೃತ್ತಿಯು ಅಸಮಗ್ರವಾಗಿದೆ.

ಅಥರ್ವವೇದಕ್ಕೆ ಅಥರ್ವಾಂಗಿರಸವೆಂದು ಹಳೆಯ ಹೆಸರಿದೆ. ಇದು ಮಾಟ, ಮಂತ್ರ ತಂತ್ರಗಳ ಸಂಗ್ರಹವಾಗಿದೆ. ವಿಷಯದ ದೃಷ್ಟಿಯಿಂದ ಅದು ಋಗ್ವೇದದಷ್ಟೇ ಹಳೆಯದು. ಅದರಲ್ಲಿ ಮೊದಲನೆ ಗುಂಪಿಗೆ ಸೇರಿದ ಮಂತ್ರಗಳಿಗೆ 'ಭೈಷಜ್ಯಾನಿ' ಎಂಬ ಹೆಸರು. ಇವುಗಳಲ್ಲಿ ರೋಗಗಳು, ರೋಗಲಕ್ಷಣಗಳು, ಔಷಧಿಗಳು ಹಾಗೂ ನಿವಾರಕ ಮಂತ್ರಗಳು ಬರುತ್ತವೆ. ಇಲ್ಲಿ ಆಯುರ್ವೇದ ಶಾಸ್ತ್ರದ ಮೂಲವನ್ನು ಕಾಣಬಹುದು. 'ಆಯುಷ್ಯಾಣಿ' ಎಂಬ ಎರಡನೆ ಗುಂಪಿನ ಸೂಕ್ತಗಳು ದೀರ್ಘಾಯುಷ್ಯವನ್ನು ಕೋರುವ ಮಂತ್ರಗಳನ್ನು ಒಳಗೊಂಡಿವೆ. ಚೌಲಕರ್ಮ, ಉಪನಯನ ಮುಂತಾದ ಗೃಹ್ಯಕರ್ಮಗಳಲ್ಲಿ ಇವುಗಳ ಪ್ರಯೋಗವು ಕಂಡು ಬರುತ್ತವೆ, 'ಪೌಷ್ಟಿಕಾನಿ' ಎಂಬ ಸೂಕ್ತಗಳಲ್ಲಿ ಕೃಷಿಕ, ಕುರುಬ, ವರ್ತಕ ಮುಂತಾದವರ ಕಸುಬುಗಳಿಗೆ ಶ್ರೇಯಸ್ಸನ್ನು ಕೋರುವ ಮಂತ್ರಗಳಿವೆ. 'ಪ್ರಾಯಶ್ಚಿತ್ತಾನಿ' ಎಂಬ ಗುಂಪಿಗೆ ಸೇರಿದ ಸೂಕ್ತಗಳಲ್ಲಿ ಪಾಪಗಳಿಗೆ ಪ್ರಾಯಶ್ಚಿತ್ತಗಳನ್ನು ವಿಧಿಸಲಾಗಿದೆ. 'ಅಭಿಚಾರಿಕಾಣಿ' ಎಂಬ ಮಾಟ ಮಂತ್ರಗಳ ಸೂಕ್ತಗಳು, 'ರಾಜಕರ್ಮಾಣಿ' ಎಂಬ ರಾಜರ ಕೃತ್ಯಗಳಿಗೆ ಸಂಬಂಧಿಸಿದ ಸೂಕ್ತಗಳು ಮತ್ತು ಕಾಲ-ಪೃಥ್ವೀ-ರೋಹಿತ ಸೂಕ್ತಗಳು ಅಥರ್ವವೇದ ಸಂಹಿತೆಯಲ್ಲಿ ಬರುವ ಇತರ ಸೂಕ್ತಗಳು.

## 1.1.3.6 ಬ್ರಾಹ್ಮಣಗಳು

ಬ್ರಾಹ್ಮಣಗಳು ಯಜ್ಞಕರ್ಮದ ವಿವರಗಳನ್ನು ಕೊಡುವ ಗದ್ಯಗ್ರಂಥಗಳು. ಒಂದೊಂದು ವೇದದ ಶಾಖೆಯು ತನ್ನದೇ ಆದ ಬ್ರಾಹ್ಮಣವನ್ನು ಹೊಂದಿದ್ದಂತೆ ತಿಳಿದು ಬರುತ್ತದೆ. ಯಜ್ಞಕರ್ಮದ ಕ್ರಮವಾದ ಕ್ರಿಯೆಗಳನ್ನು ಮಾಡುವ ಬಗ್ಗೆ ನಿರ್ದೇಶಗಳು ಮತ್ತು ಆ ಕ್ರಿಯೆಗಳ, ದೇವತೆಗಳ ಹಾಗೂ ಪರಿಕರಗಳ ಮಹತ್ವದ ಬಗ್ಗೆ ವಿವರಣೆಗಳು ಬ್ರಾಹ್ಮಣಗಳಲ್ಲಿ ಬರುತ್ತವೆ. ಕರ್ಮದ ಬಗ್ಗೆ ನಿರ್ದೇಶಗಳಿಗೆ 'ವಿಧಿ'ಯೆಂದೂ, ವಿವರಣೆಗಳಿಗೆ 'ಅರ್ಥವಾದ'ವೆಂದೂ ಹೆಸರು. ಯಾವುದೇ ಶಾಖೆಗೆ ಸೇರಿದ್ದರೂ ಬ್ರಾಹ್ಮಣಗಳ ವಿಷಯಗಳು ಈ 'ವಿಧಿ' ಹಾಗೂ 'ಅರ್ಥವಾದ'ಗಳೇ ಆಗಿದ್ದು, ಮುಖ್ಯಾಂಶಗಳಲ್ಲಿ ಪರಸ್ಪರ ಸಾಮ್ಯವನ್ನು ಹೊಂದಿವೆ. 'ವಿಧಿ' ಮತ್ತು 'ಅರ್ಥವಾದ'ಗಳು ಹೇಗಿರುತ್ತವೆಯೆಂಬುದಕ್ಕೆ ಒಂದು ಉದಾಹರಣೆ : ಶತಪಥ ಬ್ರಾಹ್ಮಣದಲ್ಲಿ ಹುಣ್ಣಿಮೆ ಅಥವಾ ಅಮಾವಾಸ್ಯೆಗೆ ಹಿಂದಿನ ದಿನ ಕೈಕೊಳ್ಳಬೇಕಾದ ಉಪವಾಸದ

ಬಗ್ಗೆ ನಿಯಮಗಳು ಬರುತ್ತದೆ (1.1.1.1). ಆಹವನೀಯ ಮತ್ತು ಗಾರ್ಹಪತ್ಯ ಅಗ್ನಿಗಳ ನಡುವೆ ಪೂರ್ವಾಭಿಮುಖನಾಗಿ ನಿಂತು ಆಚಮನ ಮಾಡಬೇಕೆಂದು ಒಂದು 'ವಿಧಿ'. ಅಲ್ಲಿ ಒಂದು ಚರ್ಚೆ ಬರುತ್ತದೆ - ಉಪವಾಸ ಮಾಡಬೇಕೇ ಬೇಡವೇ ಎಂಬ ವಿಷಯದಲ್ಲಿ, ಸಾವಯಸನ ಪ್ರಕಾರ ಉಪವಾಸವನ್ನು ಮಾಡಲೇಬೇಕು; ಯಾಜ್ಞವಲ್ಕ್ಯರ ಪ್ರಕಾರ ಉಪವಾಸವನ್ನು ಮಾಡಬೇಕಾಗಿಲ್ಲ. ಅಲ್ಲಿ 'ಉಪವಸಥ' ಶಬ್ದದ ನಿಷ್ಪತ್ತಿಯು ಬಂದಿದೆ. ಉಪ + ವಸ್ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು 'ದೇವತೆಗಳು ಪೂಜಕನ ಮನೆಯಲ್ಲಿ ಅವನ ಅಥವಾ ಅಗ್ನಿಯ ಬಳಿಯಲ್ಲಿ ನೆಲೆಸಬೇಕು' ಎಂಬ ಅರ್ಥವನ್ನು ನೀಡುತ್ತದೆ.

ಇಂತಹ 'ವಿಧಿ' ಮತ್ತು 'ಅರ್ಥವಾದಗಳ' ಜೊತೆಗೆ ಕೆಲವು ಇತಿಹಾಸ, ಆಖ್ಯಾನ ಮತ್ತು ಪುರಾಣಗಳು ಬ್ರಾಹ್ಮಣಗಳಲ್ಲಿ ಬರುತ್ತದೆ, ಅವುಗಳಲ್ಲಿ ಕಥಾಂಶದ ಸ್ವಾರಸ್ಯದ ಜೊತೆಗೆ ನೈತಿಕ ಉಪದೇಶ ಹಾಗೂ ಅಂದಿನ ಸಾಮಾಜಿಕ ಸ್ಥಿತಿಯ ಬಗ್ಗೆ ಕೆಲವು ಸೂಚನೆಗಳು ದೊರೆಯುತ್ತವೆ. ಶತಪಥಬ್ರಾಹ್ಮಣ (9-5-1-10)ದಲ್ಲಿ ಬರುವ ಈ ನೈತಿಕ ಉಪದೇಶವನ್ನು ನೋಡಬಹುದು : "ಆರಂಭದಲ್ಲಿ ಅಸುರರು ಅಸತ್ಯ(ಮೋಸ)ದಿಂದ ದೇವತೆಗಳನ್ನು ಸೋಲಿಸಿದರು, ಅಂತಿಮವಾಗಿ ದೇವತೆಗಳೇ ಗೆದ್ದರು, ಅದರಂತೆಯೇ ಮನುಷ್ಯರು ಸತ್ಯವನ್ನು ನುಡಿದರೆ, ಮೊದಲಿಗೆ ತೊಂದರೆಗೀಡಾದರೂ, ಅಂತಿಮವಾಗಿ ಸುಖವನ್ನು ಪಡೆಯುತ್ತಾರೆ. ಸುಳ್ಳು ಹೇಳುವವರು ಕ್ಷಣದಲ್ಲಿ ಗೆದ್ದಂತೆ ತೋರಿದರೂ, ಅಂತಿಮವಾಗಿ ನಾಶವನ್ನು ಹೊಂದುತ್ತಾರೆ." ಅದೇ ಶತಪಥಬ್ರಾಹ್ಮಣದಲ್ಲಿ ಸೋಮಯಾಗದ ಸಂದರ್ಭದಲ್ಲಿ (4-4-2-13) ಅಗ್ನಿ ಪತ್ನೀವತ್‌ಗೆ ಒಂದು ಸೋಮತರ್ಪಣವಿದೆ. ಇದು ಬೇರೆ ಸೋಮದ ಅರ್ಪಣೆಗಳಿಗಿಂತ ಭಿನ್ನವಾಗಿದೆ. ಸ್ತ್ರೀಯರ ದೌರ್ಬಲ್ಯ ಮತ್ತು ಅಸಹಾಯಕತ್ವಗಳಿಗೆ ಸಂಬಂಧಿಸಿದಂತೆ ಅದರ ವಿಶೇಷತ್ವವನ್ನು ವಿವರಿಸಲಾಗಿದೆ.

ಆಖ್ಯಾನಗಳು 'ಅರ್ಥವಾದ' ಬಾಗದ ಅವಿಭಾಜ್ಯ ಅಂಗಗಳಾಗಿವೆ. ಯಾವುದೇ ಕರ್ಮವನ್ನು ಕುರಿತು ಅದನ್ನು ಏಕೆ ಮಾಡಬೇಕು ಎಂಬುದನ್ನು ವಿವರಿಸಲು ಆಖ್ಯಾನಗಳು ಬರುತ್ತವೆ. ಋಗ್ವೇದಕ್ಕೆ ಸೇರಿದ ಐತರೇಯಬ್ರಾಹ್ಮಣದಲ್ಲಿ (7-13-10) ಬರುವ ಶುನಃ ಶೇಪಾಖ್ಯಾನವು ಪ್ರಸಿದ್ಧವಾಗಿದೆ. ಅದರಂತೆಯೇ ಶುಕ್ಲಯಜುರ್ವೇದಕ್ಕೆ ಸೇರಿದ ಶತಪಥಬ್ರಾಹ್ಮಣದಲ್ಲಿ (11.5.1) ಪುರೂರವಸ್ ಮತ್ತು ಊರ್ವಶಿಯರ ಆಖ್ಯಾನವು ಕೂಡ ಪ್ರಸಿದ್ಧವಾಗಿದೆ. ಅದೇ ಬ್ರಾಹ್ಮಣದಲ್ಲಿ (1.8.1) ಮನು ಮತ್ತು ಮೀನುಗಳ ಆಖ್ಯಾನದಂತಹ ಸೃಷ್ಟಿವಿಷಯಕ ಆಖ್ಯಾನಗಳು ಮನೋಹರವಾಗಿದೆ. ಅದೇ ಬ್ರಾಹ್ಮಣದ 1.4.5.8-12ರಲ್ಲಿನ ಸೋಮಾಪಹರಣದ ಆಖ್ಯಾನವು ಹೃದಯಂಗಮವಾಗಿದೆ. ಅದರಲ್ಲಿ ಗಂಧರ್ವರು ಸೋಮವನ್ನು

ತಿಳಿಯುತ್ತಾರೆ. ವಾಕ್ ಅದನ್ನು ಮರಳಿ ತಂದು ಕೊಡುತ್ತದೆ. ಹೀಗೆ ಬ್ರಾಹ್ಮಣಗಳಲ್ಲಿ ಆಖ್ಯಾನಗಳು 'ಅರ್ಥವಾದ'ದ ಅಂಗವಾಗಿ ಬರುತ್ತವೆ.

## 1.1.3.7 ಅರಣ್ಯಕಗಳು

ಅರಣ್ಯಕಗಳು ಬ್ರಾಹ್ಮಣಗಳ ಮುಂದಿನ ಬೆಳವಣಿಗೆಗಳಾಗಿವೆ. ಅವು ಬ್ರಾಹ್ಮಣಗಳ ಅಂತಿಮ ಭಾಗಗಳಾಗಿವೆ. ದೇವತೆಗಳ ಸ್ವರೂಪದ ಬಗ್ಗೆ ಅವುಗಳಲ್ಲಿ ವಿಚಾರವು ಬರುತ್ತದೆ. ಅವು ಅರಣ್ಯದಲ್ಲಿ ನೆಲೆಸಿದ ವಾನಪ್ರಸ್ಥಾಶ್ರಮಿಗಳಿಗಾಗಿ ಇವೆ. ಯಜ್ಞಕರ್ಮಾಂಗಗಳ ವಿವರಣೆಗೆ ಮೀಸಲಾದ ಬ್ರಾಹ್ಮಣಗಳಿಗೂ ತಾತ್ತ್ವಿಕ ವಿಚಾರಗಳಿಗೆ ಮೀಸಲಾದ ಉಪನಿಷತ್ತುಗಳಿಗೂ ಮಧ್ಯೆ ಪರಿವರ್ತನದ ಹಂತಕ್ಕೆ ಸೇರಿದ ಗ್ರಂಥಗಳೇ ಅರಣ್ಯಕಗಳು. ಬ್ರಾಹ್ಮಣಗಳಿಗೂ ಉಪನಿಷತ್ತುಗಳಿಗೂ ಸೇತುವೆಯಾಗಿವೆ. ಯಜ್ಞಯಾಗಾದಿ ಕರ್ಮಗಳಲ್ಲಿ ತೊಡಗಿರದ ಅರಣ್ಯವಾಸಿಗಳ ಮಾರ್ಗದರ್ಶನಕ್ಕಾಗಿ ಇರುವ ಈ ಗ್ರಂಥಗಳು ದೇವತೆಗಳು ಹಾಗೂ ಯಜ್ಞಗಳ ತಾತ್ತ್ವಿಕ ಸ್ವರೂಪವನ್ನು ಕುರಿತು ವಿಚಾರ ಮಾಡುತ್ತವೆ. ಇಲ್ಲಿಯೇ ಮೊದಲು ಸಾಂಕೇತಿಕತ್ವದ ಆರಂಭವನ್ನು ಕಾಣುತ್ತೇವೆ. ಉದಾಹರಣೆಗೆ, ಸೂರ್ಯನು ಮೇಧಾಶಕ್ತಿಯ ಸಂಕೇತವಾಗಿದ್ದಾನೆ. ಅಗ್ನಿಯು ಇಚ್ಛೆಯನ್ನೂ ಸೋಮನು ಭಾವನೆಯನ್ನೂ ಅಶ್ವಮೇಧವು ತಪಸ್ಸನ್ನೂ ಅಶ್ವವು ವಿಶ್ವವನ್ನೂ ಸಂಕೇತಿಸುತ್ತದೆ. ಆರಣ್ಯಕಗಳಲ್ಲಿ ಬ್ರಾಹ್ಮಣಗಳ ವಿಚಾರಗಳೂ ಬರುತ್ತವೆ. ಉದಾಹರಣೆಗೆ ಐತರೇಯಾರಣ್ಯಕದಲ್ಲಿ ಐತರೇಯಬ್ರಾಹ್ಮಣದಲ್ಲಿರುವಂತೆ ಸೋಮಯಾಗಗಳ ವಿವರಣೆಯು ಬರುತ್ತದೆ. ಮೊದಲನೆ ಅಧ್ಯಾಯದಲ್ಲಿ ಹೀಗಿದ್ದರೆ, ಎರಡನೆ ಅಧ್ಯಾಯದಲ್ಲಿ ಉಪನಿಷತ್ತಿನ ವಿಷಯಕ್ಕೆ ಸನ್ನಿಹಿತವಾದ ಪ್ರಾಣ, ಪುರುಷ ಮುಂತಾದ ಶಬ್ದಗಳಿಂದ ವಾಚ್ಯನಾದ ವಿಶ್ವಾತ್ಮನ ಸ್ವರೂಪವು ನಿರೂಪಿಸಲ್ಪಟ್ಟಿದೆ, ಕೌಶೀತಕ್ಯಾರಣ್ಯಕದ ಮೊದಲನೆ ಎರಡು ಅಧ್ಯಾಯಗಳ ವಿಷಯವೂ ಹೀಗೆ ಇವೆ. ಈ ಉದಾಹರಣೆಗಳಿಂದ ಅರಣ್ಯಕಗಳು ಬ್ರಾಹ್ಮಣಗಳು ಹಾಗೂ ಉಪನಿಷತ್ತುಗಳ ಮಧ್ಯದ ಸೇತುವೆಯಂತೆ ಎಂಬುದು ಸಿದ್ಧವಾಗುತ್ತದೆ.

## 1.1.3.8 ಉಪನಿಷತ್ತುಗಳು

ಉಪನಿಷತ್ತುಗಳು ಸಾಮಾನ್ಯವಾಗಿ ಬ್ರಾಹ್ಮಣಗಳ ಭಾಗಗಳಾಗಿ ಬರುತ್ತವೆ. ಅವೇ ವೇದದ ಅಂತಿಮ ಭಾಗಗಳು. ಅವುಗಳಿಗೆ 'ವೇದಾಂತ'ವೆಂದು ಹೆಸರು. ಸಂಹಿತೆಗಳಿಂದ ಹಿಡಿದು ಉಪನಿಷತ್ತುಗಳವರಗಿನ ಬೆಳವಣಿಗೆಯಲ್ಲಿ ತತ್ತ್ವವಿಚಾರದ ಬೆಳವಣಿಗೆಯೂ ಅಡಕವಾಗಿದೆ. ಋಗ್ವೇದದ ನಾಸದೀಯಸೂಕ್ತ (10.129), ಪುರುಷಸೂಕ್ತ (10.90) ಮುಂತಾದ ಸೂಕ್ತಗಳಲ್ಲಿ

ಜಗತ್ತಿನ ಸೃಷ್ಟಿ ಮುಂತಾದ ತಾತ್ತ್ವಿಕ ವಿಚಾರಗಳಲ್ಲಿ ನೆಲೆಯಾಗಿದ್ದ ಅಭಿಪ್ರಾಯಗಳು ವ್ಯಕ್ತವಾಗಿದೆ. ದೇವತೆಗಳ ವಿಷಯದಲ್ಲಿ ಪೌರೋಹಿತ್ಯದ ಬಗ್ಗೆ ಸಂದೇಹಗಳು ಅಲ್ಲಲ್ಲಿ ವ್ಯಕ್ತವಾಗಿವೆ. ಇವುಗಳಲ್ಲಿ ಏಕದೇವತಾಸ್ವರೂಪ, ಅನೇಕತ್ವದಲ್ಲಿ ಏಕತ್ವವನ್ನು ಕಾಣುವ ಪ್ರಯತ್ನಗಳು ಸ್ಪಷ್ಟವಾಗಿವೆ. ಯಜುರ್‌ವೇದ ಮತ್ತು ಬೇರೆ ಬೇರೆ ಬ್ರಾಹ್ಮಣಗಳಲ್ಲಿ ಈ ಚಿಂತನೆಯ ಬೆಳವಣಿಗೆಯು ಕಂಡು ಬರುತ್ತವೆ. ಅವುಗಳ ಬೆಳವಣಿಗೆಗಳೇ ಆದರೂ ಉಪನಿಷತ್ತುಗಳು ಅವುಗಳಿಗಿಂತ ಭಿನ್ನವಾದ ದೃಷ್ಟಿಯನ್ನು, ಜೀವನೋದ್ದೇಶವನ್ನು ಮೂಡಿಸುತ್ತವೆ.

ಉಪನಿಷತ್ತುಗಳಲ್ಲಿ, ವಿಶೇಷವಾಗಿ ಹಳೆಯ ಉಪನಿಷತ್ತುಗಳಲ್ಲಿ ವಿಷಯದ ವೈವಿಧ್ಯವನ್ನು ಕಾಣುತ್ತೇವೆ. ಉದಾಹರಣೆಗೆ ಋಗ್ವೇದಕ್ಕೆ ಸೇರಿದ ಕೌಶೀತಕೀ ಉಪನಿಷತ್ತಿನಲ್ಲಿ ಆಧ್ಯಾತ್ಮಿಕ ಹಾಗೂ ಮನೋವೈಜ್ಞಾನಿಕ ಅಂಶಗಳು, ಪ್ರೇಮವಶೀಕರಣ ಮಂತ್ರಗಳು, ಮಕ್ಕಳ ಸಾವನ್ನು ತಡೆಯುವ ಮಂತ್ರಗಳು, ವೈರಿನಾಶಕ್ಕಾಗಿ ರಹಸ್ಯೋಪದೇಶಗಳು ಮುಂತಾಗಿ ಅನೇಕ ವಿಷಯಗಳು ಬರುತ್ತವೆ. ಛಾಂದೋಗ್ಯದಲ್ಲಿ ಕೂಡ ರೋಗನಿವಾರಕ ರಹಸ್ಯ ಮಂತ್ರಗಳು ಬರುತ್ತವೆ. ಆದರೆ ಕೆಲವು ಮೂಲಭೂತವಾದ ತಾತ್ತ್ವಿಕ ವಿಚಾರಗಳು ಎಲ್ಲಾ ಉಪನಿಷತ್ತುಗಳಿಗೆ ಸಮಾನವಾಗಿವೆ. ಬ್ರಹ್ಮ ಮತ್ತು ಆತ್ಮ ತತ್ತ್ವಗಳ ಬಗ್ಗೆ ಇದ್ದ ಪರಿಕಲ್ಪನೆಗಳಿಗೆ ಉಪನಿಷತ್ತುಗಳ ಮುಖ್ಯ ಭಾಗವು ಮೀಸಲಾಗಿದೆ. ಬ್ರಹ್ಮವೆಂದರೆ ವಿಶ್ವಚೈತನ್ಯ ; ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾದ ಬೃಹತ್ತತ್ತ್ವ. ಆತ್ಮನೆಂದರೆ ಪ್ರಾಣಿ ಚೈತನ್ಯ. ಈ ಎರಡು ಚೈತನ್ಯಗಳು ಮೂಲತಃ ಒಂದೇ ಎಂದು ಬೋಧಿಸುವುದೇ ಉಪನಿಷತ್ತುಗಳ ಅಂತಿಮ ಗುರಿ. ಈ ತತ್ತ್ವ ವಿಚಾರದ ಜೊತೆಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ನೈತಿಕ ಮೌಲ್ಯಗಳನ್ನೂ ಉಪನಿಷತ್ತುಗಳು ಬೋಧಿಸುತ್ತವೆ. ಉದಾಹರಣೆಗೆ, ಬೃಹದಾರಣ್ಯಕದಲ್ಲಿ (5.2.3) ಬರುವ 'ದ ದ ದ' ಎಂಬ ಶಬ್ದದ 'ದಾಮ್ಯತ, ದತ್ತ, ದಯಧ್ವಮ್' ಎಂಬ ಮಾರ್ಮಿಕ ಉಪದೇಶ, ತೈತ್ತಿರೀಯೋಪನಿಷತ್ತಿನ ಸ್ನಾತಕೋಪದೇಶ (1.11), ಮುಂಡಕದ 'ಸತ್ಯಮೇವ ಜಯತೇ ನಾನೃತಮ್' (3.6), ಮುಂತಾದ ಉಪದೇಶಗಳು ಮಾನವನನ್ನು ಮೇಲಕ್ಕೆತ್ತುವ, ದೈವತ್ವಕ್ಕೇರಿಸುವ ಶಕ್ತಿಯನ್ನು ಪಡೆದಿವೆ.

ಹೀಗೆ ವೈದಿಕ ವಾಙ್ಮಯದ ಸ್ಥೂಲವಾದಪರಿಚಯವನ್ನುಮಾಡಿಕೊಟ್ಟು, ಇಲ್ಲಿಂದ ಮುಂದೆ ಋಗ್ವೇದದ ಸಂಹಿತೆಯ ವಿಷಯದಲ್ಲಿ ವಿಶೇಷವಾದ ಪರಿಚಯವನ್ನು ಮಾಡಿಕೊಡಲಾಗುವುದು.

## 1.1.3.9 ಋಗ್ವೇದದ ಅಧ್ಯಯನದ ಪ್ರಾಮುಖ್ಯ

ಋಗ್ವೇದವು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನವಾದ ಉಪಲಬ್ಧ ಸಾಹಿತ್ಯಿಕ ಸ್ಮಾರಕ. ಅದರಲ್ಲಿ ಅತ್ಯಂತ ಪ್ರಾಚೀನ ಭಾರತೀಯ ಕಾವ್ಯದ ಮಾದರಿಗಳು ಅಡಕವಾಗಿವೆ. ಉಷಸ್ಸಿನ ವರ್ಣನೆ ಮತ್ತು ಸ್ತೋತ್ರ ರೂಪದಲ್ಲಿರುವ ಸೂಕ್ತಗಳಂತೂ ಕಾವ್ಯಸೌಂದರ್ಯದ ದೃಷ್ಟಿಯಿಂದ ಮನೋಹರವಾಗಿವೆ. ಎ.ಟಿ. ಎಂಬ್ರಿ (A.T. Embree; Indian Tradition, p.15), ಎಂಬ ವಿದ್ವಾಂಸರು ಇದನ್ನು ಗುರುತಿಸಿದ್ದಾರೆ. "ಉಷಃಕಾಲದ ಸೌಂದರ್ಯದ ವರ್ಣನೆಗಳು ಪ್ರಾಚೀನ ಭಾರತೀಯ ಜನಾಂಗಗಳ ನಿಸರ್ಗ ಪ್ರಜ್ಞೆಯನ್ನು ವ್ಯಕ್ತಗೊಳಿಸುತ್ತವೆ." (The descriptions of the beauty of early morning show the sensitivity of the ancient Indian people to the natural world). ಭಾರತೀಯ ತತ್ತ್ವ ಮೀಮಾಂಸೆಯ ಮೂಲವನ್ನು ಅದರಲ್ಲಿ ಗುರುತಿಸಬಹುದು. ಪುರುಷಸೂಕ್ತ, ಹಿರಣ್ಯಗರ್ಭಸೂಕ್ತ, ನಾಸದೀಯಸೂಕ್ತ ಮುಂತಾದವುಗಳನ್ನು ಈ ದೃಷ್ಟಿಯಿಂದ ನೋಡಬಹುದು. ಹೀಗೆ ಋಗ್ವೇದದಲ್ಲಿ ಕಾವ್ಯವೂ ಉಂಟು ತತ್ತ್ವಶಾಸ್ತ್ರವೂ ಉಂಟು. ಆದರೆ ಅದರ ಅಧ್ಯಯನದ ಮಹತ್ತ್ವ ಅಷ್ಟಕ್ಕೇ ಸೀಮಿತವೆಂದೇನೂ ಅರ್ಥವಲ್ಲ. ಅದರ ವಿಷಯಗಳಲ್ಲಿ ಇನ್ನೂ ಹೆಚ್ಚು ಮಹತ್ತ್ವದ ಅಂಶಗಳು ಅಡಕವಾಗಿವೆ.

ಋಗ್ವೇದವು ಭಾರತೀಯ ಜೀವನದ ಎಲ್ಲಾ ಮುಖಗಳ ಮೇಲೂ ತನ್ನ ಪ್ರಭಾವವನ್ನು ಮೂಡಿಸಿದೆ. ಧರ್ಮ, ತತ್ತ್ವಶಾಸ್ತ್ರ, ಅನುಭಾವ, ನೀತಿ, ಸಾಮಾಜಿಕ ಮೌಲ್ಯಗಳು ಮತ್ತು ಬಾಧ್ಯತೆಗಳು, ಮುಂತಾಗಿ ಯಾವುದೇ ಭಾಗವನ್ನು ಪರಿಶೀಲಿಸಿದರೂ ಅದಕ್ಕೆ ವೇದವು, ವಿಶೇಷವಾಗಿ ಋಗ್ವೇದವು ಆಧಾರವನ್ನು ಒದಗಿಸಿದೆ ಎಂದು ಕಂಡುಕೊಳ್ಳಬಹುದು. ಭಾರತೀಯ ಶಾಸ್ತ್ರಗಳಲ್ಲಿ ಯಾವುದರ ಅಧ್ಯಯನವಾದರೂ ಇರಲಿ, ಅದರ ಅಧ್ಯೇತೃವು ತಮ್ಮ ಶಾಸ್ತ್ರದ ಬುನಾದಿಯನ್ನು ಮೊದಲಿಗೆ ಋಗ್ವೇದದಲ್ಲಿಯೇ ಕಾಣಬೇಕು. ಇದು ಋಗ್ವೇದದ ಸರ್ವತೋಮುಖವಾದ ಪ್ರಾಶಸ್ತ್ಯ.

ಆರ್ಯ ಜನಾಂಗದ ಪ್ರಾಚೀನ ಇತಿಹಾಸವನ್ನು ತಿಳಿಯಲು ಇಚ್ಛಿಸಿದರೆ ಅದರ ಮೊದಲ ಮೂಲ ಆಕರವೆಂದರೆ ಋಗ್ವೇದವೇ. ಅದರಿಂದ ಆರ್ಯ ಜನಾಂಗದ ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯುತ್ತೇವೆ. ಆ ಆರ್ಯ ಜನಾಂಗದ ಮತ್ತು ಸಮಾಜದ ಮೂಲಭೂಮಿಯೆಂದರೆ 'ಯಜ್ಞ', ಧಾರ್ಮಿಕ ಸೂಕ್ತಗಳಲ್ಲಿನ ಭಾವನಾತ್ಮಕ ಅಭಿವ್ಯಕ್ತಿಗಳು ಆ 'ಯಜ್ಞ'ವನ್ನು ಸಚೇತನಗೊಳಿಸುತ್ತವೆ. ದಸ್ಯುಗಳು ಅಥವಾ ದಾಸರೊಂದಿಗಿನ ಅದರ ಸುದೀರ್ಘವಾದ ಯುದ್ಧದಿಂದ ಪ್ರೇರಿತವಾದ ಭಾವನೆಗಳೂ ಅಲ್ಲಲ್ಲಿ ದೇವತಾ ಸ್ತೋತ್ರಗಳಲ್ಲಿ ವಿಶೇಷವಾಗಿ ಇಂದ್ರಸೂಕ್ತಗಳಲ್ಲಿ ವ್ಯಕ್ತವಾಗಿವೆ. ಆ ದೀರ್ಘವಾದ ಯುದ್ಧವು ಕೊನೆಗೊಂಡ

ಮೇಲೆ ಸಾಮಾಜಿಕ ದೃಢತೆಯು ಆರ್ಯ ಜನಾಂಗದಲ್ಲಿ ಮೂಡಿತು. ಇದನ್ನೇ ಋಗ್ವೇದವು (10.190.3), 'ಧಾತಾ ಯಥಾಪೂರ್ವಮಕಲ್ಪಯತ್' ಎಂಬ ಮಾತಿನಲ್ಲಿ ಹೇಳಿರುವುದು.

ಯಜ್ಞಕ್ಕೆ ನೇರವಾದ ಸಂಬಂಧವಿಲ್ಲದ ಸೂಕ್ತಗಳೂ ಋಗ್ವೇದದಲ್ಲಿವೆ, ಇವುಗಳನ್ನೇ 'ಲೌಕಿಕ ಸೂಕ್ತಗಳು' (Secular hymns) ಎನ್ನುವುದು. ಈ ಸೂಕ್ತಗಳು ಪ್ರಾಚೀನ ಆರ್ಯ ಸಮಾಜದ ರೀತಿ-ರಿವಾಜುಗಳ ಮೇಲೆ, ಆಚಾರ-ವಿಚಾರಗಳ ಮೇಲೆ, ಅವರ ಸಾಂಪ್ರದಾಯಿಕ ಮದುವೆ, ಅಂತ್ಯಸಂಸ್ಕಾರ ಮುಂತಾದ ಆಚರಣೆಗಳ ಮೇಲೆ, ಆಟಗಳು ಹಾಗೂ ವಿನೋದಗಳ ಮೇಲೆ ಅಮೂಲ್ಯವಾದ ಬೆಳಕನ್ನು ಚೆಲ್ಲುತ್ತವೆ. ಅಂದಿನ ಸಮಾಜವು ಪಿತೃಪ್ರಧಾನ ಕೌಟುಂಬಿಕ ವ್ಯವಸ್ಥೆಯನ್ನು ಒಳಗೊಂಡಿದ್ದಂತೆ ಕಂಡುಬರುತ್ತದೆ. ಸ್ತ್ರೀಯರಿಗೂ ಎಲ್ಲಾ ಧಾರ್ಮಿಕ ಹಾಗೂ ಸಾಮಾಜಿಕ ಆಚರಣೆಗಳಲ್ಲಿ ಭಾಗವಹಿಸುವ ಹಕ್ಕಿತ್ತು. ದ್ಯೂತ, ದರೋಡೆ, ಮುಂತಾದ ಸಾಮಾಜಿಕ ವ್ಯಸನಗಳೂ ಅಂದು ಇದ್ದವು. ಪುರುಷಸೂಕ್ತದಲ್ಲಿ ತಿಳಿದು ಬರುವಂತೆ, ಅಂದಿನ ಸಮಾಜವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ವರ್ಣಗಳ ವ್ಯವಸ್ಥೆಗೆ ಒಳಪಟ್ಟಿತ್ತು.

ಮ್ಯಾಕ್ಸ್ ಮ್ಯುಲ್ಲರ (Max Mueller : India-What Can It Teach Us) ಎಂಬ ವಿದ್ವಾಂಸರು ಹೇಳುವಂತೆ ಋಗ್ವೇದದ ಅಧ್ಯಯನವು ಪ್ರಪಂಚದ ಪ್ರಾಚೀನ ಇತಿಹಾಸವನ್ನು ವಿಶದೀಕರಿಸಲು ಅತ್ಯಂತ ಮಹತ್ತ್ವದ್ದು. ಪ್ರಪಂಚದ ಇತಿಹಾಸದಲ್ಲಿ ವೇದವು, ವಿಶೇಷವಾಗಿ ಋಗ್ವೇದವು ಬೇರೆ ಯಾವುದೇ ಭಾಷೆಯ ಗ್ರಂಥಕ್ಕಿಂತ ಹೆಚ್ಚು ಪ್ರಾಚೀನಕಾಲದ ರಿಕ್ತತ್ವವನ್ನು ತುಂಬಿ ಕೊಡುತ್ತದೆ. ಅದು ನಮ್ಮನ್ನು ಯಾವುದೇ ಸಾಹಿತ್ಯಿಕ ಸ್ಮಾರಕಗಳಿಲ್ಲದ ಪ್ರಾಚೀನತಮ ಕಾಲಕ್ಕೆ ಕೊಂಡೊಯ್ಯುತ್ತವೆ.

ಋಗ್ವೇದದ ಅಧ್ಯಯನದ ಪರಿಣಾಮವಾಗಿಯೇ ಎರಡು ಆಧುನಿಕ ಅಧ್ಯಯನ ವಿಷಯಗಳು ಪ್ರಚಾರಕ್ಕೆ ಬಂದವು : ಒಂದು - ತೌಲನಿಕ ಪುರಾಣ ಶಾಸ್ತ್ರ (Comparative Mythology) ಮತ್ತು ಎರಡು - ತೌಲನಿಕ ಭಾಷಾಶಾಸ್ತ್ರ (Comparative Philology). ಇವುಗಳ ಅಧ್ಯಯನವು ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಆರಂಭವಾಯಿತು, ತೌಲನಿಕ ಪುರಾಣ-ಶಾಸ್ತ್ರದ ಅಧ್ಯಯನದ ಬಲದಿಂದ ಭಾರತೀಯ ದೇವತೆಗಳು ಹಾಗೂ ಇತರ ಪಾಶ್ಚಾತ್ಯ ದೇವತೆಗಳಿಗೆ ಇದ್ದ ಮೂಲ ಸಂಬಂಧವು ವ್ಯಕ್ತವಾಯಿತು. ಉದಾಹರಣೆಗೆ ಫ್ರೆಂಚ್ ಫಾರ್ಸ್-ಫಾರ್‌ಚುನಾ (Fors-Fortuna) ಎಂಬ ದೇವತೆಯು ಭಾರತೀಯ ಉಷಸ್ ದೇವತೆಯ ಆವಿರ್ಭಾವವಾಗಿದೆ ಎಂದು ಗೊತ್ತಾಗಿದೆ. ತೌಲನಿಕ ಭಾಷಾ ಶಾಸ್ತ್ರದ ಅಧ್ಯಯನದಿಂದ ಪ್ರಪಂಚದ ಭಾಷೆಗಳ ಪರಸ್ಪರ ಸಂಬಂಧ, ಕುಟುಂಬ ಸ್ವರೂಪ ಮುಂತಾದವುಗಳು ವ್ಯಕ್ತವಾಗುತ್ತವೆ. ಉದಾಹರಣೆಗೆ, ಪ್ರಪಂಚದ ಪ್ರಾಚೀನ ಭಾಷೆಗಳಾದ

ಸಂಸ್ಕೃತ, ಗ್ರೀಕ್, ಲ್ಯಾಟಿನ್, ಇರಾನಿಯನ್ ಮುಂತಾದ ಭಾಷೆಗಳು ಹಿಂದೂ-ಐರೋಪ್ಯ (Indo-European) ಎಂದು ಕರೆಯಲಾಗುವ ಒಂದೇ ಕುಟುಂಬಕ್ಕೆ ಸೇರಿದವುಗಳು ಎಂಬುದು ಸಿದ್ಧವಾಗಿದೆ.

## 1.1.3.10 ಋಗ್ವೇದದ ಸೂಕ್ತಗಳ ವ್ಯವಸ್ಥೆ

ಋಗ್ವೇದದಲ್ಲಿ ಒಟ್ಟು 1028 ಸೂಕ್ತಗಳಿವೆ. ಇವುಗಳಲ್ಲಿ ಎಂಟನೇ ಮಂಡಲದ ಮಧ್ಯದಲ್ಲಿ ಬರುವ 11 ವಾಲಖಿಲ್ಯ ಸೂಕ್ತಗಳೆಂಬ ಖಿಲಸೂಕ್ತಗಳು ಕೂಡ ಸೇರಿವೆ. ಈ ಸೂಕ್ತಗಳಲ್ಲಿ ಒಂದೇ ಒಂದು ಮಂತ್ರವಿರುವ ಸೂಕ್ತದಿಂದ ಹಿಡಿದು 58 ಮಂತ್ರಗಳಷ್ಟಿರುವ ದೀರ್ಘ ಸೂಕ್ತಗಳವರೆಗೆ ವಿಸ್ತಾರವನ್ನು ಕಾಣುತ್ತೇವೆ. ಈ ಸೂಕ್ತಗಳನ್ನು ಕೆಲವು ಆಧಾರಗಳ ನೆಲೆಯನ್ನಿಟ್ಟುಕೊಂಡು ವ್ಯವಸ್ಥಿತಗೊಳಿಸಲಾಗಿದೆ.

ಈ ವ್ಯವಸ್ಥೆಯ ಎರಡು ಆಧಾರಗಳನ್ನು ಕಾಣುತ್ತೇವೆ. ಮೊದಲನೆಯದು ಮಂಡಲ ಮತ್ತು ಸೂಕ್ತಗಳ ಆಧಾರ, ಎರಡನೆಯದು ಅಷ್ಟಕ, ಅಧ್ಯಾಯ ಮತ್ತು ವರ್ಗಗಳ ಆಧಾರ. ಈ ಎರಡನೆಯ ಆಧಾರದಂತೆ ಮಾಡಿಕೊಂಡ ವ್ಯವಸ್ಥೆಯು ಅನಂತರದ್ದು ಮತ್ತು ವೇದ ವಿದ್ಯಾರ್ಥಿಗಳ ಅಧ್ಯಯನದ ಸೌಕರ್ಯಕ್ಕಾಗಿ ಮಾಡಿಕೊಂಡದ್ದು. ಅಷ್ಟಕ ಎಂದರೆ ಎಂಟು ಅಧ್ಯಾಯಗಳ ಸಮುದಾಯ. ಇದರಂತೆ ಋಗ್ವೇದವು ಎಂಟು ಅಷ್ಟಕಗಳಲ್ಲಿ ವಿಭಕ್ತವಾಗಿದೆ. ಅಂದರೆ ಅದರಲ್ಲಿ ಒಟ್ಟು 64 ಅಧ್ಯಾಯಗಳಿವೆ ಎಂದ ಹಾಗಾಯಿತು. ಒಂದೊಂದು ಅಧ್ಯಾಯದಲ್ಲಿ ಅನೇಕ ವರ್ಗಗಳಿವೆ. ಒಂದು ವರ್ಗವೆಂದರೆ ಐದು ಅಥವಾ ಆರು ಮಂತ್ರಗಳ ಒಂದು ಸಮೂಹ. ಈ ವ್ಯವಸ್ಥೆಗಿಂತ ಪ್ರಾಚೀನವಾದ ವ್ಯವಸ್ಥೆಯು ಮಂಡಲ ಮತ್ತು ಸೂಕ್ತಗಳ ಆಧಾರದಿಂದ ಮಾಡಲ್ಪಟ್ಟಿದೆ. ಈ ವ್ಯವಸ್ಥೆಯಂತೆ ಋಗ್ವೇದದಲ್ಲಿ ಒಟ್ಟು ಹತ್ತು ಮಂಡಲಗಳಿವೆ. 43 ಸೂಕ್ತಗಳಿಂದ ಹಿಡಿದು 191 ಸೂಕ್ತಗಳವರೆಗಿನ ಸಂಖ್ಯೆಯ ಸೂಕ್ತಗಳನ್ನು ಆ ಮಂಡಲಗಳಲ್ಲಿ ಕಾಣುತ್ತೇವೆ. ಒಂದನೆ ಮತ್ತು ಹತ್ತನೆ ಮಂಡಲಗಳಲ್ಲಿ ಒಂದೇ ಸಂಖ್ಯೆಯ, ಅಂದರೆ 191, ಸೂಕ್ತಗಳಿವೆ. ಈ ವ್ಯವಸ್ಥೆಯನ್ನೇ ವೇದದ ಅಧ್ಯಯನ ಮಾಡುವವರು, ಉಲ್ಲೇಖಗಳನ್ನು ಕೊಡುವಾಗ ಅನುಸರಿಸುತ್ತಾರೆ. ಈ ವ್ಯವಸ್ಥೆಯ ಬಗ್ಗೆ ಕೆಲವು ಮುಖ್ಯ ವಿಷಯಗಳನ್ನು ತಿಳಿದುಕೊಳ್ಳಬೇಕು.

ಹತ್ತು ಮಂಡಲಗಳಲ್ಲಿ ಎರಡನೆಯದರಿಂದ ಐದನೆಯದವರೆಗಿನ ಆರು ಮಂಡಲಗಳು ಏಕಸ್ವರೂಪವುಳ್ಳವುಗಳು. ಇವುಗಳ ವ್ಯವಸ್ಥೆಯಲ್ಲಿ ಒಂದೇ ಬಗೆಯ ನಿಯಮವನ್ನು ಅನುಸರಿಸಲಾಗಿದೆ. ಈ ಆರು ಮಂಡಲಗಳು ಒಂದೊಂದೂ ಒಂದು ಋಷಿವಂಶಕ್ಕೆ ಸೇರಿದ

ಸೂಕ್ತಗಳನ್ನು ಒಳಗೊಂಡಿವೆ. ಇವು ಕ್ರಮವಾಗಿ ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ, ಭರದ್ವಾಜ ಮತ್ತು ವಸಿಷ್ಠ ವಂಶಗಳ ಮಂಡಲಗಳು. ಇವುಗಳಲ್ಲಿ ಒಂದೊಂದು ಮಂಡಲದಲ್ಲೂ ಮೊದಲ ಗುಂಪಿನ ಸೂಕ್ತಗಳು ಅಗ್ನಿಗೂ, ಎರಡನೆ ಗುಂಪಿನ ಸೂಕ್ತಗಳು ಇಂದ್ರನಿಗೂ, ಉಳಿದವು ಮಿಕ್ಕ ದೇವತೆಗಳಿಗೂ ಮೀಸಲಾಗಿವೆ. ಒಂದೊಂದು ದೇವತೆಗೂ ಮೀಸಲಾದ ಸೂಕ್ತಗಳ ವ್ಯವಸ್ಥೆಯ ಕ್ರಮವೂ ಕೂಡ ಹೆಚ್ಚಿನ ಸಂಖ್ಯೆಯ ಮಂತ್ರಗಳುಳ್ಳ ಸೂಕ್ತ ಮೊದಲು ಅನಂತರ ಅದಕ್ಕಿಂತ ಕಡಿಮೆ ಮಂತ್ರಗಳುಳ್ಳ ಸೂಕ್ತವು ಬರಬೇಕೆಂಬ ನಿಯಮವನ್ನು ಅನುಸರಿಸಿದೆ. ಉದಾಹರಣೆಗೆ ಎರಡನೆ ಮಂಡಲದ ಮೊದಲ ಗುಂಪಿನ ಅಗ್ನಿ ಸೂಕ್ತಗಳಲ್ಲಿ ಮೊದಲನೆಯ ಸೂಕ್ತದಲ್ಲಿ ಹದಿನಾರು ಮಂತ್ರಗಳಿವೆ ; ಸೂಕ್ತಕ್ಕೂ ಸೂಕ್ತಕ್ಕೂ ಮಂತ್ರಗಳು ಕಡಿಮೆಯಾಗುತ್ತಾ ಹೋಗುತ್ತವೆ; ಅಂತಿಮ ಸೂಕ್ತದಲ್ಲಿ ಆರು ಮಂತ್ರಗಳಿವೆ. ಈ ಆರು ವಂಶೀಯ ಮಂಡಲಗಳ ಕ್ರಮವೂ ಕೂಡ ಸೂಕ್ತಗಳ ಸಂಖ್ಯೆಯನ್ನು ಅನುಸರಿಸಿದೆ. ಕಡಿಮೆ ಸೂಕ್ತಗಳುಳ್ಳ ಮಂಡಲ ಮೊದಲು ಹೆಚ್ಚಿನ ಸೂಕ್ತಗಳುಳ್ಳ ಮಂಡಲ ಅನಂತರ ಎಂಬ ನಿಯಮವನ್ನು ಇಲ್ಲಿ ಅನುಸರಿಸಲಾಗಿದೆ. ಹೀಗೆ ಎರಡನೆ ಮಂಡಲದಲ್ಲಿ 43 ಸೂಕ್ತಗಳೂ, ಮೂರನೆ ಮಂಡಲದಲ್ಲಿ 64 ಸೂಕ್ತಗಳೂ, ಆರನೆ ಮಂಡಲದಲ್ಲಿ 75 ಸೂಕ್ತಗಳೂ ಮತ್ತು ಏಳನೆ ಮಂಡಲದಲ್ಲಿ 104 ಸೂಕ್ತಗಳು ಇವೆ.

ಮೊದಲನೆ, ಎಂಟನೆ ಮತ್ತು ಹತ್ತನೆ ಮಂಡಲಗಳು ಸೂಕ್ತ ವ್ಯವಸ್ಥೆಯಲ್ಲಿ ಭಿನ್ನ ಭಿನ್ನ ಕ್ರಮವನ್ನು ಅನುಸರಿಸುತ್ತವ. ಇವುಗಳನ್ನು ವಂಶೀಯ ಮಂಡಲಗಳೆಂದು ಕರೆಯುವಂತಿಲ್ಲ. ಬೇರೆ ಬೇರೆ ವಂಶಗಳಿಗೆ ಸೇರಿದ ಋಷಿಗಳ ಸೂಕ್ತಗಳು ಇವುಗಳಲ್ಲಿ ಸಂಗ್ರಹಿತವಾಗಿವೆ. ಮೊದಲನೆ ಮಂಡಲದ ಮೊದಲ 50 ಸೂಕ್ತಗಳು ಬೇರೆ ಬೇರೆ ಋಷಿಗಳಿಗೆ ಸೇರಿದವುಗಳು. ಇವುಗಳಲ್ಲಿ ಕಾಣ್ವರಿಗೆ ಸೇರಿದ ಸೂಕ್ತಗಳು ಹೆಚ್ಚು. ಅದೇ ಮಂಡಲದ ಮುಂದಿನ ಭಾಗದಲ್ಲಿ ಒಂಬತ್ತು ಗುಂಪಿನ ಸೂಕ್ತಗಳಿವೆ. ಒಂದೊಂದು ಗುಂಪಿನ ಸೂಕ್ತಗಳು ಒಬ್ಬೊಬ್ಬ ಋಷಿಗೆ ಸೇರಿದವುಗಳು. ಎಂಟನೆ ಮಂಡಲದಲ್ಲಿ ಕೂಡ, ಮೊದಲನೆ ಮಂಡಲದ ಮೊದಲ ಭಾಗದಲ್ಲಿಯ ಹಾಗೆ, ಕಾಣ್ವರಿಗೆ ಸೇರಿದ ಸೂಕ್ತಗಳೇ ಹೆಚ್ಚು. ಇದರಿಂದ ಅದು ವಂಶೀಯ ಮಂಡಲಗಳಂತೆ ಕಂಡರೂ, ಅಗ್ನಿಸೂಕ್ತಗಳಿಂದ ಆರಂಭವಾಗದಿರುವುದರಿಂದ ಅದು ವಂಶೀಯ ಮಂಡಲಗಳಿಗಿಂತ ಭಿನ್ನವಾಗಿವೆ. ಹತ್ತನೆ ಮಂಡಲದ ಸೂಕ್ತಗಳು ಬೇರೆ ಬೇರೆ ವಂಶದ ಋಷಿಗಳಿಗೆ ಸೇರಿದವುಗಳು. ಬೇರೆ ಮಂಡಲಗಳಲ್ಲಿ ಪರಿಚಿತರಾದ ಋಷಿಗಳಲ್ಲಿ ಅನೇಕರು ಈ ಮಂಡಲದ ಸೂಕ್ತಗಳ ದ್ರಷ್ಟಾರರಾಗಿದ್ದಾರೆ.

ಒಂಬತ್ತನೆ ಮಂಡಲವು ಬೇರೆಲ್ಲ ಮಂಡಲಗಳಿಗಿಂತ ಭಿನ್ನವಾಗಿದೆ, ಒಂದೇ ದೇವತೆಗೆ, ಅಂದರೆ ಪವಮಾನ ಸೋಮನಿಗೆ, ಮೀಸಲಾದ ಸೂಕ್ತಗಳನ್ನು ಒಳಗೊಂಡಿರುವುದೇ ಅದರ

ವೈಶಿಷ್ಟ್ಯ. ಈ ಸೂಕ್ತಗಳ ದ್ರಷ್ಟಾರರು ವಂಶೀಯ ಮಂಡಲಗಳ ಋಷಿಗಳೇ ಆಗಿದ್ದಾರೆ. ವಂಶೀಯ ಮಂಡಲಗಳಲ್ಲಿ ಪವಮಾನ ಸೋಮನಿಗೆ ಸಂಬಂಧಿಸಿದ ಒಂದು ಸೂಕ್ತವೂ ಕೂಡ ಬಂದಿಲ್ಲ. ಮೊದಲನೆ ಹಾಗೂ ಎಂಟನೆ ಮಂಡಲಗಳಲ್ಲಿ ಒಟ್ಟು ಮೂರು ಸೂಕ್ತಗಳು ಮಾತ್ರ ಪವಮಾನ ಸೋಮನಿಗೆ ಸಂಬಂಧಿಸಿವೆ. ಇದರಿಂದ ಒಂದರಿಂದ ಎಂಟರವರೆಗಿನ ಮಂಡಲಗಳಲ್ಲಿನ ಪವಮಾನ ಸೋಮ ಸೂಕ್ತಗಳನ್ನು ಅವುಗಳಿಂದ ಬೇರ್ಪಡಿಸಿ ಉದ್ಗಾತೃವಿನ ಉಪಯೋಗಕ್ಕಾಗಿ ಒಂದೇ ಮಂಡಲದಲ್ಲಿ ಸಂಗ್ರಹಿಸಲಾಗಿದೆ ಎಂದು ವ್ಯಕ್ತವಾಗುತ್ತದೆ. ಮಿಕ್ಕೆಲ್ಲಾ ಸೂಕ್ತಗಳು ಹೋತೃವಿಗೆ ಬೇಕಾದವುಗಳು.

ಈ ಮಂಡಲ ವ್ಯವಸ್ಥೆಯನ್ನು ಪರಿಶೀಲಿಸಿದ ಆಧುನಿಕ ವಿದ್ವಾಂಸರು ಎರಡನೆ ಮಂಡಲದಿಂದ ಏಳನೆ ಮಂಡಲದವರೆಗಿನ ಆರು ವಂಶೀಯ ಮಂಡಲಗಳ ವ್ಯವಸ್ಥೆಯಲ್ಲಿನ ಸಾಮ್ಯವನ್ನು ಆಧರಿಸಿ ಅವೇ ಋಗ್ವೇದದ ಮೂಲಭಾಗವೆಂದು ನಿರ್ಧರಿಸುತ್ತಾರೆ. ಈ ಭಾಗಕ್ಕೆ ಇತರ ಮಂಡಲಗಳ ಭಾಗಗಳು ಸೇರಿಕೊಂಡವು ಎಂದು ಅವರ ಅಭಿಪ್ರಾಯ. ಮೊದಲನೆ ಮಂಡಲದಲ್ಲಿ ಒಂಬತ್ತು ಗುಂಪುಗಳಾಗಿರುವ ಎರಡನೆ ಭಾಗದ ಸೂಕ್ತಗಳು ವಂಶೀಯ ಮಂಡಲಗಳ ವ್ಯವಸ್ಥೆಯನ್ನು ಸ್ಮರಣೆಗೆ ತರುವುದರಿಂದ ಅವುಗಳನ್ನೇ ಮೂಲಭಾಗಕ್ಕೆ ಮೊದಲು ಸೇರಿಸಿರಬೇಕು. ಕಾಣ್ವರಿಗೆ ಸೇರಿದ ಸೂಕ್ತಗಳ ಆಧಿಕ್ಯವಿರುವ ಎಂಟನೆ ಮಂಡಲವು ಅನಂತರ ಸೇರಿರಬೇಕು. ಅದರ ಅನಂತರ ಅದರಂತೆ ಕಾಣ್ವರ ಸೂಕ್ತಗಳ ಆಧಿಕ್ಯವುಳ್ಳ ಒಂದನೇ ಮಂಡಲದ ಮೊದಲ ಭಾಗವಾದ 50 ಸೂಕ್ತಗಳ ಸಮುದಾಯವು ಸೇರಿಸಲ್ಪಟ್ಟಿತು. ಅನಂತರ ಎಲ್ಲಾ ಮಂಡಲಗಳ ಪವಮಾನ ಸೋಮ ಸೂಕ್ತಗಳ ಸಂಗ್ರಹವಾಗಿ ಒಂಬತ್ತನೆ ಮಂಡಲವನ್ನು ಸೇರಿಸಿರಬೇಕು. ಕಡೆಯದಾಗಿ ಹತ್ತನೆ ಮಂಡಲದ ಸೇರ್ಪಡೆಯಾಗಿರಬೇಕು. ಹೀಗೆ ಭಾಷೆ ಮತ್ತು ವಿಷಯಗಳ ಆಧಾರದ ಮೇಲೆ ಋಗ್ವೇದದ ಮಂಡಲಗಳು ಬೇರೆಬೇರೆ ಕಾಲದಲ್ಲಿ ಸಂಗೃಹೀತವಾದವುಗಳು ಎಂದು ಹೇಳುತ್ತಾರೆ. ಆದರೆ ಈ ನಿರ್ಣಯಗಳು ವಿವಾದಾತೀತವೆಂದು ಬಗೆಯುವಂತಿಲ್ಲ.

## 1.1.3.11 ಋಗ್ವೇದದ ವಿಷಯವೈವಿಧ್ಯ

ಋಗ್ವೇದದಲ್ಲಿನ ಹೆಚ್ಚಿನ ಸೂಕ್ತಗಳು, ಯಜ್ಞದ ಮೂಲಕ ದೇವತೆಗಳ ಪೂಜೆಗೆ ಸಂಬಂಧಿಸಿವೆ. ಕೆಲವು ಸೂಕ್ತಗಳಲ್ಲಿ ಮದುವೆ, ಅಂತ್ಯಸಂಸ್ಕಾರ, ಕ್ರೀಡೆ, ದ್ಯೂತ ಮುಂತಾದ ಲೌಕಿಕ ವಿಷಯಗಳು ಬರುತ್ತವೆ. ಮತ್ತೆ ಕೆಲವು ಸೂಕ್ತಗಳಲ್ಲಿ ವಿಶ್ವಸೃಷ್ಟಿ ಮತ್ತು ಆಧ್ಯಾತ್ಮ ವಿಷಯಗಳು ನಿರೂಪಿತವಾಗಿವೆ. ಇವುಗಳನ್ನೆಲ್ಲ ಗಮನಿಸಿ ಋಗ್ವೇದದ ಸೂಕ್ತಗಳನ್ನು

ವರ್ಗೀಕರಿಸಲು ಪ್ರಯತ್ನಿಸಿದರೆ, ಅವುಗಳನ್ನು ಮೂರು ಬಗೆಯ ವರ್ಗೀಕರಣಕ್ಕೆ ಒಳಪಡಿಸಬಹುದು. (1) ಧಾರ್ಮಿಕ ಸೂಕ್ತಗಳು; (2) ಲೌಕಿಕ ಸೂಕ್ತಗಳು ಮತ್ತು 30 ವಿಶ್ವಸೃಷ್ಟಿ ಮತ್ತು ಆಧ್ಯಾತ್ಮದ ಸೂಕ್ತಗಳು (ತತ್ತ್ವಶಾಸ್ತ್ರೀಯ ಸೂಕ್ತಗಳು) - ಎಂದೂ ಸೂಕ್ತಗಳನ್ನು ವಿಭಾಗಿಸಬಹುದು.

1) **ಧಾರ್ಮಿಕ ಸೂಕ್ತ**ಗಳೇ ಋಗ್ವೇದದಲ್ಲಿ ಅಧಿಕ ಸಂಖ್ಯೆಯಲ್ಲಿವೆ. ಅವುಗಳದೇ ಅದರಲ್ಲಿ ಪ್ರಧಾನ ಭಾಗ. ಅವು ಯಜ್ಞಕರ್ಮಾಂಗವಾಗಿ ಬರುವ, ವಿನಿಯೋಗವುಳ್ಳ ಸೂಕ್ತಗಳು. ಅವುಗಳಲ್ಲಿ ಸೋಮರಸವನ್ನೋ, ತುಪ್ಪವನ್ನೋ ಹವಿಸ್ಸಾಗಿ ಅರ್ಪಿಸುವಾಗ ಪ್ರಯೋಗಿಸಲ್ಪಡುವ, ಯಜ್ಞಕರ್ಮೋಪಯುಕ್ತವಾದ ದೇವತಾಸ್ತೋತ್ರರೂಪದ ಮಂತ್ರಗಳಿವೆ. ಈ ಸೂಕ್ತಗಳು ಸಾಮಾನ್ಯವಾಗಿ ದೇವತೆಗಳನ್ನು ಕುರಿತು ಮುಂದಿಡುವ ಗೋವುಗಳು, ಲೌಕಿಕ ಸಂಪತ್ತು, ಪುತ್ರಪೌತ್ರಾದಿ ಫಲ, ದೀರ್ಘಾಯುಷ್ಯ ಮುಂತಾದವುಗಳ ಬೇಡಿಕೆಗಳನ್ನು ಒಳಗೊಂಡಿರುತ್ತವೆ. ಅನೇಕ ದೇವತೆಗಳ ಸ್ತೋತ್ರಗಳು ಈ ಸೂಕ್ತಗಳಲ್ಲಿ ಕಂಡುಬರುವುದರಿಂದ ಋಗ್ವೇದದ ಧರ್ಮವು ಬಹುದೇವತೋಪಾಸನಾತ್ಮಕ (Polytheism)ವೆಂದು ಮೊದಲ ನೋಟಕ್ಕೆ ಅನಿಸಿದರೂ, ಕೆಲವು ಸೂಕ್ತಗಳಲ್ಲಿ ಏಕದೇವೋಪಾಸನಾತ್ಮಕ (Monotheism) ಭಾವನೆಯು ವ್ಯಕ್ತವಾಗುವುದರಿಂದ ಋಗ್ವೇದದ ಧರ್ಮದ ಸ್ವರೂಪವೆಂದರೆ, ಒಬ್ಬನೇ ಪರಮಾತ್ಮನ ಕಲ್ಪನೆ ಮತ್ತು ಅವನ ವಿವಿಧ ಶಕ್ತಿಗಳ ವಿವಿಧ ರೂಪಗಳ ಪೂಜೆಯೇ ಅನೇಕ ದೇವತೆಗಳ ಪೂಜೆ ಎಂದು ತಿಳಿಯಬೇಕು.

2) **ಲೌಕಿಕ ಸೂಕ್ತ**ಗಳು ಎಂಬ ಹೆಸರನ್ನು ಋಗ್ವೇದದಲ್ಲಿನ ಮೂವತ್ತು ಮೂವತ್ತೈದರಷ್ಟು ಸೂಕ್ತಗಳಿಗೆ ಅನ್ವಯಿಸಬಹುದು. ಅವುಗಳಲ್ಲಿ ಲೌಕಿಕ ವಿಷಯಗಳಾದ ಮದುವೆ, ಅಂತ್ಯಸಂಸ್ಕಾರ, ಸಾಹಿತ್ಯಿಕ ಪ್ರವೃತ್ತಿ, ಕ್ರೀಡೆ, ವಿನೋದ, ಹವ್ಯಾಸ ಮುಂತಾದವುಗಳ ಬಗ್ಗೆ ಅಮೂಲ್ಯವಾದ ವಿಚಾರಗಳು ಮೂಡಿಬಂದಿವೆ. ಸೂರ್ಯಾಸೂಕ್ತ (10.85)ವೆಂಬ ವಿವಾಹವಿಷಯಕ ಸೂಕ್ತವು ಪ್ರಸಿದ್ಧವಾಗಿದೆ. ಅದರಲ್ಲಿ ಸೋಮ ಮತ್ತು ಸೂರ್ಯಾರ ಮದುವೆಯ ವರ್ಣನೆಯ ಮೂಲಕ ವಿವಾಹಕರ್ಮದ ಅಂಗವಾಗಿ ಬರುವ ಕ್ರಿಯೆಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಅದರ ಮಂತ್ರಗಳು ಇಂದಿಗೂ ಭಾರತೀಯ ವಿವಾಹಗಳಲ್ಲಿ ಪ್ರಯೋಗಿಸಲ್ಪಡುತ್ತವೆ. ಇನ್ನು ಅಂತ್ಯಸಂಸ್ಕಾರಕ್ಕೆ ಸಂಬಂಧಿಸಿದಂತೆ ಒಟ್ಟು ಐದು ಸೂಕ್ತಗಳು (10.14-18) ಉಪಲಬ್ಧವಾಗಿವೆ. ಅವುಗಳಿಂದ ದೊರೆಯುವ ಸೂಚನೆಗಳ ಪ್ರಕಾರ ಪ್ರಾಚೀನ ಕಾಲದಲ್ಲಿ ದಹನ ಮತ್ತು ಖನನ ರೂಪದ ಎರಡೂ ರೀತಿಯ ಅಂತ್ಯಸಂಸ್ಕಾರ ಪದ್ಧತಿಗಳು ಪ್ರಚಲಿತವಾಗಿದ್ದವು ಎಂದು ತಿಳಿದುಬರುತ್ತದೆ. ಅಂತೆಯೇ ವಿಧವಾವಿವಾಹ ಪದ್ಧತಿಯು ಅಂದಿನ ಸಮಾಜದಲ್ಲಿ ರೂಢಮೂಲವಾಗಿತ್ತು ಎಂಬುದೂ ತಿಳಿದುಬರುತ್ತದೆ.

ಪ್ರಾಚೀನ ಸಮಾಜದ ಸಾಹಿತ್ಯಿಕ ಪ್ರವೃತ್ತಿಗಳನ್ನು ಅರಿಯಲು ಋಗ್ವೇದದ ಸಂವಾದ ಸೂಕ್ತಗಳನ್ನು ನೋಡಬೇಕು. ಪುರೂರವಸ್ ಮತ್ತು ಉರ್ವಶಿ (10.95), ಯಮ ಮತ್ತು ಯಮಿ (10.10), ವಿಶ್ವಾಮಿತ್ರ ಮತ್ತು ನದಿಗಳು (3-33), ಇಂದ್ರ, ಅದಿತಿ ಮತ್ತು ವಾಮದೇವ (4.18), ಮುಂತಾದ ಸಂವಾದ ಸೂಕ್ತಗಳು ಮನೋಹರವಾಗಿವೆ. ಇವುಗಳನ್ನು ಎಚ್. ಒಲ್ಡನ್‌ಬರ್ಗ್ (H. Oldenberg) ಅವರು 'ಆಖ್ಯಾನ ಸೂಕ್ತಗಳು' ಎಂದು ಕರೆಯುತ್ತಾರೆ. ಅವರ ಪ್ರಕಾರ ಇವು ಅತ್ಯಂತ ಪ್ರಾಚೀನಕಾಲದ ಕಥನಕಾವ್ಯದ ಮಾದರಿಗಳು, ಅವು ಗದ್ಯ-ಪದ್ಯಾತ್ಮಕವಾಗಿದ್ದವು, ಸಂಭಾಷಣೆಯ ರೂಪದಲ್ಲಿರುವ ಪದ್ಯಗಳ ಭಾಗವು ಮಾತ್ರ ಪದ್ಯಾತ್ಮಕವಾದ ಋಗ್ವೇದದಲ್ಲಿ ಉಳಿದುಕೊಂಡು ಬಂದಿವೆ, ಎಂದು ಅವರ ಅಭಿಪ್ರಾಯ. ಮ್ಯಾಕ್ಸ್ ಮ್ಯುಲ್ಲರ್ (Max Mueller) ಮತ್ತು ಸಿಲ್ವನ್ ಲೆವಿ (Sylvan Levi) ಎಂಬ ವಿದ್ವಾಂಸರು ಅವುಗಳನ್ನು ಯಜ್ಞಕರ್ಮಾಂಗವಾಗಿ ಬರುವ ಧಾರ್ಮಿಕ ನಾಟಕಗಳು ಎಂದು ವರ್ಣಿಸುತ್ತಾರೆ. ಜಾನ್ ಹರ್ಟೆಲ್ (John Hertel) ಮತ್ತು ಷ್ರೋಡರ್ (Schroeder) ಅವರು ಅವುಗಳನ್ನು ಪ್ರಾಚೀನ ನಾಟಕಗಳ ಸಂವಾದಗಳೆಂದು ಬಗೆಯುತ್ತಾರೆ. ವಿಂಟರ್‌ನಿಟ್ಜ್ (Winternitz) ಅವರು ಅವುಗಳನ್ನು ಪ್ರಾಚೀನ ನಾಡುಪದ (ballads)ಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಸಂಸ್ಕೃತ ನಾಟಕ ಮತ್ತು ಮಹಾಕಾವ್ಯಗಳ ಮೂಲವನ್ನು ಗುರುತಿಸಬಹುದು.

ಇನ್ನು ಕೆಲವು ಸೂಕ್ತಗಳು ಉಪದೇಶಾತ್ಮಕ ಸ್ವರೂಪವನ್ನು ಹೊಂದಿವೆ. ಅವುಗಳಲ್ಲಿ ಅತ್ಯಂತ ಮನೋಹರವಾದುದು ಅಕ್ಷಸೂಕ್ತ (10.34). ಅದರಲ್ಲಿ ದ್ಯೂತ ವ್ಯಸನದಿಂದ ತನ್ನ ಸರ್ವಸ್ವವನ್ನು ಕಳೆದುಕೊಂಡ ಜೂಜುಕೋರನ ಪರಿತಾಪವು ವರ್ಣಿಸಲ್ಪಟ್ಟಿದೆ. 'ಅಕ್ಷೈರ್ಮಾ ದೀವ್ಯಃ ಕೃಷಿಮಿತ್ ಕೃಷಸ್ವ' ಮುಂತಾಗಿ ಉಪದೇಶವು ವ್ಯಕ್ತವಾಗಿದೆ. 9.112ನೇ ಸೂಕ್ತವು ಪುರುಷರು ಎಷ್ಟು ವಿಧವಾಗಿ ಲಾಭಕ್ಕಾಗಿ ಹವಣಿಸುತ್ತಾರೆ ಎಂಬುದನ್ನು ವರ್ಣಿಸುತ್ತದೆ. 10.71ನೇ ಸೂಕ್ತವು (ಜ್ಞಾನಸೂಕ್ತವು) ಉತ್ತಮ ವಿದ್ವತ್ತನ್ನೂ 10.117ನೇ ಸೂಕ್ತವು ಸತ್ಕರ್ಮದ ಫಲವನ್ನೂ ಪ್ರಶಂಸಿಸುತ್ತದೆ. ಇವೆಲ್ಲಾ ಅನಂತರ ಅಭಿಪಾತ ಸಂಸ್ಕೃತ ಸಾಹಿತ್ಯಕಾಲದ ಸುಭಾಷಿತ ಸಾಹಿತ್ಯದ ಮುನ್ನೋಟಗಳಾಗಿವೆ. ದಾನಸ್ತುತಿಗಳೆಂದು ಕರೆಯಲ್ಪಡುವ ಕೆಲವು ಸೂಕ್ತಗಳು ಉದಾರ ವ್ಯಕ್ತಿಗಳ, ಕವಿಗಳ ವಂಶಪರಂಪರೆ ಮುಂತಾದ ವಿಷಯಗಳನ್ನೂ ಆರ್ಯರ ಪ್ರದೇಶಗಳ ಪರಿಚಯವನ್ನೂ ನೀಡುತ್ತವೆ. ಎರಡು ಸೂಕ್ತಗಳಲ್ಲಿ ಒಗಟುಗಳು ಬಂದಿವೆ. ಅವುಗಳಲ್ಲಿ ಒಂದು (8.29) ಪೆಸರುಗಳನ್ನು ಹೇಳದೆ ದೇವತೆಗಳ ಸ್ವರೂಪವನ್ನು ಒಗಟಾಗಿಸುತ್ತದೆ. ಇನ್ನೊಂದು, ಅಂದರೆ ಪ್ರಸಿದ್ಧವಾದ ಅಸ್ಯಾವಾಮೀಯ ಸೂಕ್ತವು (1.164) ವರ್ಷ, ಋತುಗಳು, ತಿಂಗಳು, ಸಪ್ತಾಹ, ದಿನಗಳು, ಮುಂತಾದವುಗಳನ್ನು ಒಗಟುಗಳ ಮೂಲಕ ಬಿಂಬಿಸುವ ಮಂತ್ರಗಳನ್ನು ಒಳಗೊಂಡಿದೆ.

3) ತತ್ತ್ವಶಾಸ್ತ್ರೀಯ ಸೂಕ್ತಗಳು ಎಂದು ಕರೆಯಬಹುದಾದ ಸುಮಾರು ಆರು ಸೂಕ್ತಗಳು ಋಗ್ವೇದದಲ್ಲಿ ಬಂದಿವೆ. ಜಗತ್ತಿನ ಸೃಷ್ಟಿಯ ರಹಸ್ಯ ಮತ್ತು ಪರಮಾತ್ಮನ ಕಲ್ಪನೆಗಳು ಈ ಸೂಕ್ತಗಳ ಮುಖ್ಯ ವಸ್ತು. ಇವುಗಳಲ್ಲಿ ತಾತ್ತ್ವಿಕ ವಿಚಾರಗಳು ಪೌರಾಣಿಕ ಹಾಗೂ ಯಾಜ್ಞಿಕ ವಿಷಯಗಳಿಂದ ಪ್ರಭಾವಿತವಾಗಿವೆ. ತತ್ತ್ವವಿಚಾರದ ಆರಂಭವನ್ನು ಋಗ್ವೇದದಲ್ಲಿ ದೇವತೆಗಳ ವೈವಿಧ್ಯ, ಅಸ್ತಿತ್ವ ಮತ್ತು ಶಕ್ತಿಗಳ ಬಗ್ಗೆ ಕೇಳುವ ಕೆಲವು ಪ್ರಶ್ನೆಗಳಲ್ಲಿ ಗುರುತಿಸಬಹುದು. ಬಹು ಪ್ರಾಚೀನ ಕಾಲದಲ್ಲಿಯೇ ಇಂದ್ರ ದೇವತೆಯ ಬಗ್ಗೆ 'ಉತೇಮಾಹುರ್ನೈಷೋಽಸ್ತೀ-ತ್ಯೇನಮ್' (ಕೆಲವರು ಹೇಳುತ್ತಾರೆ ಅವನು ಇಲ್ಲವೆಂದು, 2.12.5) ಎಂಬ ರೀತಿಯ ಸಂದೇಹವು ವ್ಯಕ್ತವಾಗಿತ್ತು. ದೇವತೆಗಳ ವೈವಿಧ್ಯದ ಬಗ್ಗೆ 'ಕಸ್ಮೈ ದೇವಾಯ ಹವಿಷಾ ವಿಧೇಮ' (ಯಾವ ದೇವತೆಗೆ ಹವಿಸ್ಸನ್ನು ಅರ್ಪಿಸಿ ಪೂಜಿಸೋಣ - 10.121 ಪ್ರತಿ ಮಂತ್ರದ ಅಂತಿಮ ವಾದ) ಎಂಬ ರೀತಿಯ ಪ್ರಶ್ನೆಯು ಎದ್ದಿದೆ.

ಜಗತ್ತಿನ ಹುಟ್ಟಿನ ಬಗ್ಗೆ ವಿಚಾರ ಮಾಡುವ ಸೂಕ್ತಗಳಲ್ಲಿ ಹೆಚ್ಚಾಗಿ ಬೇರೆ ಬೇರೆ ದೇವತೆಗಳಿಂದ ಜಗತ್ತು ಹುಟ್ಟಿತು ಎಂಬ ಅಭಿಪ್ರಾಯವು ವ್ಯಕ್ತವಾಗಿದೆ. ದ್ಯಾವಾ-ಪೃಥಿವಿಯರನ್ನು ಜಗತ್ತಿನ ತಂದೆ ತಾಯಿಗಳೆಂದು ವರ್ಣಿಸಲಾಗಿದೆ. ವಿಚಿತ್ರವೆಂದರೆ ಈ ತಂದೆ ತಾಯಿಗಳನ್ನೇ ಇಂದ್ರನು ತನ್ನ ದೇಹದಿಂದ ಪಡೆದನು. 'ಯನ್ಮಾತರಂ ಪಿತರಂ ಚ ಸಾಯಕಮಜನಯಥಾ ತನ್ವ ಸ್ವಾಯಾಃ' (10.54.3) ಎಂದು ಹೇಳಿರುವುದು. ಇದೇ ದೇವತೆಗಳ ಪರಸ್ಪರ ಜನ್ಯ-ಜನಕಭಾವವೆಂಬ ವೈಚಿತ್ರ್ಯ. ಹೆಚ್ಚಿನ ವಿಚಾರ ಬೆಳೆದಂತೆ ಪ್ರಧಾನ ದೇವತೆಗಳಿಗಿಂತ ಭಿನ್ನವಾದ ಜಗತ್ತಿನ ಕರ್ತೃವನ್ನು ಭಾವನೆಯಲ್ಲಿ ತಂದುಕೊಳ್ಳುವ ಪ್ರಯತ್ನವು ನಡೆಯಿತು. ಆ ಕರ್ತೃವನ್ನು ಪುರುಷನೆಂದೂ, ವಿಶ್ವಕರ್ಮನೆಂದೂ, ಹಿರಣ್ಯಗರ್ಭನೆಂದೂ, ಪ್ರಜಾಪತಿಯೆಂದೂ, ಕರೆದಿದ್ದಾರೆ. ಪುರುಷಸೂಕ್ತವು (10.90) ವಿರಾಟ್ ಪುರುಷನ ಕಲ್ಪನೆಯನ್ನು ಕೊಟ್ಟು, ಅವನೇ ಹವಿಸ್ಸಾಗಿದ್ದ ಯಜ್ಞವನ್ನು ವರ್ಣಿಸಿ, ಆ ಯಜ್ಞದಲ್ಲಿ ಅರ್ಪಿಸಲಾದ ಪುರುಷನ ಅಂಗಾಂಗಗಳೇ ಜಗತ್ತಿನ ವಿವಿಧ ಪದಾರ್ಥಗಳಾಗಿ ಪರಿಣಮಿಸಿದ್ದನ್ನು ವರ್ಣಿಸುತ್ತದೆ. ವಿಶ್ವಕರ್ಮನನ್ನು ಕೊಂಡಾಡುವ ಎರಡು ಸೂಕ್ತಗಳಲ್ಲಿ (10.81-82) ವಿಶ್ವಸೃಷ್ಟಿಗೆ ಪೂರ್ವದಲ್ಲಿ ಏನಿತ್ತು ಏನಿರಲಿಲ್ಲ, ಯಾವ ವಸ್ತುವಿನಿಂದ ಈ ಜಗತ್ತಿನ ನಿರ್ಮಾಣವಾಯಿತು, ಎಂಬಂತಹ ಪ್ರಶ್ನೆಗಳು ಕೇಳಲ್ಪಟ್ಟಿವೆ. 10.121ನೇ ಸೂಕ್ತದಲ್ಲಿ ಪ್ರಜಾಪತಿಯನ್ನು ಸೃಷ್ಟಿಕರ್ತೃವೆಂದೂ ಸ್ಥಿತಿಕರ್ತೃವೆಂದೂ ವರ್ಣಿಸಲಾಗಿದೆ. ಈ ಸೂಕ್ತದ ಮೊದಲ ಮಂತ್ರದಲ್ಲಿ ಹಿರಣ್ಯಗರ್ಭನ ಕಲ್ಪನೆ ಬಂದಿದೆ - 'ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್' ಎಂದು 10.72ನೇ ಸೂಕ್ತವು 'ಅಸತ್'ನಿಂದ 'ಸತ್'ನ ಉದ್ಭವವಾಯಿತು ಎಂಬ ಮತವು, (ದೇವನಾಂ ಪೂರ್ವ್ಯೇ ಯುಗೇಽಸತಃ ಸದಜಾಯತ), ವ್ಯಕ್ತವಾಗಿದೆ. ಪ್ರಸಿದ್ಧವಾದ ನಾಸದೀಯಸೂಕ್ತವು (10.129),

ಆಗ ಅಸತ್ತೂ ಇರಲಿಲ್ಲ ಸತ್ತೂ ಇರಲಿಲ್ಲ (ನಾಸದಾಸೀನ್ನೋ ಸದಾಸೀತ್ತದಾನೀಂ) ಎಂದು ಆರಂಭವಾಗುತ್ತದೆ. ಆಗ ಏನೂ ಇರಲಿಲ್ಲ ಒಂದು (ಏಕಮ್) ಮಾತ್ರ ಇತ್ತು. ಅದು ತನ್ನದೇ ಶಕ್ತಿಯಿಂದ ಗಾಳಿಯಿಲ್ಲದೆ ಉಸಿರಾಡುತ್ತಿತ್ತು - 'ಅನೀದವಾತಂ ಸ್ವಧಯಾ ತದೇಕಂ' ಎಂದು ಹೇಳಿ ಆ ಸೂಕ್ತವು ಪರಬ್ರಹ್ಮ ಮತ್ತು ಅದರ ಅವಿನಾಭೂತವಾದ ಶಕ್ತಿಯ ಮೊದಲ ಪಾರಮಾರ್ಥಿಕ ಸತ್ಯವನ್ನು ಬಿಂಬಿಸುತ್ತದೆ. ಅದರಲ್ಲಿ 'ಸಿಸೃಕ್ಷಾ' ರೂಪದ ಕಾಮವು ಮೊದಲು ಮೂಡಿತು; ಅದೇ ಅದರ ಮನಸ್ಸಿನ ಮೊದಲ ಬೀಜವಾಗಿತ್ತು. ಅದರಿಂದ ಸೃಷ್ಟಿಯು ಆರಂಭವಾಯಿತು. ಈ ತತ್ತ್ವಶಾಸ್ತ್ರೀಯ ಸೂಕ್ತಗಳಲ್ಲಿ 'ಒಬ್ಬನೇ ಪರಮಾತ್ಮನಿದ್ದಾನೆ, ಅವನನ್ನು ಬೇರೆ ಬೇರೆ ಹೆಸರುಗಳಿಂದ ವರ್ಣಿಸುತ್ತಾರೆ' - 'ಏಕಂ ಸದ್ವಿಪ್ರಾಃ ಬಹುಧಾ ವದಂತಿ' (1.164.46) ಎಂಬುದೇ ಮೂಲಭೂತವಾದ ಸಿದ್ಧಾಂತ.

## 1.1.3.12 ಋಗ್ವೇದದ ಧರ್ಮಸ್ವರೂಪ

ಋಗ್ವೇದವು ಮೂಲತಃ ಪ್ರಕೃತಿಯ ಶಕ್ತಿಗಳಿಗೆ ಮಾಡಿದ ವ್ಯಕ್ತಿತ್ವಾರೋಪದ ಫಲವಾಗಿ ಸಾಕಾರಗೊಂಡ ಬೇರೆ ಬೇರೆ ದೇವತೆಗಳ ಸ್ತೋತ್ರಗಳಾದ ಸೂಕ್ತಗಳ ಸಂಗ್ರಹವಾಗಿದೆ. ಈಸೂಕ್ತಗಳು ವಿವಿಧ ಯಜ್ಞಕರ್ಮಗಳಲ್ಲಿ ಸೋಮ ಅಥವಾ ಆಜ್ಯದ ಹವಿಸ್ಸಿನ ಅರ್ಪಣೆಯ ಸಮಯದಲ್ಲಿ ಪ್ರಯುಕ್ತವಾಗುತ್ತವೆ. ಹೀಗೆ ಅವು ಅಗ್ನಿ, ಇಂದ್ರ, ವರುಣ ಮುಂತಾಗಿ ಅನೇಕ ದೇವತೆಗಳ ಉಪಾಸನೆಗೆ ಸಂಬಂಧಿಸಿವೆ. ಬೇರೆ ಬೇರೆ ದೇವತೆಗಳನ್ನು ಪ್ರಶಂಸಿಸುವ ಸೂಕ್ತಗಳಲ್ಲದೆ, ಅವುಗಳ ಮಧ್ಯೆ ಅಲ್ಲಲ್ಲಿ ಬರುವ ಕೆಲವು ಸೂಕ್ತಗಳು ಪುರುಷ, ಸತ್, ಹಿರಣ್ಯಗರ್ಭ ಮುಂತಾಗಿ ಕರೆಯಲ್ಪಡುವ ಒಬ್ಬನೇ ಪರಮಾತ್ಮನ ಕಲ್ಪನೆಯನ್ನು ಒಳಗೊಂಡಿವೆ.

ಹೀಗೆ ಮೇಲು ನೋಟಕ್ಕೆ ಋಗ್ವೇದದ ಧರ್ಮವು ಬಹುದೇವತೋಪಾಸನಾತ್ಮಕವೆಂದು ಕಂಡು ಬಂದರೂ, ಅದು ಏಕದೇವತೋಪಾಸನಾತ್ಮಕವೇ ಆಗಿದ್ದು ಅನೇಕ ದೇವತೆಗಳ ಪೂಜೆಯೆಂದರೆ ಒಬ್ಬನೇ ಪರಮಾತ್ಮನ ವಿವಿಧ ಶಕ್ತಿಗಳ ಪೂಜೆಯೆಂಬ ಭಾವನೆಯು ಬರುತ್ತದೆ. ಇದರಲ್ಲಿ ಒಂದು ಹಂತದಲ್ಲಿ ಬಹುದೇವತೋಪಾಸನಾತ್ಮಕವಾಗಿದ್ದ ಧರ್ಮವು ಏಕದೋವತೋಪಾಸನಾತ್ಮಕವಾದ ಸ್ವರೂಪವನ್ನು ಪಡೆಯುವುದಕ್ಕಿಂತ ಪೂರ್ವದಲ್ಲಿ ಮಧ್ಯದ ಹಂತವೊಂದಿತ್ತು ಅದನ್ನು 'ಹೀನೋಥೀಯಿಜಮ್' (Henotheism) ಅಥವಾ 'ಕೆಥೆನೋಥೀಯಿಜಮ್' (Kathenotheism) ಎಂದು ಕರೆಯಬಹುದು ಎಂದು ಮಾಕ್ಸ್ ಮ್ಯೂಲರ್ ಅವರು ಹೇಳುತ್ತಾರೆ. ಹಾಗೆಂದರೆ ಒಂದೊಂದು ದೇವತೆಯನ್ನು ಒಂದೊಂದು ಸಾರಿ ಶ್ರೇಷ್ಠವೆಂದು ಪರಿಗಣಿಸಿ ಪೂಜಿಸುವುದು ಎಂದರ್ಥ. ಹೀಗೆ ಅನೇಕ

ದೇವತೋಪಾಸನೆಯಿಂದ ಆರಂಭವಾದ ಋಗ್ವೇದದ ಧರ್ಮವು ಪರ್ಯಾಯವಾಗಿ ದೇವತೆಗಳನ್ನು ಶ್ರೇಷ್ಠವೆಂದು ಪರಿಗಣಿಸುವ ಹಂತದ ಮೂಲಕ ಏಕದೇವತೋಪಾಸನೆಯ ಪರಿಪಕ್ವ ನೆಲೆಯಲ್ಲಿ ನಿಂತಿತ್ತು ಎಂದು ವರ್ಣಿಸಬೇಕಾಗುತ್ತದೆ. ಹಾಗೆ ವರ್ಣಿಸಬಹುದಾದರೂ ಈ ಹಂತಗಳನ್ನು ಗುರುತಿಸುವ ತೊಡಕಂತೂ ಇದ್ದೇ ಇದೆ. ಭಾರತೀಯ ಮನೋಭಾವವು ಅಂದಿಗೂ ಇಂದಿಗೂ ಅನೇಕತ್ವದಲ್ಲಿ ಏಕತ್ವವನ್ನು ಕಾಣುವುದೇ ಆಗಿದೆ. 'ಏಕಂ ಸದ್ವಿಪ್ರಾಃ ಬಹುದಾ ವದಂತಿ' ಎಂಬಂತೆ ಪರಮಾತ್ಮನೊಬ್ಬನೆ, ಬೇರೆ ಬೇರೆ ದೇವತೆಗಳೆಂದರೆ ಅವನ ವಿವಿಧ ಶಕ್ತಿಗಳ ಸಂಕೇತ ರೂಪಗಳು ಎಂಬ ಭಾವನೆಯನ್ನು ಆಧರಿಸಿದ ಧರ್ಮ ಋಗ್ವೇದದ ಧರ್ಮವೆಂದು ಹೇಳಿದರೆ ಭಾರತೀಯರ ಮನೋಭಾವಕ್ಕೆ ಸಮಂಜಸವಾಗುತ್ತದೆ.

ಋಗ್ವೇದದ ಧರ್ಮವು ಗಣನೀಯವಾಗಿ ಮುಂದುವರೆದ ಧರ್ಮ. ಅದು ಮುಂದುವರೆದ ನಾಗರೀಕತೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದ ಒಂದು ಆರ್ಯಸಮಾಜದ ಧರ್ಮ. ಆದ್ದರಿಂದ ರುಡಾಲ್ಫ್ ಕೇಗಿ (Rudolf Keigi) ಹೇಳುವಂತೆ ಅದನ್ನು ಅನಾಗರೀಕ ಮೂಲನಿವಾಸಿಗಳ ಧರ್ಮವೆಂದು ಬಗೆಯುವುದು ಸಂಪೂರ್ಣವಾಗಿ ತಪ್ಪು (Keigi :- Der Rigveda - "Vedic Religion is very Primitive, Vedic people being semi-barbarious, childlike and innocent). ಛಂದಸ್ಸುಗಳ ಪ್ರಯೋಗದಲ್ಲಿ ಕಂಡು ಬರುವ ಕೌಶಲ್ಯ, ನಿಸರ್ಗಾದಿ ನಿರೀಕ್ಷಣೆಯಲ್ಲಿ ಕಾಣುವ ಪ್ರಬುದ್ಧತೆ, ವೈಚಾರಿಕ ಪ್ರಜ್ಞೆ, ಕವಿತಾಚಾತುರ್ಯ, ತಾತ್ತ್ವಿಕ ವಿವೇಚನೆ ಮುಂತಾದವುಗಳನ್ನು ಋಗ್ವೇದೀಯ ಸೂಕ್ತಗಳಲ್ಲಿ ಕಾಣುತ್ತೇವೆ. ಇವೆಲ್ಲವೂ ಅದರ ಧರ್ಮವನ್ನು ಮುಂದುವರೆದ ಧರ್ಮವೆಂದು ತೋರಿಸುತ್ತದೆ.

ಯಜ್ಞದ ಮೂಲಕ ದೇವತೆಗಳನ್ನು ಪೂಜಿಸುವುದು ಆ ಧರ್ಮದ ಪ್ರಧಾನವಾದ ಅಂಶ. ಪೂಜೆ ಮತ್ತು ಫಲಾಕಾಂಕ್ಷೆಗಳಿಗೆ ಸಂಬಂಧವಿದ್ದು ಒಂದು ದೃಷ್ಟಿಯಿಂದ ಆ ಧರ್ಮವು ಸ್ವರೂಪದಲ್ಲಿ ಪ್ರಯೋಜನೋದ್ದಿಷ್ಟವಾದುದು. ಎಲ್ಲಾ ಧಾರ್ಮಿಕ ಸೂಕ್ತಗಳಲ್ಲಿ ಋಷಿಗಳು ದೇವತೆಗಳಿಗೆ ತಮ್ಮ ಸ್ತೋತ್ರಗಳನ್ನು ಮತ್ತು ಹವಿಸ್ಸನ್ನು ಅರ್ಪಿಸುತ್ತಾರೆ, ಅದಕ್ಕೆ ಬದಲಾಗಿ ದೀರ್ಘಾಯುಷ್ಯ, ಗೋಧನ ಧಾನ್ಯ ಸಂಪತ್ತು, ವೀರ ಪುತ್ರರು ಮುಂತಾದ ಫಲಗಳನ್ನು ದೇವತೆಗಳಿಂದ ನಿರೀಕ್ಷಿಸುತ್ತಾರೆ. ಅಮೃತತ್ವ ಮತ್ತು ಮೋಕ್ಷಗಳಿಗಿಂತ ಹೆಚ್ಚಾಗಿ ಆ ಜನರು ಬೇಡುತ್ತಿದ್ದುದು ಸ್ವಸ್ತಿತಸದ ಸಮೃದ್ಧಿಯ ನೂರು ವರ್ಷಗಳ ಜೀವನವನ್ನು, ಅನಂತರದ ಉಪನಿಷತ್ತುಗಳಲ್ಲಿ ಕಂಡು ಬರುವ ವೈರಾಗ್ಯ ಅಥವಾ ನಿವೃತ್ತಿಗಳ ಸುಳಿವೇ ಋಗ್ವೇದದಲ್ಲಿಲ್ಲ. ಇದರಿಂದ ಋಗ್ವೇದಕಾಲೀನ ಜನರು ಚಾರ್ವಾಕ ದೃಷ್ಟಿಯವರು ಎಂದು ಬಗೆಯಬೇಕಾಗಿಲ್ಲ. ಲೌಕಿಕ ಜೀವನದ ಸುಖಸಮೃದ್ಧಿಗಳ ಸಾಧನೆಯೊಂದಿಗೆ ಆಧ್ಯಾತ್ಮಿಕ ದೃಷ್ಟಿಯಿಂದ ಬಾಳುವ ಮನೋಭಾವವಿದ್ದ ಜನರು ಅವರು.

ಒಬ್ಬನೇ ಪರಮಾತ್ಮನೆಂಬ ಮೂಲಭೂತ ವಿಚಾರದಿಂದ ಪ್ರಭಾವಿತವಾದ ಬಹುದೇವೋಪಾಸನೆಯ ಬಾಹ್ಯಲಕ್ಷಣವುಳ್ಳ ಈ ಧರ್ಮದಲ್ಲಿ ಪೂಜಿಸಲ್ಪಡುವ ದೇವತೆಗಳು ಮೂಲತಃ ಪ್ರಕೃತಿಯ ಶಕ್ತಿಗಳ ಮೂರ್ತೀಭವಿಸಿದ ರೂಪಗಳು. ಋಷಿಗಳು ಸೂಕ್ತಗಳಲ್ಲಿ ವರ್ಣಿಸುವುದನ್ನು ಕೇಳಿದರೆ ಆ ದೇವತೆಗಳು ಆಕಾರವನ್ನು ತಾಳುತ್ತಾ ನಮ್ಮ ಕಣ್ಮುಂದೆ ನಿಂತಂತೆ ಭಾಸವಾಗುತ್ತದೆ. ಅಂದರೆ ವಿವಿದ ದೇವತೆಗಳನ್ನು ವರ್ಣಿಸುವ ಸೂಕ್ತಗಳಲ್ಲಿ ಆ ದೇವತೆಗಳ ವ್ಯಕ್ತಿತ್ವ ಮತ್ತು ಪೌರಾಣಿಕ ಹಿನ್ನೆಲೆಗಳು ವಿಕಸಿತವಾಗಿವೆ. ಕೆಲವು ದೇವತೆಗಳ ವಿಷಯದಲ್ಲಿ ಅವು ಮೂಲತಃ ಯಾವ ಪ್ರಾಕೃತಿಕ ಶಕ್ತಿಯನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಗುರುತಿಸುವುದು ಸಾಧ್ಯವಾಗದಷ್ಟು ವ್ಯಕ್ತಿತ್ವ ವಿಕಾಸವಾಗಿದೆ. ಇಂತಹ ದೇವತೆಗಳಲ್ಲಿ ಇಂದ್ರ ಮತ್ತು ವರುಣ ಬಹಳ ಮುಖ್ಯ. ಇವರನ್ನು ಪಾಶ್ಚಾತ್ಯ ವಿದ್ವಾಂಸರು ತಮ್ಮ ವರ್ಗೀಕರಣದಲ್ಲಿ 'ಅಪಾರದರ್ಶಕ' (Opaque) ದೇವತೆಗಳು ಎಂದು ಕರೆಯುತ್ತಾರೆ. ಅಗ್ನಿ, ಪರ್ಜನ್ಯ, ಉಷಸ್ ಮುಂತಾದ ದೇವತೆಗಳನ್ನು ಹಾಗೆ ನೋಡಿದರೆ 'ಪಾರದರ್ಶಕ' (Transparent) ದೇವತೆಗಳು ಎಂದು ಕರೆಯುವುದು ಸಮಂಜಸ. ಆ ದೇವತೆಗಳ ವಿಕಾಸದಲ್ಲಿ ಮೂಲ ಪ್ರಾಕೃತಿಕ ಶಕ್ತಿಯ ಅಂಶವು ಮರೆಯಾಗದೆ ಉಳಿದುಕೊಂಡಿದೆ. ಕೆಲವು ಅಮೂರ್ತ ಭಾವನೆಗಳಿಗೆ ವ್ಯಕ್ತಿತ್ವವನ್ನು ಆರೋಪಿಸಿ ದೇವತೆಯನ್ನಾಗಿ ಕಂಡಿರುವುದೂ ಉಂಟು. ಸವಿತೃ ಎಂಬ ದೇವತೆ ಅದಕ್ಕೊಂದು ಉದಾಹರಣೆ. ಈ ದೃಷ್ಟಿಯಿಂದ ಬ್ಲೂಮ್‌ಫೀಲ್ಡ್ (Bloomfield) ಅವರು ಋಗ್ವೇದದ ದೇವತೆಗಳನ್ನು ಚರಿತ್ರಪೂರ್ವ (Pre-historic), ಪಾರದರ್ಶಕ (Transparent), ಅರ್ಧಪಾರದರ್ಶಕ (Translucent), ಅಪಾರದರ್ಶಕ (Opaque) ಮತ್ತು ಅಮೂರ್ತ (Abstract) ಅಥವಾ ಸಾಂಕೇತಿಕ (Symbolic)ಗಳೆಂದು ವರ್ಗೀಕರಿಸಿದ್ದಾರೆ. (Religion of the Veda. p. 96). ಈ ವಿಷಯದಲ್ಲಿ ಪೀಟರ್‌ಸನ್ (Peterson) ಅವರ ಮಾತು ಗಮನಾರ್ಹವಾದುದು. "ಯಾವ ದೇವತೆಗಳನ್ನು ಚರಿತ್ರಪೂರ್ವವೆನ್ನಬೇಕು ಎಂಬುದು ನಿಶ್ಚಿತವಾಗಿಲ್ಲ. ದೇವತೆಗಳನ್ನು ಪಾರದರ್ಶಕ, ಅರ್ಧಪಾರದರ್ಶಕ, ಅಪಾರದರ್ಶಕ ಎಂದು ಮುಂತಾಗಿ ಕರೆಯುವುದು ಕೂಡ ಕೊಡಲ್ಪಡುವ ವ್ಯಾಖ್ಯಾನಗಳನ್ನು ಒಪ್ಪುವುದನ್ನು ಅಥವಾ ಬಿಡುವುದನ್ನು ಅವಲಂಬಿಸಿದೆ" (It is not certain which gods have to be relegated to the prehistoric period, and a god may be transparent, translucent or opaque just as the interpretations offered are accepted or rejected" - Hymns from the Rgveda, 1922, Bombay, LXXIV - Appendix - IV). ಇನ್ನೊಂದು ದೃಷ್ಟಿಯಿಂದ, ಅಂದರೆ ಚಾರಿತ್ರಿಕ ದೃಷ್ಟಿಯಿಂದ, ದೇವತೆಗಳನ್ನು ಹಿಂದೂ-ಐರೋಪ್ಯ, ಹಿಂದೂ-ಇರಾನಿ ಮತ್ತು ಹಿಂದೂ ದೇವತೆಗಳೆಂದು ವರ್ಗೀಕರಿಸಿರುವುದೂ ಉಂಟು.

ಭಾರತೀಯ ಪರಂಪರೆಯಲ್ಲಿ ನಿರುಕ್ತಕಾರ ಯಾಸ್ಕರು ಕೊಟ್ಟಿರುವ ದೇವತೆಗಳ ಸ್ಥಾನಭೇದವನ್ನು ಅವಲಂಬಿಸಿದ ವರ್ಗೀಕರಣವು ಹೆಚ್ಚು ಮಾನ್ಯವಾಗಿ ತೋರುತ್ತದೆ. 'ತಿಸ್ರ ಏವ ದೇವತಾ ಇತಿ ನೈರುಕ್ತಾಃ ಅಗ್ನಿಃ ಪೃಥಿವೀಸ್ಥಾನಃ ವಾಯುರ್ವೇಂದ್ರೊ ಅಂತರಿಕ್ಷಸ್ಥಾನಃ ಸೂರ್ಯೋ ದ್ಯುಸ್ಥಾನಃ" (ನಿರುಕ್ತ. 7.5) ಹೀಗೆ ಪೃಥಿವೀಸ್ಥಾನ, ಅಂತರಿಕ್ಷಸ್ಥಾನ ಮತ್ತು ದ್ಯುಸ್ಥಾನಗಳ ಆಧಾರದ ಮೇಲೆ ಮಾಡಿರುವ ದೇವತೆಗಳ ವರ್ಗೀಕರಣಕ್ಕೆ ಆಧಾರವು ಋಗ್ವೇದದಲ್ಲಿಯೇ ಕಂಡು ಬಂದಿದೆ. 'ಯೇ ದೇವಾಸೋ ದಿವ್ಯೇಕಾದಶಸ್ಥ ಪೃಥಿವ್ಯಾಮಧ್ಯೇಕಾದಶಸ್ಥ, ಅಪ್ಸು ಕ್ಷಿತೋ ಮಹಿನ್ಯೆಕಾದಶ ಸ್ಥ ತೇ ದೇವಾಸೋ ಯಜ್ಞಮಿಮಂ ಜುಷಧ್ವಂ||" (1.139.11) ಎಂಬ ಮಂತ್ರದಲ್ಲಿ ಅದರ ಮೂಲವನ್ನು ನೋಡಬಹುದು. ಈ ವರ್ಗೀಕರಣದಂತೆ, ಅಗ್ನಿ, ಸೋಮ, ಪೃಥಿವಿ ಎಂಬವು ಪೃಥಿವೀ ಸ್ಥಾನ ದೇವತೆಗಳು; ಇಂದ್ರ, ಅಪಾಂನಪಾತ್, ರುದ್ರ, ಮರುತರು, ವಾಯು, ಪರ್ಜನ್ಯ, ಅಪಸ್ ಎಂಬ ದೇವತೆಗಳು ಅಂತರಿಕ್ಷಸ್ಥಾನೀಯಗಳು; ದ್ಯೌಃ, ವರುಣ, ಮಿತ್ರ, ಸೂರ್ಯ, ಸವಿತೃ, ಪೂಷನ್, ಅಶ್ವಿನಿಗಳು, ಉಷಸ್ ಮತ್ತು ರಾತ್ರಿ ಎಂಬ ದೇವತೆಗಳು ದ್ಯುಸ್ಥಾನದವುಗಳು. ಋಗ್ವೇದದ ಧರ್ಮವು ಈ ದೇವತೆಗಳನ್ನು ಯಜ್ಞಯಾಗಾದಿಗಳ ಮೂಲಕ ಪೂಜಿಸಿ ಒಲಿಸಿಕೊಂಡು ಉತ್ತಮ, ಸಮೃದ್ಧ ಜೀವನವನ್ನು ನಡೆಸಿ, ಸಾರ್ಥಕ್ಯವನ್ನು ಪಡೆಯುವ ಗುರಿಯುಳ್ಳ ಧರ್ಮವೆಂದು ವರ್ಣಿಸಿದರೆ ಅತ್ಯಂತ ಸಮಂಜಸವಾಗುತ್ತದೆ.

## 1.1.3.13 ಋಗ್ವೇದದ ಕಾಲದ ಬಗ್ಗೆ ವಾದಗಳು

ಋಗ್ವೇದದ ಕಾಲದ ಬಗ್ಗೆ ಮಾಡುವ ವಿಚಾರವು ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮಹತ್ತ್ವದ್ದು. ಋಗ್ವೇದದ ಸೂಕ್ತಗಳು ಮತ್ತು ಅಥರ್ವವೇದದ ಕೆಲವು ಸೂಕ್ತಗಳು ಭಾರತೀಯ ಸಾಹಿತ್ಯದ ಅತ್ಯಂತ ಪ್ರಾಚೀನ ಹಂತವನ್ನು ಪ್ರತಿನಿಧಿಸುತ್ತವೆ. ಹೀಗೆ ಋಗ್ವೇದದ ಕಾಲವು ವೈದಿಕ ಸಾಹಿತ್ಯದ ಪೂರ್ವಸೀಮೆಯಾಗಿದ್ದು ಅದರ ಬಗ್ಗೆ ಯಾವುದೇ ನಿರ್ಧಾರವಾದರೂ ಅದು ಮುಂದಿನ ಭಾರತೀಯ ಸಾಹಿತ್ಯದ ಕಾಲದ ವಿಚಾರಕ್ಕೆ ಮಹತ್ತ್ವದ ಅಂಶವಾಗುತ್ತದೆ. ದುರದೃಷ್ಟದಿಂದ ಋಗ್ವೇದದ ಕಾಲದ ವಿಷಯವೇ ಅತ್ಯಂತ ಜಟಿಲವಾದ ಪ್ರಶ್ನೆಯಾಗಿದೆ. ಅದರ ಬಗ್ಗೆ ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ತಮ್ಮ ವಾದಗಳನ್ನು ಮುಂದಿಟ್ಟಿದ್ದಾರೆ. ಅವುಗಳ ಸಂಕ್ಷಿಪ್ತವಾದ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಋಗ್ವೇದದ ಕಾಲವನ್ನು ಕುರಿತು ಮುಂದಿಟ್ಟ ವಾದಗಳು ಮುಖ್ಯವಾಗಿ ಎರಡು ಗುಂಪುಗಳಾಗಿವೆ. ಮೊದಲನೆಯ ಗುಂಪು ಸಾಹಿತ್ಯಿಕ ಅಥವಾ ಭಾಷಾವಿಷಯಕ ಆಧಾರವನ್ನು

ಅವಲಂಬಿಸಿದ ವಾದಗಳದು. ಎರಡನೆಯ ಗುಂಪು ಖಗೋಳಶಾಸ್ತ್ರೀಯ ಲೆಕ್ಕಾಚಾರವನ್ನು ಅವಲಂಬಿಸಿದ ವಾದಗಳದು. ಮೊದಲನೆ ಗುಂಪಿಗೆ ಸೇರಿದ ವಾದಗಳಲ್ಲಿ ಈ ಕೆಳಗೆ ಕೊಟ್ಟವುಗಳು ಮುಖ್ಯವಾಗಿವೆ :

1) ಮೊದಲನೆಯದಾಗಿ ಮಾಕ್ಸ್‌ಮ್ಯುಲರ್ ಅವರ ವಾದವು ಪ್ರಸಿದ್ಧವಾಗಿದೆ. ಅವರು ಪ್ರಾಚೀನ ಸಾಹಿತ್ಯದ ಕಾಲವನ್ನು ನಾಲ್ಕು ಅವಧಿಗಳಲ್ಲಿ ವಿಭಾಗಿಸಿದ್ದಾರೆ - (i) ಛಂದಸ್ (ii) ಮಂತ್ರ (iii) ಬ್ರಾಹ್ಮಣ ಮತ್ತು (iv) ಸೂತ್ರ. ಇಲ್ಲಿ ಉತ್ತರೋತ್ತರವಾದದ್ದು ಪೂರ್ವಪೂರ್ವದರ ಕಾಲಕ್ಕಿಂತ ಅನಂತರದ್ದು. ಹೀಗೆ ಸೂತ್ರದ ಕಾಲವು ಹಿಂದಿನ ಮೂರಕ್ಕಿಂತ ಅನಂತರದ್ದು. ಸೂತ್ರದ ಕಾಲದಲ್ಲಿ ಅನುಕ್ರಮಣಿಗಳ ಕರ್ತೃಗಳಾದ ಶೌನಕ ಮತ್ತು ಕಾತ್ಯಾಯನರು ಮುಖ್ಯರು. ಕಾತ್ಯಾಯನರ ಅನುಕ್ರಮಣಿಕೆಯ ಮೇಲಿನ ತಮ್ಮ ವ್ಯಾಖ್ಯಾನದಲ್ಲಿ ಷಡ್‌ಗುರು ಶಿಷ್ಯ ಎಂಬವರು ನಾಲ್ವರು ಆಚಾರ್ಯರ ತಲೆಮಾರನ್ನು ಈ ಕ್ರಮದಲ್ಲಿ ಹೆಸರಿಸಿದ್ದಾರೆ : ಶೌನಕ, ಅಶ್ವಲಾಯನ, ಕಾತ್ಯಾಯನ ಮತ್ತು ಪತಂಜಲಿ. ಇವರಲ್ಲಿ ಕಾತ್ಯಾಯನ ಮತ್ತು ವರರುಚಿ ಒಂದೇ ಎಂದು ಭಾವಿಸಲಾಗಿದೆ. ಸೋಮದೇವನು ತನ್ನ ಕಥಾಸರಿತ್ಸಾಗರದಲ್ಲಿ ವರರುಚಿಯನ್ನು ಪಾಟಲಿಪುತ್ರದ ನಂದರಾಜನ ಮಂತ್ರಿಯಾಗಿದ್ದನೆಂದು ಹೇಳುತ್ತಾನೆ. ನಂದನ ರಾಜ್ಯಭಾರವು ಚಂದ್ರಗುಪ್ತಮೌರ್ಯನಿಂದ ಕೊನೆಗೊಳಿಸಲ್ಪಟ್ಟಿತು. ಚಂದ್ರಗುಪ್ತನ ಕಾಲ ಕ್ರಿ.ಪೂ. 321ರಿಂದ ಕ್ರಿ.ಪೂ. 297ರವರೆಗೆ ಎಂದು ನಿರ್ಣಯಿಸಲ್ಪಟ್ಟಿದೆ. ಇದರಿಂದ ತಿಳಿಯುವಂತೆ ಕಾತ್ಯಾಯನ ವರರುಚಿಯ ಕಾಲವು ಕ್ರಿ.ಪೂ. 325. ಇದರ ಆಧಾರದ ಮೇಲೆ ಲೆಕ್ಕ ಹಾಕಿದರೆ ಅಶ್ವಲಾಯನರ ಕಾಲವು ಕ್ರಿ.ಪೂ. 359 ಮತ್ತು ಶೌನಕರ ಕಾಲವು ಕ್ರಿ.ಪೂ. 490. ಹೀಗೆ ಸೂತ್ರಗಳ ಕಾಲವು ಕ್ರಿ.ಪೂ. 200ರಿಂದ ಕ್ರಿ.ಪೂ. 600ರವರೆಗೆ ಹಿಂದಕ್ಕೆ ಹೋಗುತ್ತದೆ. ಸೂತ್ರಗಳು ಬ್ರಾಹ್ಮಣಗಳ ಪೂರ್ವತ್ವವನ್ನು ತೋರಿಸುತ್ತವೆ. ಆದ್ದರಿಂದ ಬ್ರಾಹ್ಮಣಗಳ ಕಾಲವು ಕ್ರಿ.ಪೂ. 600ರಿಂದ ಕ್ರಿ.ಪೂ. 800ರವರೆಗೆ ಹಿಂದಕ್ಕೆ ಹೋಗುತ್ತದೆ. ಅಲ್ಲಿಂದ ಮತ್ತೆ ಮಂತ್ರಗಳ ಕಾಲವು ಕ್ರಿ.ಪೂ. 1000ದವರೆಗೆ ಹಿಂದೆ ಹೋಗುತ್ತದೆ. ಇವೆಲ್ಲಕ್ಕೂ ಪೂರ್ವ ಕಾಲಕ್ಕೆ ಸೇರಿದ ಛಂದಸ್ಸಿನ ಕಾಲವೇ ಋಗ್ವೇದದ ಕಾಲ. ಹಿಂದಿನ ಲೆಕ್ಕಾಚಾರದಂತೆ ಹಿಂದಕ್ಕೆ ಪರಿಗಣಿಸಿ ಋಗ್ವೇದದ ಆರಂಭ ಕಾಲವನ್ನು ಕ್ರಿ.ಪೂ. 1200 ಎಂದು ನಿರ್ಧರಿಸಬಹುದು. ಇದು ಮ್ಯಾಕ್ಸ್ ಮ್ಯುಲರ್ ಅವರ ವಾದ.

ಮೇಲು ನೋಟಕ್ಕೆ ಈ ವಾದವು ವಿಶ್ವಸನೀಯವೆಂದು ಕಂಡರೂ, ಅದರಲ್ಲಿ ಕೆಲವು ನ್ಯೂನತೆಗಳಿವೆಯೆಂಬುದು ಸೂಕ್ಷ್ಮದೃಷ್ಟಿಗೆ ಗೋಚರವಾಗುತ್ತದೆ. ಮೊದಲನೆಯದಾಗಿ ಇಡೀ ವಾದವು ಕಾತ್ಯಾಯನ ಮತ್ತು ವರರುಚಿ ಒಬ್ಬರೇ ವ್ಯಕ್ತಿ ಎಂಬ ಕಲ್ಪನೆಯ ಮೇಲೆ ನಿಂತಿದೆ. ಇದು ನಿರ್ವಿವಾದವಾಗಿ ನಿರ್ಣೀತವಾಗಿಲ್ಲ. ಅಲ್ಲದೆ ಒಂದೊಂದು ಅವಧಿಯ ಕಾಲವನ್ನು 200

ವರ್ಷಗಳೆಂದು ಭಾವಿಸಲು ಏನು ಆಧಾರವಿದೆ ? ಎಂಬ ಪ್ರಶ್ನೆಗೂ ಅವಕಾಶವಿದೆ. ಆ ಕಾಲವು 200 ವರ್ಷಗಳೇಕೆ ? 500 ವರ್ಷಗಳೋ 1000 ವರ್ಷಗಳೋ ಆಗಿರಬಹುದಾಗಿತ್ತು ಎಂದು ಕೇಳಬಹುದು. ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ನೋಡಿದಾಗ 200 ವರ್ಷಗಳಂತೂ ಅತಿ ಕಡಿಮೆ ಅವಧಿಯೆನ್ನಿಸುತ್ತದೆ. ಆದ್ದರಿಂದ ಮ್ಯಾಕ್ಸ್ ಮ್ಯುಲರ್ ಅವರ ವಾದವನ್ನು ಒಪ್ಪಿಕೊಳ್ಳುವಂತಿಲ್ಲ.

2) ಹೆಚ್ಚು ಕಡಿಮೆ ಮ್ಯಾಕ್ಸ್ ಮ್ಯುಲರ್ ಅವರ ವಿಚಾರಸರಣೀಯನ್ನೇ ಅನುಸರಿಸಿ ವ್ಹಿಟ್ನಿ (Whitney) ಅವರು ಋಗ್ವೇದದ ಕಾಲವನ್ನು ಕ್ರಿ.ಪೂ. 1500ದಿಂದ ಕ್ರಿ.ಪೂ. 2000ದವರೆಗೆ ಹಿಂದಕ್ಕೆ ಕೊಂಡೊಯ್ದಿದ್ದಾರೆ. ಪ್ರಾಚೀನ ಕಾಲದ ಭಾಷೆಯ ವಿಕಸನದ ವಿಷಯವನ್ನು ಆಧುನಿಕ ಭಾಷೆಗಳ ಬೆಳವಣಿಗೆ ಸಮಾನವಾಗಿ ಪರಿಗಣಿಸಿ ಸಮಾಲೋಚಿಸುವ ಮಾರ್ಗವೇ ಸರಿಯಲ್ಲವಾದ್ದರಿಂದ ಈ ವಾದವೂ ಕೂಡ ವಿಶ್ವಾಸಾರ್ಹವಾಗಿಲ್ಲ.

3) ಎರಡನೆ ಗುಂಪಿಗೆ ಸೇರಿದ ವಾದಗಳಲ್ಲಿ ಮೊದಲಿನದು ಹಾಗ್ (Haug) ಅವರದು. ವೇದಾಂಗ ಜ್ಯೋತಿಷದ ಒಂದು ವಾಕ್ಯದಲ್ಲಿ ಆಯನಾಂತ ಸ್ಥಿತಿಯ ಬಗ್ಗೆ ಬರುವ ಉಲ್ಲೇಖದ ಆಧಾರದಿಂದ ಖಗೋಲಶಾಸ್ತ್ರೀಯ ಲೆಕ್ಕಾಚಾರವನ್ನು ಮಾಡಿ ಹಾಗ್ ಅವರು ಸಂಹಿತೆಗಳ ಕಾಲವನ್ನು ಕ್ರಿ.ಪೂ. 1400ರಿಂದ ಕ್ರಿ.ಪೂ. 2000ರವರೆಗೆ ಹಿಂದಕ್ಕೆ ಮತ್ತು ಋಗ್ವೇದದ ಸೂಕ್ತಗಳ ಕಾಲವನ್ನು ಕ್ರಿ.ಪೂ. 2000ರಿಂದ ಕ್ರಿ.ಪೂ. 2400ರವರೆಗೆ ಹಿಂದಕ್ಕಿರಬೇಕೆಂದು ನಿರ್ಧರಿಸಿದ್ದಾರೆ.

4) ಬಾಲಗಂಗಾಧರ ತಿಲಕ್ ಅವರು ಋಗ್ವೇದದ ಸೂಕ್ತಗಳ ಕಾಲವು ಇನ್ನೂ ಹೆಚ್ಚು ಪ್ರಾಚೀನವೆಂದು ಖಗೋಲಶಾಸ್ತ್ರೀಯ ಲೆಕ್ಕಾಚಾರದಿಂದ ತೋರಿಸಿದ್ದಾರೆ. ಋಗ್ವೇದದಲ್ಲಿ ವ್ಯಕ್ತವಾಗುವ ಪರಂಪರೆಗಳು ಅದರ ಕಾಲವನ್ನು ಕ್ರಿ.ಪೂ. 4000ಕ್ಕಿಂತ ಅನಂತರವಲ್ಲವೆಂದು ತೋರಿಸುತ್ತವೆ. ಆಗ ಮಹಾವಿಷುವ ಅಥವಾ ಮೇಷರಾಶಿಯು ಮೃಗಶೀರ್ಷ ತಾರಾಗಣದಲ್ಲಿ ಇರುತ್ತಿತ್ತು. ಅಂದರೆ ಆಗ ಕುಕ್ಕುರವೆಂಬ ನಕ್ಷತ್ರವು - (- ಅದು ಉದಿಸಿದಾಗ ಅತ್ಯುಷ್ಣ ಕಾಲವಿರುತ್ತದೆ) - ವಿಷುವೀಯ ವರ್ಷವನ್ನು ಆರಂಭಿಸುತ್ತಿತ್ತು ಎಂದು ತಿಳಿದುಬರುತ್ತದೆ. ಬ್ರಾಹ್ಮಣಗಳ ಕಾಲದಲ್ಲಿ ಮಹಾವಿಷುವವು ಕೃತ್ತಿಕಾದಲ್ಲಿರುತ್ತಿತ್ತು. ಹೀಗೆ ಮಹಾವಿಷುವದ ಕೃತ್ತಿಕಾದಿಂದ ಮೃಗಶೀರ್ಷದವರೆಗಿನ ಬದಲಾವಣೆಯು ಸುಮಾರು 2000 ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಕ್ರಿ.ಪೂ. 2500ರಲ್ಲಿ ಮಹಾವಿಷುವವು ಕೃತ್ತಿಕಾದಲ್ಲಿರುತ್ತಿತ್ತು. ಮಹಾವಿಷುವವು ಮೃಗಶೀರ್ಷದಲ್ಲಿದ್ದದ್ದು ಕ್ರಿ.ಪೂ. 4500ರಲ್ಲಿ ಎಂದು ಲೆಕ್ಕಾಹಾಕಬಹುದು. ಅದು ಋಗ್ವೇದದ ಕಾಲವಾಗಿತ್ತು. ಆ ಕಾಲವು ತಿಲಕರ ಪ್ರಕಾರ ಹಿಂದಕ್ಕೆ ಕ್ರಿ.ಪೂ. 6000ವರೆಗೂ ಹೋಗಬಹುದು.

5) ಯಾಕೋಬಿ (Jacobi) ಅವರು ಋಗ್ವೇದದ ಕಾಲದಿಂದ ಋತುಗಳ ಆರಂಭದಲ್ಲಿ ಆದ ಬದಲಾವಣೆಗಳಿಗೆ ಸಂಬಂಧಿಸಿದಂತೆ ಖಗೋಳಶಾಸ್ತ್ರೀಯ ಲೆಕ್ಕಾಚಾರವನ್ನು ಮಾಡಿ ಅದರ ಕಾಲವನ್ನು ಕ್ರಿ.ಪೂ. 4500 ಎಂದು ನಿರ್ಣಯಿಸಿದ್ದಾರೆ.

ಋಗ್ವೇದದ ಕಾಲದ ಬಗ್ಗೆ ಇರುವ ಈ ವಾದಗಳು ವಿಷಯದ ಜಟಿಲತ್ವವನ್ನೂ ಅದರ ರಹಸ್ಯವನ್ನು ಕಂಡುಕೊಳ್ಳುವ ವಿದ್ವಾಂಸರ ಪ್ರಯತ್ನವನ್ನೂ ಬಿಂಬಿಸುತ್ತವೆ. ಖಗೋಳಶಾಸ್ತ್ರೀಯ ಲೆಕ್ಕಾಚಾರಗಳನ್ನು ಅವಲಂಬಿಸಿದ ವಾದಗಳು ತಮಗೆ ಉಪಲಬ್ಧವಾದ ಆಧಾರ ಮತ್ತು ಅವುಗಳ ವ್ಯಾಖ್ಯಾನವನ್ನು ಆಧರಿಸಿರುವುದರಿಂದ ಹೆಚ್ಚು ವಿಶ್ವಾಸಾರ್ಹವಾಗಿವೆ. ಬಾಲಗಂಗಾಧರತಿಲಕ್ ಮತ್ತು ಯಾಕೋಬಿಯವರು ಬೇರೆ ಬೇರೆ ಆಧಾರದ ಲೆಕ್ಕಾಚಾರವನ್ನು ಅವಲಂಬಿಸಿ 'ಋಗ್ವೇದದ ಕಾಲವು ಕ್ರಿ.ಪೂ. 4500' ಎಂಬ ಸಮಾನವಾದ ನಿರ್ಣಯಕ್ಕೆ ಬಂದಿದ್ದಾರೆ. ಎಲ್ಲಾ ವಾದಗಳ ಸಾರಾಂಶವನ್ನು ಗ್ರಹಿಸಿ ಹೇಳುವುದಾದರೆ ವೈದಿಕ ಸಾಹಿತ್ಯದ ಕಾಲದ ಉತ್ತರ ಸೀಮೆ ಕ್ರಿ.ಪೂ. 800ಕ್ಕಿಂತ ಈಚೀನದಲ್ಲ. ಇನ್ನು ಅದರ ಕಾಲದ ಪೂರ್ವಸೀಮೆಯೆಂದರೆ ಋಗ್ವೇದದ ಕಾಲ. ಅದರ ನಿರ್ಣಯಕ್ಕಾಗಿ ನಡೆದ ಪ್ರಯತ್ನಗಳು ಅಂತಿಮವಾಗಿ ಸಫಲವಾಗಿಲ್ಲದಿದ್ದರೂ, ಆ ದಿಶೆಯಲ್ಲಿ ದೃಢವಾದ ಹೆಜ್ಜೆಯನ್ನು ಇಟ್ಟಿವೆ. ಈ ಪೂರ್ವಸೀಮೆಯಂತೂ ಕ್ರಿ.ಪೂ. 1200ರಷ್ಟು ಅನಂತರದ್ದು ಆಗಲು ಸಾಧ್ಯವಿಲ್ಲ. ಬಹುಶಃ ಈ ಪೂರ್ವಸೀಮೆಯನ್ನು ಬಾಲಗಂಗಾಧರ ತಿಲಕ ಮತ್ತು ಯಾಕೋಬಿಯವರ ನಿರ್ಣಯದ ಪರವಾಗಿ ನಿರ್ಣಯಿಸುವುದು ಪ್ರಸ್ತುತದಲ್ಲಿ ಹೆಚ್ಚು ಸಮಂಜಸವಾಗಿವೆ.

## 1.1.4 ಪುನರಾವೃತ್ತಿಯ ಅಂಶಗಳು ಮತ್ತು ಸಾರಾಂಶ

1) ಸಂಸ್ಕೃತ ವಿದ್ಯಾರ್ಥಿಗಳಿಗೆ ಬಿ.ಎ. ಐಚ್ಛಿಕ ಮತ್ತು ಎಂ.ಎ. ಸಂಸ್ಕೃತ ಸ್ತರದಲ್ಲಿ ವೇದದ ಅಧ್ಯಯನವು ನಿಯುಕ್ತ.

2) ಪ್ರಾಚೀನ ಸಂಸ್ಕೃತದ ಸ್ವರೂಪವನ್ನು ತಿಳಿಸುವ ಉದ್ದೇಶ. ವಿಷಯದ ದೃಷ್ಟಿಯಿಂದ ಭಾರತೀಯ ಶಾಸ್ತ್ರಗಳ ಮೂಲವನ್ನು ಗುರುತಿಸುವುದು ಇನ್ನೊಂದು ಉದ್ದೇಶ.

3) 'ವೇದ' ಶಬ್ದವು 'ವಿದ್-ಜ್ಞಾನೇ' ಧಾತುವಿನಿಂದ ನಿಷ್ಪನ್ನ. ಅದರ ಅರ್ಥ ಜ್ಞಾನ ಮತ್ತು ಜ್ಞಾನವನ್ನು ಒಳಗೊಂಡ ಗ್ರಂಥ.

4) ಮಂತ್ರ ಮತ್ತು ಬ್ರಾಹ್ಮಣ ಎರಡಕ್ಕೂ ವೇದ ಎಂದು ಹೆಸರು. ಅಪೌರುಷೇಯ ವಾಕ್ಯ ವೇದ ಎಂಬುದು ಮೀಮಾಂಸಕರ ಲಕ್ಷಣ.

5) ಪುರುಷ ರೂಪದ ಸರ್ವಹವಿಸ್ಸಿನಿಂದ ಯಜ್ಞ ಮಾಡಿದಾಗ ವೇದಗಳು ಅದರಿಂದ ಹುಟ್ಟಿದವು. ಪರಮಾತ್ಮನು ಬ್ರಹ್ಮನಿಗೆ ವೇದಗಳನ್ನು ಬೋಧಿಸಿದನು. ವೇದಗಳು ಪರಮಾತ್ಮನ ಉಸಿರು. ವೇದವು ಅಪೌರುಷೇಯ. ಋಷಿಗಳು ಮಂತ್ರದ್ರಷ್ಟಾರರು, ಮಂತ್ರದ ರಚಯಿತೃಗಳಲ್ಲ.

6) ವೇದಗಳ ವರ್ಗೀಕರಣ ಮೊದಲು ಪರಾವಿದ್ಯಾ ಅಪರಾವಿದ್ಯಾ ಎಂದು. ಇದು ಜ್ಞಾನಕಾಂಡ ಮತ್ತು ಕರ್ಮಕಾಂಡಗಳಿಗೆ ಸಂವಾದಿಯಾದ ವರ್ಗೀಕರಣ. ವೇದವ್ಯಾಸರು ಋಗ್ವೇದಾದಿ ವಿಭಾಗ ಮಾಡಿ ಪೈಲ, ವೈಶಂಪಾಯನ, ಜೈಮಿನಿ ಮತ್ತು ಸುಮಂತು ಎಂಬ ತಮ್ಮ ಶಿಷ್ಯರಿಗೆ ಅವುಗಳ ಪರಂಪರೆಯನ್ನು ವಹಿಸಿದರು.

7) ಋಗ್ವೇದ ಸಂಹಿತೆಯು ಮೂಲತಃ ಪ್ರಾಕೃತಿಕ ಶಕ್ತಿಗಳಾದ ಅಗ್ನಿ, ಇಂದ್ರ, ವರುಣ, ರುದ್ರ ಮುಂತಾದ ದೇವತೆಗಳ ಸ್ತುತಿರೂಪ ಸೂಕ್ತಗಳ ಸಂಗ್ರಹ. ಅದರಲ್ಲಿ ಸಾಮಾಜಿಕ ಅಂಶಗಳನ್ನೊಳಗೊಂಡ ಲೌಕಿಕ ಸೂಕ್ತಗಳೂ ತತ್ತ್ವವಿಚಾರವನ್ನೊಳಗೊಂಡ ಸೂಕ್ತಗಳೂ ಇವೆ. ಯಜುರ್ವೇದದಲ್ಲಿ ಕೃಷ್ಣ ಮತ್ತು ಶುಕ್ಲವೆಂದು ಎರಡು ವಿಭಾಗಗಳಿವೆ. ಅವುಗಳಲ್ಲಿ ಯಜ್ಞಕರ್ಮವನ್ನು ನಡೆಸುವ ಅಧ್ವರ್ಯುವಿಗೆ ಸಂಬಂಧಿಸಿದ ಮಂತ್ರಗಳೂ ಕರ್ಮವಿಧಾಯಕ ವಾಕ್ಯಗಳೂ (ಯಜುಸ್ಸುಗಳೂ) ಇವೆ. ಸಾಮವೇದವು ಸೋಮಯಾಗಕ್ಕೆ ಸಂಬಂಧಪಟ್ಟ ವೇದ. ಋಗ್ವೇದದ ಮಂತ್ರಗಳೇ ಅದರಲ್ಲಿ ಹೆಚ್ಚಾಗಿ ಇದೆ. ಅವುಗಳಿಗೆ ಗಾನೋಪಯೋಗಿ ಪ್ರಸ್ತಾರವನ್ನು ಹಾಕಲಾಗಿದೆ. ಅಥರ್ವವೇದವು ಲೌಕಿಕ ಜೀವನದ ಜಂಜಡಗಳನ್ನು ದೂರಗೊಳಿಸುವ ಯಂತ್ರ-ತಂತ್ರಗಳ ಸಂಕಲನವಾಗಿದೆ.

8. ಬ್ರಾಹ್ಮಣಗಳು ಯಜ್ಞಕರ್ಮದ ವಿವರಗಳನ್ನು ಕೊಡುತ್ತವೆ. ಅವುಗಳು ಬೇರೆ ಬೇರೆ ವೇದಗಳ ಶಾಖೆಗಳಿಗೆ ಸಂಬಂಧಿಸಿವೆ. ವಿಧಿ ಮತ್ತು ಅರ್ಥವಾದ ಎಂಬವು ಅವುಗಳ ಮುಖ್ಯ ಭಾಗಗಳು.

9. ಆರಣ್ಯಕಗಳು ಮೂಲತಃ ಬ್ರಾಹ್ಮಣಗಳ ಭಾಗಗಳು. ಅವು ವಾನಪ್ರಸ್ಥಾಶ್ರಮಿಗಳಿಗೆ ಉಪಯುಕ್ತ. ಯಾಗಗಳ ಸಾಂಕೇತಿಕ ಅರ್ಥವನ್ನು ನಿರೂಪಿಸುತ್ತವೆ. ಬ್ರಾಹ್ಮಣಗಳಿಗೂ ಉಪನಿಷತ್ತುಗಳಿಗೂ ಮಧ್ಯೆ ಸೇತುವೆಗಳಾಗಿವೆ.

10. ಉಪನಿಷತ್ತುಗಳು ಸಾಮಾನ್ಯವಾಗಿ ಆರಣ್ಯಕಗಳ ಕೊನೆಯ ಭಾಗಗಳು. ಅವೂ ಬೇರೆ ಬೇರೆ ವೇದಶಾಖೆಗಳಿಗೆ ಸೇರಿವೆ. ಅವುಗಳಲ್ಲಿ ಬ್ರಹ್ಮ, ಆತ್ಮ, ಜಗತ್ತುಗಳ ಬಗ್ಗೆ ತಾತ್ತ್ವಿಕ ವಿಚಾರವನ್ನು ಮುಂದಿಡಲಾಗಿದೆ.

11. ಋಗ್ವೇದದ ಅಧ್ಯಯನದಿಂದ ಪ್ರಾಚೀನ ಕಾವ್ಯ ಮತ್ತು ಪ್ರಾಚೀನ ತತ್ತ್ವಮೀಮಾಂಸೆಯ ಪರಿಚಯವಾಗುತ್ತದೆ. ಧರ್ಮ, ತತ್ತ್ವಶಾಸ್ತ್ರ, ಅನುಭಾವ, ಸಾಮಾಜಿಕ ಮೌಲ್ಯಗಳು ಮುಂತಾದವುಗಳಿಗೆ ಮೂಲ ಆಕರ ಋಗ್ವೇದ. ಪ್ರಾಚೀನ ಜನಾಂಗದ ಇತಿಹಾಸಕ್ಕೆ ಅದು ಕನ್ನಡಿ ಹಿಡಿಯುತ್ತದೆ. ಪ್ರಪಂಚದ ಪ್ರಾಚೀನ ಇತಿಹಾಸದ ವಿಶದೀಕರಣಕ್ಕೆ ಋಗ್ವೇದವು ಅನಿವಾರ್ಯ. ಅದರ ಅಧ್ಯಯನದ ಪ್ರಭಾವದಿಂದ ತೌಲನಿಕ ಭಾಷಾಶಾಸ್ತ್ರ ಮತ್ತು ತೌಲನಿಕ ಪುರಾಣ ಶಾಸ್ತ್ರಗಳ ಉದಯವಾಯಿತು.

12. ಋಗ್ವೇದದ ಸೂಕ್ತಗಳನ್ನು ಎರಡು ರೀತಿಯಲ್ಲಿ ವ್ಯವಸ್ಥೆಗೊಳಿಸಿದ್ದಾರೆ. ಮಂಡಲ ಮತ್ತು ಸೂಕ್ತಗಳ ಆಧಾರದಿಂದ ಒಂದು ವ್ಯವಸ್ಥೆ ಅಷ್ಟಕ, ಅಧ್ಯಾಯ ಮತ್ತು ವರ್ಗದ ಆಧಾರದಿಂದ ಇನ್ನೊಂದು ವ್ಯವಸ್ಥೆ. ಋಗ್ವೇದದಲ್ಲಿ ಎಂಟು ಅಷ್ಟಕಗಳಿವೆ (8 ಅಧ್ಯಾಯಗಳ ಸಮುದಾಯಕ್ಕೆ ಅಷ್ಟಕವೆಂದು ಹೆಸರು). ಒಂದೊಂದು ಅಧ್ಯಾಯದಲ್ಲೂ ಅನೇಕ ವರ್ಗಗಳಿವೆ. ಒಂದು ವರ್ಗದಲ್ಲಿ ಐದೋ ಆರೋ ಮಂತ್ರಗಳಿರುತ್ತದೆ. ಇನ್ನೊಂದು ವ್ಯವಸ್ಥೆಯ ಪ್ರಕಾರ ಋಗ್ವೇದದಲ್ಲಿ 10 ಮಂಡಲಗಳಿವೆ. ಅವುಗಳಲ್ಲಿ 43ರಿಂದ 191ರವರೆಗಿನ ಸಂಖ್ಯೆಯ ಸೂಕ್ತಗಳ ಸಮುದಾಯಗಳಿವೆ. ಎರಡನೇ ಮಂಡಲದಿಂದ ಏಳನೆಯ ಮಂಡಲದವರೆಗಿನ ಆರು ಮಂಡಲಗಳು ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ, ಭರದ್ವಾಜ ಮತ್ತು ವಸಿಷ್ಠರ ವಂಶಗಳಿಗೆ ಸೇರಿದ ವಂಶೀಯ ಮಂಡಲಗಳು. ಒಂಬತ್ತನೆಯ ಮಂಡಲವು ಸೋಮಸೂಕ್ತಗಳಿಗೆ ಮೀಸಲಾಗಿದೆ.

13. ಋಗ್ವೇದದಲ್ಲಿ ಬರುವ ಹೆಚ್ಚು ಸೂಕ್ತಗಳು ಧಾರ್ಮಿಕ ಸೂಕ್ತಗಳು. ಅವು ಯಜ್ಞಗಳಿಗೆ ಉಪಯುಕ್ತವಾದ ಸೂಕ್ತಗಳು. ಕೆಲವು ಸೂಕ್ತಗಳು ಲೌಕಿಕ ವಿಷಯಗಳನ್ನು ಒಳಗೊಂಡಿವೆ. ಮತ್ತೆ ಕೆಲವು ತತ್ತ್ವವಿಚಾರವನ್ನು ಒಳಗೊಂಡಿವೆ.

14. ಋಗ್ವೇದದ ಧರ್ಮವು 'ಏಕಂ ಸದ್ ವಿಪ್ರಾ ಬಹುಧಾ ವದಂತಿ" ಎಂಬ ಸೂತ್ರವಾಕ್ಯದಂತೆ ಅನೇಕ ದೇವತೆಗಳ ಪೂಜೆಯಲ್ಲಿ ಒಬ್ಬನೇ ಪರಮಾತ್ಮನನ್ನು ಕಾಣುವ ವೈಶಿಷ್ಟ್ಯದಿಂದ ಕೂಡಿದೆ. ಎಲ್ಲಾ ದೇವತೆಗಳೂ ಪರಮಾತ್ಮನ ವಿವಿಧ ಶಕ್ತಿಗಳು.

15. ಋಗ್ವೇದದ ಕಾಲದ ಬಗ್ಗೆ ಬೇರೆ ಬೇರೆ ವಾದಗಳಿವೆ. ಕೆಲವು ಭಾಷೆಯನ್ನು ಅವಲಂಬಿಸಿದ ವಾದಗಳು ಮತ್ತೆ ಕೆಲವು ಖಗೋಳಶಾಸ್ತ್ರೀಯ ಲೆಕ್ಕಾಚಾರವನ್ನು ಅವಲಂಬಿಸಿದ ವಾದಗಳು. ಮ್ಯಾಕ್ಸ್ ಮ್ಯುಲ್ಲರ್ ಮತ್ತು ವ್ಹಿಟ್ನಿ ಅವರ ವಾದಗಳು ಮೊದಲ ಗುಂಪಿಗೆ ಸೇರಿದವು. ಅವರ ಪ್ರಕಾರ ಋಗ್ವೇದದ ಕಾಲ ಕ್ರಮವಾಗಿ

ಕ್ರಿ.ಪೂ. 1200 ಮತ್ತು ಕ್ರಿ.ಪೂ.2000. ಹಾಗ್, ಬಾಲಗಂಗಾಧರ ತಿಲಕ್ ಮತ್ತುಯಾಕೋಬಿ ಅವರ ವಾದಗಳು ಎರಡನೆ ಗುಂಪಿಗೆ ಸೇರಿದವು. ಅವರ ಪ್ರಕಾರ ಋಗ್ವೇದದ ಕಾಲ ಕ್ರಮವಾಗಿ ಕ್ರಿ.ಪೂ. 2400, ಕ್ರಿ.ಪೂ. 4500 - 6000 ಮತ್ತು ಕ್ರಿ.ಪೂ. 4500.

## 1.1.5 ಪ್ರಶ್ನೆಗಳು

1.1.5.1. ವೈದಿಕ ಸಾಹಿತ್ಯವನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

1.1.5.2. ಋಗ್ವೇದದ ಅಧ್ಯಯನದ ಪ್ರಾಮುಖ್ಯತೆಯನ್ನು ಸಾಧಾರವಾಗಿ ನಿರೂಪಿಸಿರಿ.

1.1.5.3. ಋಗ್ವೇದದ ವಿಷಯಗಳನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

1.1.5.4. ಋಗ್ವೇದದ ಧರ್ಮಸ್ವರೂಪ ಮತ್ತು ತತ್ತ್ವವಿಚಾರವನ್ನು ಸಂಕ್ಷಿಪ್ತವಾಗಿ ನಿರೂಪಿಸಿರಿ.

1.1.5.5. ಋಗ್ವೇದದ ಕಾಲದ ಬಗ್ಗೆ ಇರುವ ವಾದಗಳನ್ನು ವಿಮರ್ಶಿಸಿರಿ.

1.1.5.6. ಲಘು ಟಿಪ್ಪಣಿ ಬರೆಯಿರಿ.

(i) ಸಂಹಿತೆಗಳು (ii) ಬ್ರಾಹ್ಮಣಗಳು (iii) ಆರಣ್ಯಕಗಳು

(iv) ಉಪನಿಷತ್ತುಗಳು (v) ಸಂವಾದ ಸೂಕ್ತಗಳು

(vi) ತತ್ತ್ವಶಾಸ್ತ್ರೀಯ ಸೂಕ್ತಗಳು

## 1.1.6 ಪರಿಶೀಲನ ಗ್ರಂಥಗಳು


1) Macdonell : **Vedic Reader for students.**

2) Macdonell : **A History of Sanskrit Literature.**

3) Ghate's **Lectures on Ṛgveda**

4) **History of Indian Literature** by M. Winternitz, Vol. I, Part I.

5) **A History of Ancient Sanskrit Literature** by Max Mueller.

6) **Vedabharati :** Dr M. Sivakumar Swamy.

7) **The Religion of the Veda** by Bloomfield.

8) **History of Vedic Literature** by C.V. Vaidya.

9) **ವೈದಿಕ ಸಾಹಿತ್ಯ ಚರಿತ್ರೆ :** ಡಾ|| ಎನ್.ಎಸ್. ಅನಂತರಂಗಾಚಾರ್

**NOTES**

## ಘಟಕ – 2

## ವೇದದ ಅಧ್ಯಯನ (ಸಾಮಾನ್ಯ ವಿಷಯ - ಮುಂದುವರೆದಿದೆ) ಮತ್ತು ವೈದಿಕ ವ್ಯಾಕರಣ (ರೂಪಗಳು ಮತ್ತು ಸ್ವರ)


1.2.1 ಮುನ್ನುಡಿ

1.2.2 ಉದ್ದೇಶಗಳು

1.2.3.1 ಋಗ್ವೇದದ ವ್ಯಾಖ್ಯಾನ

1.2.3.2 ಋಗ್ವೇದದ ವ್ಯಾಕರಣ ವಿಶೇಷಗಳು

1.2.3.3 ಋಗ್ವೇದದಲ್ಲಿ ಸ್ವರ ವಿಚಾರ

1.2.4 ಪ್ರಶ್ನೆಗಳು

## ಘಟಕ – 2

# ವೇದದ ಅಧ್ಯಯನ (ಸಾಮಾನ್ಯ ವಿಷಯ - ಮುಂದುವರೆದಿದೆ) ಮತ್ತು ವೈದಿಕ ವ್ಯಾಕರಣ (ರೂಪಗಳು ಮತ್ತು ಸ್ವರ)

## 1.2.1 ಮುನ್ನುಡಿ

ಋಗ್ವೇದದ ಸಾಮಾನ್ಯ ಮುನ್ನುಡಿಯನ್ನು ಮುಂದುವರೆಸಿ, ಭಾರತೀಯ ಭಾಷ್ಯಕಾರರು ಮತ್ತು ಆಧುನಿಕ ವ್ಯಾಖ್ಯಾನಕಾರರು (ಭಾರತೀಯ ಹಾಗೂ ಪಾಶ್ಚಾತ್ಯ)ಋಗ್ವೇದವನ್ನು ವ್ಯಾಖ್ಯಾನಿಸುವ ದಿಶೆಯಲ್ಲಿ ಮಾಡಿದ ಪ್ರಯತ್ನಗಳ ಪರಿಚಯವನ್ನು ಮಾಡಿಕೊಡುತ್ತದೆ. ಅನಂತರ ಋಗ್ವೇದದಲ್ಲಿ ಕಂಡು ಬರುವ ಶಬ್ದರೂಪಗಳ ಬಗ್ಗೆ ವ್ಯಾಕರಣಾಂಶಗಳನ್ನು ಮತ್ತು ಸ್ವರನಿಚಾರವನ್ನು ಕುರಿತ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ. ಇದು ನಿಯುಕ್ತವಾದ ಋಗ್ವೇದೀಯ ಸೂಕ್ತಗಳ ಅಧ್ಯಯನಕ್ಕೆ ಉಪಯುಕ್ತವಾಗಿದೆ. ಶಬ್ದರೂಪಗಳು ಮತ್ತು ಸ್ವರದ ಬಗ್ಗೆ ವೈದಿಕ ವ್ಯಾಕರಣದ ನಿಯಮಗಳನ್ನು ಅಧ್ಯಯನ ಮಾಡಿದ ಮಂತ್ರಗಳ ಟಿಪ್ಪಣಿಗಳಲ್ಲಿ ಉಲ್ಲೇಖಿಸಲಾಗಿದೆ. ಪಾಣಿನಿ ಸಂಪ್ರದಾಯದ ಸೂತ್ರ ಮತ್ತು ವಾರ್ತಿಕಗಳನ್ನು ಹಾಗೆಯೇ ಋಕ್‌ಪ್ರಾತಿಶಾಖ್ಯದ ನಿಯಮಗಳನ್ನು ಉಲ್ಲೇಖಿಸಿ ಸಮರ್ಥಿಸಲಾಗಿದೆ. ಇವುಗಳನ್ನು ವಿದ್ಯಾರ್ಥಿಗಳು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬಹುದಾಗಿದೆ. ಅವುಗಳನ್ನು ತಿಳಿದುಕೊಂಡು ಬಳಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ಮಾಡಲಾಗಿದೆ.

## 1.2.2 ಉದ್ದೇಶಗಳು

ಉದ್ದೇಶವೆಂದರೆ ವೈದಿಕಭಾಷೆ ಮತ್ತು ಗ್ರಂಥಸ್ಥ ಸಂಸ್ಕೃತ ಭಾಷೆಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸುವುದು. ವೇದದ ಭಾಷೆ ಮತ್ತು ವೇದದ ವಿಷಯಗಳ ಬಗ್ಗೆ ಸಂಸ್ಕೃತ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವುದೇ ಇದರ ಉದ್ದೇಶ.

## 1.2.3.1 ಋಗ್ ವೇದದ ವ್ಯಾಖ್ಯಾನಗಳು

ಪ್ರಾಚೀನ ಕಾಲದಿಂದಲೂ ವೇದದ ವ್ಯಾಖ್ಯಾನವೆಂಬುದೊಂದು ವಿದ್ವತ್ ಪರಿಶ್ರಮವಾಗಿತ್ತೆಂಬುದು ಉಲ್ಲೇಖಗಳಿಂದ ವ್ಯಕ್ತವಾಗುತ್ತದೆ. ವೇದವನ್ನು

ಅರ್ಥಮಾಡಿಕೊಳ್ಳುವ ಸಮಸ್ಯೆಯು ಋಗ್ವೇದದ ಕಾಲದಲ್ಲಿಯೇ ಎದುರಾಗಿತ್ತೆಂಬುದು ಕಂಡು ಬರುತ್ತದೆ. 'ವಾಕ್' ದೇವತೆಯನ್ನು ಕುರಿತಾದ ಒಂದು ಪ್ರಸಿದ್ಧ ಋಗ್ವೇದಿಯ ಸೂಕ್ತದಲ್ಲಿ ಹೇಳಿದಂತೆ ವಾಕ್ಕನ್ನು ಕೆಲವರು ಕಂಡರೂ ಕಾಣಲಾಗಲಿಲ್ಲ, ಕೇಳಿದರೂ ಕೇಳಲಾಗಲಿಲ್ಲ; ಆದರೆ ಕೆಲವರಿಗೆ ಮಾತ್ರ ವಾಗ್ದೇವತೆಯ ಪತಿಗೆ ಪ್ರಿಯಕಾಂತೆಯು ತನ್ನನ್ನು ತಾನು ಪ್ರದರ್ಶಿಸಿಕೊಂಡಂತೆ ವ್ಯಕ್ತವಾಗುತ್ತಾಳೆ.

उत त्वः पश्यन्न ददर्श वाचमुत त्वः शृण्वन्न शृणोत्येनाम् ।

उतो त्वस्मै तन्वं विसस्रे जायेव पत्य उशती सुवासाः ।।

(Rv. 10.71.4)

ಯಾಸ್ಕನು ಹೇಳಿದಂತೆ ಈ ಮಂತ್ರದ ಪೂರ್ವಾರ್ಧವು ಅಜ್ಞಾನಿಯನ್ನು ವರ್ಣಿಸಿದರೆ, ಉತ್ತರಾರ್ಧವು ಅರ್ಥಜ್ಞನನ್ನು ಕೊಂಡಾಡುತ್ತದೆ (ನಿರುಕ್ತ, 1.19). ವೇದದ ಅರ್ಥವು ಕೇವಲ ನಿತ್ಯಪರಿಶ್ರಮಿ ವಿದ್ವಾಂಸನಿಗೆ ಮಾತ್ರ ವ್ಯಕ್ತವಾಗುತ್ತದೆಯೆಂಬುದು ಈ ಮಾತಿನ ತಾತ್ಪರ್ಯ.

**ಬ್ರಾಹ್ಮಣಗಳಲ್ಲಿ ಮೊದಲ ಪ್ರಯತ್ನಗಳು :** ವೇದ ವ್ಯಾಖ್ಯಾನದ ಮೊದಲ ಪ್ರಯತ್ನಗಳನ್ನು ಯಜ್ಞಕರ್ಮಗಳನ್ನು ವಿವರಿಸುವ ಬ್ರಾಹ್ಮಣ ಗ್ರಂಥಗಳ ಅರ್ಥವಾದ ಭಾಗಗಳಲ್ಲಿ ಕಾಣಬಹುದು. ಅವುಗಳಲ್ಲಿ ಯಜ್ಞಕ್ರಿಯೆಗಳ ಬೆಲೆ ಮತ್ತು ಮಹತ್ತ್ವಗಳ ಬಗ್ಗೆ ಚರ್ಚೆ ಬರುತ್ತದೆ, ಜೊತೆಗೆ ಯಜ್ಞಕರ್ಮಾಂಗವಾಗಿ ಬರುವ ಮಂತ್ರಗಳ ವ್ಯಾಖ್ಯಾನಗಳೂ ಬರುತ್ತವೆ. ಉದಾಹರಣೆಗೆ ಐತರೇಯ ಬ್ರಾಹ್ಮಣದಲ್ಲಿ (1.32) ಪ್ರಸಕ್ತ ಯಜ್ಞಕ್ರಿಯೆಯೊಂದರಲ್ಲಿ ವಿನಿಯೋಗಿಸುವುದಕ್ಕೆ सर्वे नन्दन्ति यशसागतेन ---- ಮತ್ತು अगन् देव ऋतुभिः ಇತ್ಯಾದಿ ಮಂತ್ರಗಳನ್ನು ವ್ಯಾಖ್ಯಾನಿಸಲಾಗಿದೆ. ಬ್ರಾಹ್ಮಣಗಳಲ್ಲಿ ಬರುವ ನಿಷ್ಪತ್ತಿಗಳು ಯಾಸ್ಕ ನಿರುಕ್ತದ ಪೂರ್ವಸ್ಮರಣೆಯನ್ನು ಮಾಡಿಕೊಡುತ್ತವೆ. ಉದಾಹರಣೆಗೆ ನೋಡಿ :

1) वृत्रो ह वै इदं सर्वं वृत्वा शिश्ये । यदिदमन्तरेण

द्यावापृथिवी स इदं वृत्वा शिश्ये तस्माद् वृत्रो नाम ।

(ಶತಪಥ ಬ್ರಾಹ್ಮಣ. 1.1.3.4)

2) इन्द्रो ह वृत्रमशकद् हन्तुमभि तस्माच्छक्रर्यः ।

(ಕೌಶೀತಕೀ ಬ್ರಾಹ್ಮಣ. 23.2)

3) रथं मर्या क्षेप्लातारीत् इति तद् रथन्तरस्य

रथन्तरत्वम् | (ತಾಂಡ್ಯ ಬ್ರಾಹ್ಮಣ. 7.6.4)

ಇವು ನಿರುಕ್ತಕ್ಕೆ ಮೂಲಸ್ಫೂರ್ತಿಗಳಾಗಿದ್ದಿರಬಹುದು.

**ಯಾಸ್ಕನ ನಿರುಕ್ತ :** ಯಾಸ್ಕನು ಋಗ್ವೇದದ ಒಂದು ಪದಕೋಶವನ್ನು ಸಿದ್ಧಗೊಳಿಸಿದ್ದಾನೆ. ಅದಕ್ಕೆ ನಿಘಂಟು ಎಂದು ಹೆಸರು. ಆ ಪದಗಳ ಅರ್ಥ ವಿವರಣೆ ಮಾಡುವಾಗ ಋಗ್ವೇದದ ಸುಮಾರು 600 ಮಂತ್ರಗಳನ್ನು ಉಲ್ಲೇಖಿಸಿ ಶಬ್ದಗಳ ನಿರುಕ್ತಿಗಳನ್ನು ಕೊಡುವ ಮೂಲಕ ವಿವರಿಸಿದ್ದಾನೆ. ಈ ಗ್ರಂಥದ ಕಾಲ ಸುಮಾರು ಕ್ರಿ.ಪೂ. 6 ಅಥವಾ 7ನೇ ಶತಮಾನವಿರಬಹುದು. ಹೀಗೆ ನಿರುಕ್ತವು ಆಯ್ದ ಋಗ್ವೇದ ಮಂತ್ರಗಳ ನಿರುಕ್ತಿಪೂರ್ವಕ ವ್ಯಾಖ್ಯಾನವನ್ನು ಕೊಡುತ್ತದೆ. ಆದರೆ ಅದನ್ನು ಋಗ್ವೇದದ ನೇರ ಭಾಷ್ಯವೆಂದು ಪರಿಗಣಿಸಲಾಗದು.

ಯಾಸ್ಕನು ಅರ್ಥಜ್ಞಾನವಿಲ್ಲದೆ ಕೇವಲ ವೇದಪಠನವನ್ನು ಜರೆಯುತ್ತಾನೆ. स्थाणुरयं भारहारः किलाभूदधीत्य वेदं न विजानाति योऽर्थम्, ಅಂದರೆ, ವೇದವನ್ನು ಓದಿಯೂ ಅರ್ಥಮಾಡಿಕೊಳ್ಳದವನು ಕೇವಲ ಭಾರವನ್ನು ಹೊತ್ತ ಕಂಬದಂತೆ ಎನ್ನುತ್ತಾನೆ. ಋಗ್ವೇದ 10.71.5ನೇ ಮಂತ್ರದ ಮೇಲೆ ಟಿಪ್ಪಣಿ ಮಾಡುತ್ತಾ ಅವನು ವೈದಿಕ ಮಂತ್ರಗಳ ಮೂರು ವ್ಯಾಖ್ಯಾನ ಪದ್ಧತಿಗಳನ್ನು ಉಲ್ಲೇಖಿಸುತ್ತಾನೆ. ಯಾಜ್ಞ, ದೈವತ ಮತ್ತು ಅಧ್ಯಾತ್ಮ ಎಂಬವು ಆ ಮೂರು ವ್ಯಾಖ್ಯಾನ ಪದ್ಧತಿಗಳು. ಈ ಸಂದರ್ಭದಲ್ಲಿ ಅವನು ಹೀಗೆ ಹೇಳುತ್ತಾನೆ. ಅರ್ಥವು ಮಾತಿನ ಪುಷ್ಪ ಮತ್ತು ಫಲ. ಯಾಜ್ಞ ಅರ್ಥವು ಪುಷ್ಪವಾದರೆ, ದೈವತ ಅರ್ಥವು ಅದರ ಫಲ; ದೈವತ ಅರ್ಥವು ಪುಷ್ಪವಾದರೆ, ಅಧ್ಯಾತ್ಮ ಅರ್ಥವು ಅದರ ಫಲ. ನೋಡಿ.

अधेन्वा चरति माययैष वाचं शुश्रुवाँ अफलम्

अपुष्पम् | (ಋ. 10.71.5 - ಉತ್ತರಾರ್ಧ)

अर्थं वाचः पुष्पफलमाह | याज्ञदैवते पुष्पफले |

देवताध्यात्मे वा | (ನಿರುಕ್ತ. 1.20).

ಋಗ್ವೇದೀಯ ಮಂತ್ರಗಳ ತನ್ನ ವ್ಯಾಖ್ಯಾನದಲ್ಲಿ ಯಾಸ್ಕನು ಈ ಪದ್ಧತಿಗಳ ಅನ್ವಯವನ್ನು ತೋರಿಸಿದ್ದಾನೆ. ಉದಾಹರಣೆಗೆ यत्रा सुपर्णा अमृतस्य ಇತ್ಯಾದಿ (ಋ. 1.164.21)

ಮಂತ್ರದ ವಿವರಣೆಯಲ್ಲಿ ಅವನು ಅಧಿದೈವ ಮತ್ತು ಅಧ್ಯಾತ್ಮ ವ್ಯಾಖ್ಯಾನ ಪದ್ಧತಿಗಳನ್ನು ಹೆಸರಿಸಿ, ಅವೆರಡು ಪದ್ಧತಿಗಳ ಪ್ರಕಾರ ಮಂತ್ರವನ್ನೂ ವಿವರಿಸಿದ್ದಾನೆ. (ನೋಡಿ ನಿರುಕ್ತ. 3.12). ಅಲ್ಲದೆ ಅವನು ಐತಿಹಾಸಿಕವೆಂದು ಕರೆಯಲಾಗುವ ಪದ್ಧತಿಯನ್ನೂ ತಿಳಿದಿದ್ದು, ಅನೇಕ ಸಾರಿ ಆ ಪರಂಪರೆಯವರ ಅಭಿಪ್ರಾಯವನ್ನು ತನ್ನದೇ ಆದ ನೈರುಕ್ತ ಪದ್ಧತಿಯ ಅಭಿಪ್ರಾಯದೊಂದಿಗೆ ಹೋಲಿಸುತ್ತಾನೆ. ಉದಾಹರಣೆಗೆ ನೋಡಿ : तत्को वृत्रः | मेघ इति नैरुक्ताः | त्वाष्ट्रोऽसुर इति ऐतिहासिकाः | (ನಿರುಕ್ತ. 2.16). ಅವನು ಕೆಲವು ಮಂತ್ರಗಳಿಗೆ ಹಿನ್ನೆಲೆಯಾಗಿ ಇತಿಹಾಸಗಳನ್ನು ಉಲ್ಲೇಖಿಸುತ್ತಾನೆ. ಉದಾಹರಣೆಗೆ ಋಗ್ವೇದದ 3.33ನೇ ಸೂಕ್ತವಾದ ವಿಶ್ವಾಮಿತ್ರ ಮತ್ತು ನದಿಗಳ (ವಿಪಾಶ್ ಮತ್ತು ಶುಪದ್ರೀ) ಸಂವಾದಕ್ಕೆ ಹಿನ್ನೆಲೆಯಾಗಿ ವಿಶ್ವಾಮಿತ್ರನ ಇತಿಹಾಸವನ್ನು, ಋಗ್ವೇದದ 10.98 ಸೂಕ್ತವಾದ ವರ್ಷಕಾಮಸೂಕ್ತಕ್ಕೆ ಹಿನ್ನೆಲೆಯಾಗಿ ದೇವಾಪಿ ಮತ್ತು ಶಂತನುಗಳ ಇತಿಹಾಸವನ್ನು ಕೊಟ್ಟಿದ್ದಾನೆ. (ನೋಡಿ : ನಿರುಕ್ತ, 2.24-25, 11-12).

**ಐತಿಹಾಸಿಕ ಪದ್ಧತಿ : ಶೌನಕನ ಬೃಹದ್ದೇವತಾ :** ಶೌನಕನ ಬೃಹದ್ದೇವತೆಯು ಸಂಪೂರ್ಣವಾಗಿ ಐತಿಹಾಸಿಕ ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ. ಅದು ನಿರುಕ್ತಕ್ಕೂ ಮತ್ತು ಸ್ಕಂದಸ್ವಾಮಿ, ಉದ್ಗೀಥಾಚಾರ್ಯ, ವೆಂಕಟಮಾಧವ ಮತ್ತು ಸಾಯಣರ ಭಾಷ್ಯಗಳಿಗೂ ಮಧ್ಯದ ನಿಲುವನ್ನು ಅನುಸರಿಸುತ್ತದೆ. ಒಂದು ಕಡೆ ಅದು ಯಾಸ್ಕನ ನಿರುಕ್ತದ ಮೇಲೆ ಅವಲಂಬಿತವಾಗಿದ್ದು ಇನ್ನೊಂದು ಕಡೆ ಅನಂತರದ ಭಾಷ್ಯಕಾರರಿಗೆ ಸಾಮಗ್ರಿಯನ್ನು ಒದಗಿಸಿದೆ. ಅದರ ಮುಖ್ಯ ಉದ್ದೇಶ ಸೂಕ್ತಗಳ ಅಥವಾ ಸೂಕ್ತಗಳಲ್ಲಿನ ಮಂತ್ರಗಳ ದೇವತೆಗಳನ್ನು ಹೆಸರಿಸುವುದು. ಅದು ದೇವತೆಗಳ ಮತ್ತು ಋಷಿಗಳ ಬಗ್ಗೆ ಇದ್ದ ಇತಿಹಾಸ-ಪುರಾಣಗಳನ್ನು ಬಹುವಾಗಿ ಉಲ್ಲೇಖಿಸುತ್ತದೆ. ಅವುಗಳ ಹಿನ್ನೆಲೆಯಲ್ಲಿ ಆಯಾಯ ಸೂಕ್ತ ಅಥವಾ ಮಂತ್ರಗಳನ್ನು ಅರ್ಥಮಾಡಿಕೊಳ್ಳಬಹುದು.

**ಸಾಯಣಪೂರ್ವ ಋಗ್ವೇದ ಭಾಷ್ಯಕಾರರು :** ಸಾಯಣಪೂರ್ವ ಋಗ್ವೇದ ಭಾಷ್ಯಕಾರರೆಂದರೆ ಸ್ಕಂದಸ್ವಾಮಿ, ವೆಂಕಟಮಾಧವ ಮತ್ತು ಮಧ್ವಾಚಾರ್ಯ.

**ಸ್ಕಂದಸ್ವಾಮಿ**ಯು ವಲಭಿಯ ವಾಸಿಯಾಗಿದ್ದನೆಂದು ಋಗ್ವೇದದ ಅಷ್ಟಕಗಳ ಅಡಿಯಲ್ಲಿ ಬರುವ ಉಪಸಂಹಾರ ಶ್ಲೋಕಗಳಿಂದ ತಿಳಿದುಬರುತ್ತದೆ. ಭರ್ತೃಧ್ರುವ ಅವನ ತಂದೆ ಮತ್ತು ಅವನ ಕಾಲ ಕ್ರಿ.ಶ. 630 ಅವನ ಭಾಷ್ಯ ಉಪಲಬ್ಧವಾಗಿರುವುದು ಋ. 1.1ರಿಂದ 1.56.1, 1.62.1 ರಿಂದ 1.121.15; 5.57.1 ರಿಂದ 5.61.19; 6.29.1ರಿಂದ 6.75.6, ಈ ಭಾಗಗಳಿಗೆ ಮಾತ್ರ. ಅವನು ಯಾಜ್ಞಪ್ರಸ್ಥಾನದ ಅನುವರ್ತಿ ಭಾಷ್ಯಕಾರ. ಅವನ ಭಾಷ್ಯವು

ವಿಘ್ನೇಶನ ಸ್ತೋತ್ರದೊಂದಿಗೆ ಆರಂಭವಾಗುತ್ತದೆ. ಅವನು ವೈದಿಕವಾಕ್ಯಗಳನ್ನು ಐದು ಪ್ರಕಾರದವುಗಳೆಂದು ಪರಿಗಣಿಸುತ್ತಾನೆ.

1) प्रैषाः – ಆಹ್ವಾನಕ್ಕೆ ಮೀಸಲಾದವುಗಳು, ಉದಾ : ಯಜ್ಞಕ್ರಿಯೆಯೊಂದನ್ನು ಆರಂಭಿಸಲು ಒಬ್ಬ ಋತ್ವಿಜನನ್ನು ಕರೆಯುವುದು (दैव्याः शमितार आरभध्वम्, ಐತರೇಯ ಬ್ರಾಹ್ಮಣ. 2.6);

2) करणाः – ಕ್ರಿಯಾಸಂಬಂಧಿಗಳು (इदमहमर्वावसोः सदने सीदामि, ಶತಪಥಬ್ರಾಹ್ಮಣ, 1.5.1.24);

3) क्रियमाणानुवादिनः – ಕ್ರಿಯೆಯು ಸಂಪನ್ನವಾದ ಮೇಲೆ ಏನಾದರೂ ಹೇಳುವುದಕ್ಕೆ ಸಂಬಂಧಪಟ್ಟವುಗಳು (युवा सुवासाः, ಋ. 3.8.4);

4) शस्त्राभिष्टवनादिगताः – ಶಸ್ತ್ರ ಮುಂತಾದವುಗಳ ಪ್ರಶಂಸೆಗೆ ಸಂಬಂಧಿಸಿದವುಗಳು (आ त्वा रथं यथोतये, ಋ. 8.65.1); ಮತ್ತು

5) जपानुवचनादिगताः- ಪವಿತ್ರ ಪುನರುಕ್ತಿಗಳು ಮುಂತಾದವುಗಳಿಗೆ ಸಂಬಂಧಿಸಿದವುಗಳು (तदद्य वाचं प्रथमं मसीय, ಋ. 10.5.4; आपो रेवतीः ಋ. 10.30.12).

ಉದ್ಗೀಥಾಚಾರ್ಯನು ಋಗ್ವೇದದ 10.5.4ರಿಂದ 10.12.5 ಮತ್ತು 10.13.2ರಿಂದ 10.83.6, ಈ ಭಾಗಗಳ ಮೇಲೆ ಭಾಷ್ಯವನ್ನು ರಚಿಸಿದ್ದಾನೆ. ಅವನೂ ಯಾಜ್ಞಪರಂಪರೆಯ ಭಾಷ್ಯಕಾರ.

**ವೆಂಕಟಮಾಧವನು** ವೆಂಕಟಾರ್ಯನ ಮಗ - श्रीवेंकटार्यतनयो व्याचिकीर्षति माधवः (ಆರಂಭಿಕ ಶ್ಲೋಕ ಮೊದಲ ಭಾಗ). ಸುಂದರಿಯ ಮಗನೆಂದು ತನ್ನನ್ನು ಕರೆದುಕೊಂಡಿದ್ದಾನೆ – विश्वामित्रकुले जातः माधवः सुन्दरीसुतः (ಹಲವು ಅಧ್ಯಾಯಗಳ ಅಂತಿಮ ಶ್ಲೋಕ). ವೆಂಕಟಮಾಧವ ಎಂಬ ಹೆಸರಿನಲ್ಲಿ ಮೊದಲನೆಯದು ತಂದೆಯ ಹೆಸರು ಮತ್ತು ಎರಡನೆಯದು ತನ್ನ ಹೆಸರು. ಅವನ ಕಾಲ ಕ್ರಿ.ಶ. 10ನೆಯ ಶತಮಾನ (ಲಕ್ಷ್ಮಣ ಸ್ವರೂಪರ ಪ್ರಕಾರ). ಅವನ ಭಾಷ್ಯವು ಸಮಗ್ರವಾಗಿ ಋ. 1.1.1ರಿಂದ 10.191.4ರವರೆಗೆ ದೊರೆಯುತ್ತದೆ. ಯಾಜ್ಞಪರಂಪರೆಗೆ ಸೇರಿದ ಈ ಭಾಷ್ಯವು ಅತ್ಯಂತ ಸಂಕ್ಷಿಪ್ತವಾಗಿದೆ.

**ಮಧ್ವಾಚಾರ್ಯರ (ಪೂರ್ಣಪ್ರಜ್ಞ) ಋಗ್ಭಾಷ್ಯ :** ಶ್ರೀ ಮಧ್ವಾಚಾರ್ಯರ ಋಗ್ಭಾಷ್ಯವು ಆಯ್ದ ಋಗ್ವೇದ ಸೂಕ್ತಗಳಿಗೆ ಅಧ್ಯಾತ್ಮ ಪರವಾದ ವ್ಯಾಖ್ಯಾನವನ್ನೂ ಕೊಡುತ್ತದೆ. ಅದರಲ್ಲಿ

ಯಾಜ್ಞ ವ್ಯಾಖ್ಯಾನ ಪದ್ಧತಿಗೆ ಮಾನ್ಯತೆಯಿಲ್ಲ. ಮಧ್ವರ ಆಧ್ಯಾತ್ಮಿಕ ವ್ಯಾಖ್ಯಾನಕ್ಕೆ ವೇದದಲ್ಲಿಯೇ ಮೂಲಸ್ಫೂರ್ತಿಯಿದೆ. ಆಥರ್ವಣ ಉಪನಿಷತ್ತು ಹೇಳುವಂತೆ ಪರಾ ವಿದ್ಯಾ ಮತ್ತು ಅಪರಾವಿದ್ಯಾ ಎಂದು ಜ್ಞಾನದ ಎರಡು ಸ್ತರಗಳಿವೆ. ವೇದ ಮತ್ತು ವೇದಾಂಗಗಳಿಂದ ದೊರೆಯುವ ಜ್ಞಾನವು ಅಪರಾವಿದ್ಯಾ, ಅಕ್ಷರ ಪರಮಾತ್ಮನ ಬಗ್ಗೆ ಅವುಗಳಿಂದ ದೊರೆಯುವ ಜ್ಞಾನವು ಪರಾವಿದ್ಯಾ. (ಅಥರ್ವ ಉಪನಿಷತ್ 2.5.5).ಸಮಗ್ರ ವೇದವು ಪರಮ ದೇವ, ಅಂದರೆ, ವಿಷ್ಣುವಿನ ಅರ್ಥವನ್ನು ಕೊಡುತ್ತದೆ ಎಂಬುದು ಮಧ್ವರ ಸಿದ್ಧಾಂತ. ಇದನ್ನು ಅವರು ಎರಡು ಆಧಾರಗಳ ಮೇಲೆ ಪ್ರತಿಪಾದಿಸುತ್ತಾರೆ. 'ಓಂಕಾರ'ವು ಬ್ರಹ್ಮವನ್ನು ಹೇಳುತ್ತದೆ, ಅಂದರೆ, ವಿಷ್ಣುಪರ, ವೇದದ ಮಥಿತಾರ್ಥವೆಂದರೆ 'ಓಂಕಾರ'ವೇ ಎಂಬುದು ಮೊದಲ ಆಧಾರ. ಎರಡನೆಯದಾಗಿ ಪರಿಸರದ ಜಂಜಡದಿಂದ ದೂರಗೊಳಿಸುವ ವಿದ್ಯೆ ಮತ್ತು ಪರಮಪುರುಷನ ಜ್ಞಾನ ಮತ್ತು ತನ್ಮೂಲಕ ಆಗುವ ಭಗವದನುಭವಗಳಿಂದ ದೊರೆಯುವಂತೆ ಮಾಡುವುದೇ ವೇದದ ಉದ್ದೇಶವೆಂಬುದು ಇನ್ನೊಂದು ಆಧಾರ.

ಮಧ್ವಾಚಾರ್ಯರು ವೇದದ ಅರ್ಥವನ್ನು ಮೂರು ಸ್ತರಗಳಲ್ಲಿ ಮಾಡಿ ತೋರಿಸುತ್ತಾರೆ - (1) ಅಗ್ನಿ ಮುಂತಾದ ದೇವತೆಗಳ ಪರವಾದ ಅರ್ಥ (अग्न्यादिदेवतापरत्वेन), (2) ಆ ದೇವತೆಗಳಲ್ಲಿ ಅಂತರ್ಗತನಾದ ವಿಷ್ಣುವಿನ ಪರವಾದ ಅರ್ಥ (तदन्तर्गतविष्णुपरत्वेन) ಮತ್ತು (3) ಪರಮಪುರುಷ ವಿಷ್ಣುವಿನ ಪರವಾದ ಅರ್ಥ (अध्यात्मपरत्वेन). ಈ ದೃಷ್ಟಿಯಿಂದ ಮಧ್ವರು ಬರೆದ ಭಾಷ್ಯವು ಋಗ್ವೇದದ ಮೊದಲ ಮಂಡಲದ ಮೊದಲ 40 ಸೂಕ್ತಗಳ ಮೇಲೆ ಮಾತ್ರ ರಚಿತವಾಗಿದೆ. ಭಾಷ್ಯವು ಅತ್ಯಂತ ಸಂಕ್ಷಿಪ್ತ. ಅದರ ಮೇಲೆ ಜಯತೀರ್ಥರು (ಕ್ರಿ.ಶ. 1330 - 1388) ತಮ್ಮ 'ಟೀಕೆ'ಯನ್ನು ಬರೆದಿದ್ದಾರೆ. ಆಯ್ದುಕೊಂಡ ಒಂದೊಂದು ಸೂಕ್ತದ ಋಷಿ, ದೇವತಾ ಮತ್ತು ಛಂದಸ್ಸುಗಳನ್ನು ಹೇಳಿ ಶಬ್ದಶಃ ಅರ್ಥವನ್ನು ಕೊಟ್ಟಿದ್ದಾರೆ ಜಯತೀರ್ಥರು. ಮೂರು ಸ್ತರಗಳ ಅರ್ಥವು ಕೊಡಲ್ಪಟ್ಟಿದೆ. ಅನಂತರ ರಾಘುವೇಂದ್ರ ತೀರ್ಥರು (ಕ್ರಿ.ಶ. 1623 - 1672) ಆ ಟೀಕೆಯ ಮೇಲೆ ಮಂತ್ರಾರ್ಥಮಂಜರಿಯನ್ನು ರಚಿಸಿದ್ದಾರೆ. ಪರಮೇಶ್ವರನ ಗುಣಪರಿಪೂರ್ಣತ್ವವನ್ನು ತೋರಿಸಲು ವೈದಿಕ ದೇವತೆಗಳ ಹೆಸರುಗಳು ಮತ್ತು ವಿಶೇಷಣಗಳನ್ನು ಹಲವಾರು ವಿಧದಲ್ಲಿ ವಿವರಿಸಿದ್ದಾರೆ. ಈ ವ್ಯಾಖ್ಯಾನವೂ ಶೈಲಿಯ ದೃಷ್ಟಿಯಿಂದ ಸರಳವೂ ಅರ್ಥದ ದೃಷ್ಟಿಯಿಂದ ಗಂಭೀರವೂ ಆಗಿದೆ. ಬಹು ವ್ಯಾಪಕ ಉಲ್ಲೇಖಗಳ ಮೂಲಕ ಈ ವ್ಯಾಖ್ಯಾನವು ಅತ್ಯಂತ ಮಾಹಿತಿಪರವಾಗಿದೆ. ಜಯತೀರ್ಥರ ಋಗ್ಭಾಷ್ಯಟೀಕೆಯ ಮೇಲೆ ಅನೇಕ ಮಾಧ್ವ ವಿದ್ವಾಂಸರು ವ್ಯಾಖ್ಯಾನಗಳನ್ನು ಬರೆದಿದ್ದಾರೆ.

**ಸಾಯಣಾಚಾರ್ಯನ ಋಗ್ಭಾಷ್ಯ :** ಋಗ್ವೇದ ಭಾಷ್ಯಗಳಲ್ಲಿಯೇ ಅತ್ಯುತ್ಕೃಷ್ಟ ಭಾಷ್ಯ ಸಾಯಣಭಾಷ್ಯ. ಸಾಯಣನು ಕ್ರಿ.ಶ. 1315ರಲ್ಲಿ ಜನ್ಮ ತಾಳಿ ಕ್ರಿ.ಶ. 1387ರಲ್ಲಿ

ಪಂಚತ್ವವನ್ನು ಹೊಂದಿದನು. ಋಗ್ವೇದೀಯ ಪ್ರಥಮ ಅಷ್ಟಕದ ಭಾಷ್ಯದ ಕೊನೆಯ ಗದ್ಯದಲ್ಲಿ ಹೇಳಿದಂತೆ ಬುಕ್ಕರಾಜನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಉನ್ನತ ಹುದ್ದೆಯಲ್ಲಿದ್ದು ಹರಿಹರನ ತಮ್ಮ ಕಂಪನರಾಜನ ಪ್ರಧಾನಮಂತ್ರಿಯಾಗಿ ಕೆಲಸ ಮಾಡಿದನು. ಭಾರದ್ವಾಜಗೋತ್ರ, ಬೋಧಾಯನ ಸೂತ್ರ, ತೈತ್ತಿರೀಯ ಶಾಖೆಗೆ ಸೇರಿದ ಆಂಧ್ರಬ್ರಾಹ್ಮಣ ವಂಶಕ್ಕೆ ಸೇರಿದವನು. ಅವನ ಋಗ್ವೇದಭಾಷ್ಯದ ಹೆಸರು ಮಾಧವೀಯ ವೇದಾರ್ಥಪ್ರಾಕಾಶ ಋಕ್ ಸಂಹಿತಾಭಾಷ್ಯ ಎಂದು. ಅವನ ತಂದೆ ಮಾಯಣ ಮತ್ತು ತಾಯಿ ಶ್ರೀಮತಿ, ಅವನ ಅಣ್ಣ ಮಾಧವ. ಪೂರ್ವ ಹಾಗೂ ಉತ್ತರ ಮೀಮಾಂಸಾದರ್ಶನಗಳಲ್ಲಿ ಪ್ರಸಿದ್ಧ ಪಂಡಿತ. ಅವನ ತಮ್ಮ ಭೋಗನಾಥ ಆಗಿನ ಪ್ರಸಿದ್ಧ ಕವಿ. ಅವನು ವಿದ್ಯಾತೀರ್ಥ, ಭಾರತೀತೀರ್ಥ ಮತ್ತು ಶ್ರೀಕಂಠಾಚಾರ್ಯರ ಶಿಷ್ಯನಾಗಿದ್ದು, ಹರಿಹರ-ಬುಕ್ಕರಾಜರ ಆಶ್ರಯಕ್ಕೆ ಪಾತ್ರವಾಗಿದ್ದ ಶೃಂಗೇರಿ ಮಠದೊಂದಿಗೆ ನಿಕಟನಾದ ಸಂಪರ್ಕವನ್ನುಹೊಂದಿದ್ದನು.

ಸಾಯಣಭಾಷ್ಯವೂ ಕೂಡ ಯಾಜ್ಞಿಕ ಪರಂಪರೆಗೆ ಸೇರಿದುದು. ಅದು ಪೂರ್ವದ ಎಲ್ಲಾ ಭಾಷ್ಯಗಳನ್ನು ತನ್ನ ವ್ಯಾಪ್ತಿ ಮತ್ತು ಆಳಗಳಿಂದ ಮೀರಿಸಿದೆ. ಯಾಜ್ಞಿಕ ಪರಂಪರೆಯ ನಿಷ್ಠಾವಂತ ಅನುಯಾಯಿಯಾದರೂ ನೈರುಕ್ತ ಪರಂಪರೆಯನ್ನೂ ಅನ್ವಯಿಸಿಕೊಂಡಿದ್ದಾನೆ ಮತ್ತು ಶಬ್ದರೂಪಗಳ ವೈಚಿತ್ರ್ಯ ಮತ್ತು ಸ್ವರಗಳ ವಿಚಾರವನ್ನು ವಿವರಿಸಲು ಪಾಣಿನಿಯ ಅಷ್ಟಾಧ್ಯಾಯಿ ಮತ್ತು ಅದರ ಪರಂಪರೆಯನ್ನು ಅನುಸರಿಸಿದ್ದಾನೆ. ತನ್ನ ಉದ್ದೇಶದ ನಿರ್ವಹಣೆಗಾಗಿ ಅಲ್ಲಲ್ಲಿ ಐತಿಹಾಸಿಕ ಪರಂಪರೆಯನ್ನೂ ಅಳವಡಿಸಿಕೊಂಡಿದ್ದಾನೆ. (ಉದಾಹರಣೆಗೆ, ಋ. 2.12, 3.33 ಸೂಕ್ತಗಳ ಮೇಲಿನ ಭಾಷ್ಯವನ್ನು ನೋಡಿ). ಕೆಲವು ಸೂಕ್ತಗಳನ್ನು ಅಧ್ಯಾತ್ಮ ಪದ್ಧತಿಯಂತೆ ವ್ಯಾಖ್ಯಾನಿಸಿದ್ದಾನೆ. ಉದಾಹರಣೆಗೆ, अस्यावामीय सूक्तद (ಋ. 1.164) ವಿಷಯದಲ್ಲಿ ತಾನು ನೇರವಾಗಿ ಅಧ್ಯಾತ್ಮ ಪದ್ಧತಿಯನ್ನೇ ಅನುಸರಿಸಿದ್ದೇನೆಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಹೀಗೆ ಸಾಯಣನ ಋಗ್‌ಭಾಷ್ಯವು ಎಲ್ಲಾ ರೀತಿಯಲ್ಲಿ ಋಗ್ವೇದದ ಸಾಂಪ್ರದಾಯಿಕ ವ್ಯಾಖ್ಯಾನ ಪದ್ಧತಿಯನ್ನು ಪ್ರತಿನಿಧಿಸುತ್ತದೆ. ಋಗ್ವೇದವನ್ನು ಅರ್ಥಮಾಡಿಕೊಳ್ಳಲು ಅದು ಅನಿವಾರ್ಯವಾದ ಮಾರ್ಗದರ್ಶಿ.

**ಕಪಾಲಿಶಾಸ್ತ್ರಿಯ ಸಿದ್ಧಾಂಜನ ವ್ಯಾಖ್ಯಾನ :** ಈ ವ್ಯಾಖ್ಯಾನವು ಋಗ್ವೇದ ಸಂಹಿತೆಯ ಮೊದಲ 1400 ಮಂತ್ರಗಳ, ಅಂದರೆ ಮೊದಲನೆ ಅಷ್ಟಕದ ಎಲ್ಲಾ ಮಂತ್ರಗಳ ವ್ಯಾಖ್ಯಾನವಾಗಿದೆ. ಇದು ಅಧ್ಯಾತ್ಮ ವ್ಯಾಖ್ಯಾನ ಪದ್ಧತಿಯನ್ನು ಅನುಸರಿಸುತ್ತದೆ. ಅದಕ್ಕೆ ರಹಸ್ಯಾತ್ಮಕ ಅಥವಾ ಸಾಂಕೇತಿಕ ವ್ಯಾಖ್ಯಾನ ಪದ್ಧತಿಯೆಂದೂ ಹೆಸರು. ಶ್ರೀ ಅರವಿಂದರು ಋಗ್ವೇದದ ಸಾಂಕೇತಿಕತ್ವವನ್ನು ಅನ್ವೇಷಣೆಯಿಂದ ಕಂಡುಕೊಂಡು ತಮ್ಮ ಶೋಧಫಲವನ್ನು 1914ರಿಂದ 1918ರವರೆಗಿನ ತಮ್ಮ 'ಆರ್ಯ' ಎಂಬ ನಿಯತಕಾಲಿಕೆಯಲ್ಲಿ ಧಾರಾವಾಹಿಯಾಗಿ

ಪ್ರಕಟಿಸಿದರು. ಅದೇ ಪರಂಪರೆಯನ್ನು ಕಪಾಲಿಶಾಸ್ತ್ರಿ ಕೃತ ಸಿದ್ಧಾಂಜನದಲ್ಲಿ ಅನುಸರಿಸಲಾಗಿದೆ. ಈ ವ್ಯಾಖ್ಯಾನ ಪದ್ಧತಿಯ ಮಾದರಿಯನ್ನು ಬಿಂಬಿಸಲು ಕೆಲವು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

1) गोभिरद्रिम् ऐरयत् | (ಋ. 1.7.3)

(ಇಂದ್ರನು) ಅಜ್ಞಾನದ ಶಕ್ತಿಗಳನ್ನು ಜ್ಞಾನಕಿರಣಗಳಿಂದ ನಾಶಪಡಿಸಿದನು. (ರಹಸ್ಯಾತ್ಮಕ ವ್ಯಾಖ್ಯಾನ)

(ಇಂದ್ರನು) ಮೇಘವನ್ನು ನೀರಿನಿಂದ ತುಂಬಿಸಿದನು. (ಸಾಯಣ ವ್ಯಾಖ್ಯಾನ)

2) निरुन्धानो अमतिं गोभिरश्विना | (ಋ. 1.54.4)

ಬೆಳಕು ಮತ್ತು ಚೇತನ ಶಕ್ತಿಗಳನ್ನು ಬಳಸಿ ನಮ್ಮ ಅಜ್ಞಾನವನ್ನು ನಿವಾರಿಸುತ್ತಾ. (ರಹಸ್ಯಾತ್ಮಕ ವ್ಯಾಖ್ಯಾನ)

ಗೋವುಗಳು ಮತ್ತು ಅಶ್ವಗಳನ್ನಿತ್ತು ನಮ್ಮ ಬಡತನವನ್ನು ನೀಗಿಸುತ್ತಾ. (ಸಾಯಣ ವ್ಯಾಖ್ಯಾನ)

ಈ ಪರಂಪರೆಯಂತೆ, ಮಂತ್ರಗಳಿಗೆ ಆಂತರಿಕ ಅರ್ಥ ಮತ್ತು ಬಾಹ್ಯ ಅರ್ಥವೆಂದು ಎರಡು ಅರ್ಥಗಳಿವೆ. ಆಂತರಿಕ ಅರ್ಥವೇ ಮನೋವೈಜ್ಞಾನಿಕ ಅಥವಾ ಆಧ್ಯಾತ್ಮಿಕ ಅರ್ಥ. ಅದೇ ನಿಜವಾದ ಅರ್ಥ. ಬಾಹ್ಯ ಅರ್ಥವು ಆಂತರಿಕ ಅರ್ಥವನ್ನು ಅರಿಯಲಾಗದ ಜನರಿಂದ ಮರೆಮಾಚಲು ಹೊರಗಿನ ಹೊದಿಕೆಯಾಗಿದೆ.

**ದಯಾನಂದರ ಋಗ್‌ಭಾಷ್ಯ :** ಈ ಭಾಷ್ಯವು ಆರನೆಯ ಮಂಡಲದ ಕಡೆಯವರೆಗೂ ದೊರೆಯುತ್ತದೆ. ಆರ್ಯಸಮಾಜದ ಸಂಸ್ಥಾಪಕರಾದ ದಯಾನಂದರು ಈ ಋಗ್‌ಭಾಷ್ಯದ ಮೂಲಕ ವೇದವನ್ನು ಒಂದು ಜೀವಂತ ಧಾರ್ಮಿಕ ಗ್ರಂಥವಾಗಿ ಪುನಃ ಪ್ರತಿಷ್ಠಾಪಿಸಿದ್ದಾರೆ. ಇದೊಂದು ಗಣನೀಯವಾದ ಪ್ರಯತ್ನ. ಅವರು ನಿರುಕ್ತದಲ್ಲಿ ಕಂಡು ಬಂದ ಪ್ರಾಚೀನ ಭಾರತೀಯ ದರ್ಶನವನ್ನು ಅವಲಂಬಿಸಿದ್ದಾರೆ. ವೇದಗಳು ಧಾರ್ಮಿಕ, ನೈತಿಕ ಹಾಗೂ ವೈಜ್ಞಾನಿಕ ಸತ್ಯಗಳ ಮೂಲಭೂತ ಆವಿಷ್ಕಾರಗಳೆಂಬ ಭಾವನೆಯನ್ನು ಅವಲಂಬಿಸಿದೆ ಅವರ ಋಗ್ವೇದದ ವ್ಯಾಖ್ಯಾನ. ವೇದದ ಧಾರ್ಮಿಕ ಉಪದೇಶವೆಂದರೆ ಏಕದೇವತೋಪಾಸನೆಯನ್ನು ಕುರಿತದ್ದು ಮತ್ತು ಬೇರೆ ಬೇರೆ ವೈದಿಕ ದೇವತೆಗಳೆಂದರೆ ಒಬ್ಬನೇ ಪರಮಾತ್ಮನ ವರ್ಣನಾತ್ಮಕ ಹೆಸರುಗಳು ಎಂಬ ಭಾವನೆಯೂ ಅದರ ಆಧಾರವಾಗಿದೆ. ನಿಸರ್ಗದಲ್ಲಿ ಅವುಗಳ ಕಾರ್ಯವನ್ನು ಅವಲೋಕಿಸಿದಾಗ ವೈದಿಕ ದೇವತೆಗಳು ಪರಮಾತ್ಮನ ವಿವಿಧ ಶಕ್ತಿಗಳನ್ನು

ಅಭಿವ್ಯಕ್ತಗೊಳಿಸುತ್ತವೆ. ವೇದಗಳ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳುವ ಮೂಲಕ ನಾವು ಆಧುನಿಕ ಸಂಶೋಧನೆಯ ಮೂಲಕ ಕಂಡುಕೊಳ್ಳಲಾದ ಎಲ್ಲಾ ವೈಜ್ಞಾನಿಕ ಸತ್ಯಗಳನ್ನು ಅರಿತುಕೊಳ್ಳಬಹುದು ಎಂಬುದು ಅದರ ನಿಶ್ಚಿತ ಅಭಿಪ್ರಾಯ.

ದಯಾನಂದರು ಯಜ್ಞ ಅಥವಾ ಕರ್ಮದ ವಿಷಯವನ್ನು ಹೇಳುವಾಗ ಜೀವನದ ವಿಶಾಲ ದೃಷ್ಟಿಕೋನವನ್ನು ಇಟ್ಟುಕೊಳ್ಳುತ್ತಾರೆ. ಯಜ್ಞವೆಂದರೆ ಕೇವಲ ಒಂದು ಯಾಜ್ಞಿಕ ಆಚರಣೆಯಲ್ಲ; ಅದು ಬಡತನ, ದುಃಖ ಮತ್ತು ರೋಗ ರುಜಿನಗಳ ವಿರುದ್ಧದ ನಮ್ಮ ಪ್ರಾಪಂಚಿಕ ಜೀವನದ ಸ್ಥಿತಿಗತಿಗಳನ್ನು ನಿವಾರಿಸಲು ಮತ್ತು ಮುಂದಿನ ಹಂತದಲ್ಲಿ ಸಾವಿನ ಅನಂತರವೂ ಉತ್ತಮ ಭವಿಷ್ಯವನ್ನು ನಿಗದಿಪಡಿಸಲು ಸಾಮಾಜಿಕ ನೆಲೆಯಲ್ಲಿ ಮಾಡಿದ ಎಲ್ಲಾ ಸಾಧನೆಗಳನ್ನು ಒಳಗೊಂಡಿದೆ. ಹೀಗೆ ದಯಾನಂದರು ವೇದವನ್ನು 'ವಿನಿಯೋಗ'ದ ಪಾಶದಿಂದ ಮುಕ್ತಗೊಳಿಸಿದರು. ಅವರ ವ್ಯಾಖ್ಯಾನ ಪದ್ಧತಿಯ ಪರಿಚಯ ಮಾಡಿಕೊಡಲು ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಬಹುದು :

1) ಅಗ್ನಿಯು ಪ್ರಮುಖ ಶಕ್ತಿ, ಪ್ರಮುಖ ಪ್ರಕಾಶ ಮತ್ತು ಪ್ರಮುಖ ಗೌರವಕ್ಕೆ ಪಾತ್ರ. ಆ ಶಬ್ದವು अञ्चु, अग्, अगि, इण् ಧಾತುಗಳಿಂದ ನಿಷ್ಪನ್ನವಾಗಿದೆ. अञ्चु गतिपूजनयोः, ಹೋಗುವುದು, ಪೂಜಿಸುವುದು ಎಂಬುದು अञ्चु ಧಾತುವಿನ ಅರ್ಥ. ಅಗ್ನಿಯು ಪರಮೇಶ್ವರ, ಎಲ್ಲಾ ಜ್ಞಾನಗಳ ಪರಮ ಚೈತನ್ಯ, ಅರಿಯಲು ಮತ್ತು ಪಡೆಯಲು ಅರ್ಹವಾದ ಏಕಮಾತ್ರ ದೇವತೆ. ಅವನೇ ವೇದದಲ್ಲಿ ಪೂಜನೀಯ, ಪ್ರಾಪ್ತವ್ಯ, ಸರ್ವಜ್ಞ ಈಶ್ವರ.

2) ವರುಣ – वृञ् वरणे, ಆರಿಸುವುದು, ಎಂಬ ಧಾತು. यः सर्वान् शिष्टान् मुमुक्षून् धर्मात्मनो वृणोति स वरुणः | ಮತ್ತು ಪರ್ಯಾಯವಾಗಿ यः शिष्टैर्मुमुक्षुभिर्व्रियते वर्य्यते वा स वरुणः |

3) ಮಿತ್ರ – ञिमिदा स्नेहने, ಪ್ರೀತಿಸುವುದು, ಮಮತೆ ತೋರುವುದು ಎಂಬ ಧಾತು. मेद्यति स्निह्यति स्निह्यते वा स मित्रः |

4) ಮಿತ್ರಾ - ವರುಣ - ಯಾವುದೆಲ್ಲಾ ವಿಶಾಲತೆ ಮತ್ತು ಪಾವಿತ್ರ್ಯಗಳಿಂದ ಕೂಡಿದೆಯೋ ಅದೆಲ್ಲವನ್ನೂ ವರುಣನು ಪ್ರತಿನಿಧಿಸಿದರೆ ಯಾವುದೆಲ್ಲಾ ಪ್ರಕಾಶಮಯ ಮತ್ತು ಸೌಹಾರ್ದಮಯವೋ ಅದೆಲ್ಲವನ್ನೂ ಮಿತ್ರನು ಪ್ರತಿನಿಧಿಸುತ್ತಾನೆ.

5) ಇಂದ್ರ – इदि परमैश्वर्ये, यः इन्धति परमैश्वर्यवान् भवति स इन्द्रः परमैश्वर्यः |

**ವೇದದ ಆಧುನಿಕ ಅಧ್ಯಯನವನ್ನು** ಆರಂಭಿಸಿದವರು ಪ್ಯಾರಿಸಿನಲ್ಲಿದ್ದ ಯೂಜೀನ್ ಬರ್ನಾಫ್ (Eugene Burnof, 1801 - 1852) ಎಂಬುವವರು. ರುಡೋಲ್ಫ್ ವಾನ್ ರಾಥ್ (Rudolf Von Roth, 1821 - 1895) ಮತ್ತು ಫ್ರೀಡ್‌ರಿಷ್ ಮಾಕ್ಸ್ ಮ್ಯುಲ್ಲರ್ (Friedrich Max Mueller, 1823 - 1903) ಎಂಬ ವೇದಾಧ್ಯಯನ ಕ್ಷೇತ್ರದ ಪ್ರಸಿದ್ಧ ವ್ಯಕ್ತಿಗಳಿಬ್ಬರೂ ಅವರ ವಿದ್ಯಾರ್ಥಿಗಳಾಗಿದ್ದರು. 1852ರಲ್ಲಿ ಓ. ಬೋಟ್ಲಿಂಕ್ (O. Bohtlingk) ಮತ್ತು ಆರ್. ರಾಥ್ ಅವರು ತಯಾರಿಸಿದ ಸೇಂಟ್ ಪೀಟರ್ಸ್‌ಬರ್ಗ್ ಅರ್ಥಕೋಶದ (St. Petersburg's Dictionary) ಪ್ರಕಟವಾದಾಗ ವೇದವ್ಯಾಖ್ಯಾನದ ಹೊಸಪದ್ಧತಿಗೆ ನಾಂದಿಯಾಯಿತು. ಎಚ್.ಎಚ್. ವಿಲ್ಸನ್ (H.H. Wilson) ಸಾಯಣರನ್ನು ಅನುಸರಿಸಿ ಸಮಗ್ರ ಋಗ್ವೇದವನ್ನು ಆಂಗ್ಲಭಾಷೆಗೆ ಅನುವಾದಿಸಿ ಭಾರತೀಯ ಭಾಷ್ಯಕಾರ ಸಾಯಣರ "ವೈದಿಕ ಗ್ರಂಥಸಂಬಂಧಿ ಜ್ಞಾನವು ಯಾವುದೇ ಐರೋಪ್ಯ ವಿದ್ವಾಂಸನ ತೋರಿಕೆಯ ಜ್ಞಾನಕ್ಕಿಂತ ಮೇಲ್ಮಟ್ಟದ್ದು" ಎಂದು ಕೊಂಡಾಡಿದರೆ, ಜಾನ್ ಮ್ಯೂರ್ (John Muir) ಮತ್ತು ರಾಥ್ ಅವರು ಸಾಯಣರ ಪ್ರಾಮಾಣ್ಯವನ್ನೇ ಪ್ರಶ್ನಿಸುವ ಮಟ್ಟಕ್ಕೆ ಇಳಿದರು.

**ಜಾನ್ ಮ್ಯೂರ್** (Original Sanskrit Texts) ಹಾಗೆ ವಿಲ್ಸನ್ ಅವರು ಸಾಯಣರ ಮೇಲೆ ಪ್ರಶಂಸೆಯನ್ನು ಪೇರಿಸುವುದಕ್ಕೆ ಕಾರಣವಿಲ್ಲ ಎಂದು ಜರೆದು ಸಾಯಣರು ಸ್ಪಷ್ಟವಾಗಿ ಸಂದೇಹಗ್ರಸ್ಥರು ಎಂದರು. **ಆರ್. ರಾಥ್** (Zur Litterature and eschiehte des Weda, 1846) ಅವರು ಸಾಯಣ ಮುಂತಾದ ಭಾರತೀಯ ಭಾಷ್ಯಕಾರರನ್ನು ದೇವತಾ ಸ್ವರೂಪ ಮತ್ತು ಪೂಜೆಗೆ ಸಂಬಂಧಿಸಿದ ಬರಹಗಳಿಗೆ ಅವಲಂಬಿಸಲು ಯೋಗ್ಯರೆಂದು ಅಂಗೀಕರಿಸಿ, ವಿಲ್ಸನರಂತೆ ಸಾಯಣರನ್ನು "ಯಾವುದೇ ಐರೋಪ್ಯ ವ್ಯಾಖ್ಯಾನಕಾರನಿಗಿಂತ ಉತ್ತಮವಾಗಿ ವೇದದ ಉಕ್ತಿಗಳ ಅರ್ಥವನ್ನು ಅರಿತವರೆಂದು ನಾನು ನಂಬಲಾರೆ" ಎಂದು ತಮ್ಮ ದುರಭಿಮಾನವನ್ನು ವ್ಯಕ್ತಪಡಿಸಿದರು. ಅವರು ಮತ್ತು ಅವರ ಸಹೋದ್ಯೋಗಿಗಳು "ಭಾಷಾಶಾಸ್ತ್ರವು ನಿರ್ಮಿಸಿದ ದಾರಿಯನ್ನು ಅನುಸರಿಸಿ, ಶಬ್ದಸ್ವರೂಪ ಮತ್ತು ಅರ್ಥಸ್ವರೂಪಗಳಲ್ಲಿ ಸಂವಾದಿಗಳಾದ ಎಲ್ಲಾ ವಾಕ್ಯಗಳ ತುಲನೆಯ ಮೂಲಕ ಆಯಾ ಗ್ರಂಥಗಳಿಂದಲೇ ಅವುಗಳಲ್ಲಿ ನಿಹಿತವಾದ ಅರ್ಥವನ್ನು ಗ್ರಹಿಸಲು ಪ್ರಯತ್ನಿಸುತ್ತೇವೆ" ಎಂದು ಹೇಳಿಕೊಂಡಿದ್ದಾರೆ.

**ಹೆರ್‌ಮನ್ ಗ್ರಾಸ್‌ಮನ್ನ್** (Herman Grassmann, 1809 - 1877), **ಅಬೆಲ್ ಬರ್‌ಗೈನ್** (Abel Bergaigne, 1838 - 1888) ಮತ್ತು **ಹರ್‌ಮನ್ನ್ ಓಲ್ಡನ್‌ಬರ್ಗ್** (Hermann Oldenberg, 1854 - 1920) ಎಂಬ ವಿದ್ವಾಂಸರು "ಭಾಷಾಶಾಸ್ತ್ರವು ವಿಧಿಸಿದ ಮಾರ್ಗ"ವನ್ನು ಅನುಸರಿಸಿ ವೈದಿಕ ಶಬ್ದಗಳ ಅರ್ಥಗಳನ್ನು ಇತರ

ಹಿಂದೂ-ಐರೋಪ್ಯ ಭಾಷೆಗಳಲ್ಲಿನ ಸಂವಾದಿ ಶಬ್ದಗಳೊಂದಿಗೆ ಹೋಲಿಸಿ ಗ್ರಹಿಸುವುದರೊಂದಿಗೆ ಆ ಮಾರ್ಗವನ್ನು ಮತ್ತಷ್ಟು ಶ್ರೀಮಂತಗೊಳಿಸಿದರು. **ಬೆನ್‌ಫೀ** (Benfey) ಎಂಬ ವಿದ್ವಾಂಸರು ವೈದಿಕ ಶಬ್ದಗಳನ್ನು ಝುಂಡ್ ಅವೆಸ್ತಾದ ಶಬ್ದಗಳೊಂದಿಗೆ ಹೋಲಿಸುವ ಕ್ರಮವನ್ನು ಹೆಚ್ಚಾಗಿ ಅವಲಂಬಿಸಿದರು.

**ಮ್ಯಾಕ್ಸ್‌ಮ್ಯುಲ್ಲರ್** (Vedic Hymns, S.B.E., ಮುನ್ನುಡಿ) ಸಾಯಣರ ಭಾಷ್ಯವನ್ನು ಬ್ರಾಹ್ಮಣಗಳ ದೇವತಾಶಾಸ್ತ್ರ ಮತ್ತು ಯಾಸ್ಕರ ಕಾಲ್ಪನಿಕ ನಿಷ್ಪತ್ತಿಗಳ ಅವಲಂಬನೆಯ ಸಂದರ್ಭಗಳನ್ನು ಬಿಟ್ಟು ಮಿಕ್ಕೆಲ್ಲ ಕಡೆ ಎಲ್ಲಾ ದೃಷ್ಟಿಯಿಂದ ತರ್ಕಬದ್ಧವೆಂದು ಹೇಳಿದ್ದಾರೆ. ಸಾಯಣರ ಬಗ್ಗೆ ಹಗುರವಾಗ ಮಾತನಾಡುವವರು "ವೈದಿಕ ಭಾಷೆ ಮತ್ತು ವೈದಿಕ ಧರ್ಮದ ಕೋಟೆ"ಯೊಳಗೆ ಪ್ರಥಮ ಪ್ರವೇಶವನ್ನು ಪಡೆಯಲು ಐರೋಪ್ಯ ವಿದ್ವಾಂಸರು ಎಷ್ಟರಮಟ್ಟಿಗೆ ಸಾಯಣರ ಮಾರ್ಗದರ್ಶನಕ್ಕೆ ಋಣಿಯಾಗಿದ್ದಾರೆ, ಎಂಬುದನ್ನು ತಿಳಿದಿಲ್ಲ ಎಂದು ಹೇಳುವ ಮ್ಯಾಕ್ಸ್ ಮ್ಯುಲ್ಲರ್ ಅವರು "ಆದ್ದರಿಂದ ನಾವಿಂದು ಸಾಯಣರಿಗಿಂತ ಹೆಚ್ಚಿನದನ್ನು ನೋಡಲು ಸಾಧ್ಯವಾಗಿದ್ದರೆ, ನಾವು ಅವರ ಹೆಗಲ ಮೇಲೆ ನಿಂತು ನೋಡುತ್ತಿದ್ದೇವೆ ಎಂಬುದನ್ನು ಮರೆಯಬಾರದು" ಎಂದು ಹೇಳಿದ್ದಾರೆ.

**ರಿಚರ್ಡ್ ಪಿಷೆಲ್** (Richard Pischel, 1849 - 1908) ಮತ್ತು **ಕಾರ್ಲ್ ಎಫ್. ಗೆಲ್ಡ್‌ನರ್** (Karl F. Geldner, 1852 - 1929) ಎಂಬ ವಿದ್ವಾಂಸರು ವೇದವನ್ನು ಶುದ್ಧ ಭಾರತೀಯ ದಾಖಲೆಯನ್ನಾಗಿ ಪರಿಭಾವಿಸಿ ವ್ಯಾಖ್ಯಾನಿಸಬೇಕು, ತೌಲನಿಕ ಭಾಷಾಶಾಸ್ತ್ರ ಅಥವಾ ತೌಲನಿಕ ಪುರಾಣಶಾಸ್ತ್ರದ ಸಹಾಯದಿಂದ ಮಾಡಬೇಕಾಗಿಲ್ಲ, ಆಧುನಿಕ ಧಾರ್ಮಿಕ ಸಾಮಗ್ರಿ ಮತ್ತು ಜಾನಪದ ಸಾಮಗ್ರಿಗಳನ್ನು ಒಳಗೊಂಡಂತೆ ಎಲ್ಲಾ ಭಾರತೀಯ ಸಾಮಗ್ರಿಯನ್ನು ಪರಿಶೀಲಿಸಬೇಕು ಎಂದು ಹೇಳಿದ್ದಾರೆ. ವಿಶೇಷವಾಗಿ ಪಿಷೆಲ್ ಅವರು ವೇದವು ಪ್ರತಿಬಿಂಬಿಸುವ ಸಂಸ್ಕೃತಿಯ ಇತಿಹಾಸ ಕಾವ್ಯಗಳು ಮತ್ತು ಗ್ರಂಥಸ್ಥ ಸಾಹಿತ್ಯಗಳ ಸಂಸ್ಕೃತಿಗಿಂತ ಭಿನ್ನವಲ್ಲವೆಂದು ಭಾವಿಸುತ್ತಾರೆ. ಪಿಷೆಲ್ ಮತ್ತು ಗೆಲ್ಡ್‌ನರ್ ಅವರು "ವೇದಿಷ್ ಸ್ಟಡಿಯನ್" (Vedische Studien) ಎಂಬುದು ಅತ್ಯಂತ ಹೆಚ್ಚಿನ ಪ್ರಭಾವವನ್ನು ಬೀರಿದೆ.

**ಲೂಯಿ ರೆನೋ** (Louis Renou, 1896 - 1968) ಅವರು ವೇದದ ತಮ್ಮ ಅಧ್ಯಯನವನ್ನು ಫ್ರೆಂಚ್ ಭಾಷೆಯಲ್ಲಿ ಮಾಡಿದ್ದಾರೆ. ಅವರ ಪ್ರಕಟನೆಗಳು ವೈದಿಕ ಸೂಕ್ತಗಳ ಶೈಲಿ, ಭಾಷೆ, ವಾಕ್ಯ ಖಂಡಗಳು ಮತ್ತು ಸಾಹಿತ್ಯಿಕ ಮಾರ್ಮಿಕತೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಸೂಕ್ತಗಳ ಸೂತ್ರಸ್ವರೂಪದ ಬಗ್ಗೆ ಒತ್ತಿ ಹೇಳಿ, ಬಾಹ್ಯ ಸತ್ಯಾಂಶಗಳ ಸಹಾಯದಿಂದ ವಿಶದೀಕರಣವನ್ನು ಇಚ್ಛಿಸಿ ಅವರು ಅವುಗಳನ್ನು ಪ್ರಥಮತಃ ಪ್ರಮುಖವಾಗಿ ಆಂತರಿಕ ತುಲನೆಯ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

## 1.2.3.2 ಋಗ್ವೇದದ ವ್ಯಾಕರಣ ವಿಶೇಷಗಳು

### 1. ಸ್ವರವಿಚಾರ : ಕೆಲವು ಪ್ರಮುಖ ಸಂದರ್ಭಗಳು

i) ಎರಡು ಸ್ವರಗಳ ಮಧ್ಯೆ ಬರುವ ಡ ಮತ್ತು ಢಗಳು ಋಗ್ವೇದದಲ್ಲಿ ಳ ಮತ್ತು ಳಹ ರೂಪದಲ್ಲಿ ಪರಿಸಲ್ಪಡುತ್ತವೆ. (अज्मध्यस्थडकारस्य ळकारं बह्वृचा जगुः । अज्मध्यस्थढकारस्य ळहकारं वै यथाक्रमम् ।। ऋक् - प्रातिशाख्ये अन्यः श्लोकः, १-५२). ಉದಾ. इळे (ईडे), मीळ्हुषे (मीढुषे)।

ii) ಋಗ್ವೇದದಲ್ಲಿ तु, नु, घ, मक्षु ಎಂಬ ನಿಪಾತಗಳು, लङ् ಎಂಬ ತಿಙ್ ಪ್ರತ್ಯಯ, कु, त्र ಎಂಬ ಅಂತ್ಯ ಮತ್ತು उरुष्य ಎಂಬ ಪದ ದೀರ್ಘವಾಗುತ್ತವೆ. (ऋचि तु-नु-घ-मक्षु-तङ्-कु-त्रोरुष्याणाम् । पा. ६.३.१३३). ಉದಾ. तू न, नू मर्तः, वा घा, मक्षू गोमन्तम्, भरता जातवेदसम्, कू मनस्, अत्रा ते, ऊरुष्या नो अग्नेः ।

iii) ಮಂತ್ರದಲ್ಲಿ ಎರಡು ವರ್ಣಗಳುಳ್ಳ ಕ್ರಿಯಾಪದವಾದರೆ, ಅದರ ಅಕಾರಾಂತ ತಿಙ್ ಪ್ರತ್ಯಯವು ದೀರ್ಘವಾಗುತ್ತದೆ. (द्व्यचोऽतस्तिङः । पा. ६.३.१३५). ಉದಾ. विद्म हि त्वा ।

iv) ಋಗ್ವೇದದಲ್ಲಿ ನಿಪಾತದ ಅಂತ್ಯವು ದೀರ್ಘವಾಗುತ್ತದೆ. (निपातस्य च । पा. ६.३.१३६). ಉದಾ. एवा हि ते ।

v) ಒಂದು ಸಮಾಸದ ಪೂರ್ವಪದವಾಗಿರುವ ಕೆಲವು ಇತರ ಪದಗಳ ಅಂತ್ಯಸ್ವರಗಳು ಕೂಡ ದೀರ್ಘವಾಗುತ್ತವೆ. (अन्येषामपि दृश्यते । पा. ६.३.१३७).ಉದಾ. ऋतावरी, दण्डादण्डि, पूरुषः ।

vi) ಮಂತ್ರದಲ್ಲಿ सोम, अश्व, इन्द्रिय ಮತ್ತು विश्वदेव्य ಎಂಬ ಪದಗಳ ಅಂತ್ಯಸ್ವರಗಳು मतुप् ಪರವಾದಾಗ ದೀರ್ಘವಾಗುತ್ತವೆ. (मन्त्रे सोमाश्वेन्द्रियविश्वदेव्यस्य मतौ । पा. ६.३.१३१).ಉದಾ. सोमावतीम्, अश्वावतीम्, इन्द्रियावान्, विश्वदेव्यावता ।

### 2. ಸಂಧಿಯಾಗದಿರುವುದು : ಪ್ರಮುಖ ಸಂದರ್ಭಗಳು

• ಕೆಲವು ಸಂದರ್ಭಗಳಲ್ಲಿ ಸಂಧಿಯಾಗದ ಕಾರಣ "ವಿವೃತ್ತಿ" (ಋಕ್ ಪ್ರಾ. 2.3).

i) ಪಾದದ ಮಧ್ಯದಲ್ಲಿ ए ಮತ್ತು ओ ಅನಂತರದ ಲೋಪ ಹೊಂದಬೇಕಾದ (पूर्वरूपसन्धि ಕಾರಣದಿಂದ ಆಗಬೇಕಾದ ಲೋಪ) अಕಾರವು व ಅಥವಾ य ಪರವಾಗದಿದ್ದರೆ ಲೋಪವಾಗುವುದಿಲ್ಲ. (प्रकृत्यान्तःपादमव्यपरे | पा. ६.१.११५). ಉದಾ. नो अस्थात्, सुजते अश्वम् | ಆದರೆ व ಅಥವಾ य ಪರವಾದಾಗ – तेऽवर्धन्त, तेऽयजन् | ಕೆಲವೊಮ್ಮೆ व ಅಥವಾ य ಪರವಾದಾಗಲೂ अ ಲೋಪವಾಗದೆ ಇರಬಹುದು. (अव्याद् अवद्यादवक्रमुरव्रतायमनन्त्ववस्युषु च | पा. ६.१.११६). ಉದಾ. नो अव्यात्, अहो अवद्यात्, अवक्रमुः, अव्रत, अयम्, अवन्तु, अवस्यु वा |

ii) ಸ್ವರಗಳ ಪೂರ್ವದಲ್ಲಿ ಅನುನಾಸಿಕವಾದ आङ् (आँ) ಸಂಧಿಯನ್ನು ಹೊಂದುವುದಿಲ್ಲ. (आङोऽनुनासिकश्छन्दसि | पा . ६.१.१२६). ಉದಾ. आँ आपः, आँ उग्रपुत्रे |

iii) ಪ್ರಗೃಹ್ಯವಾದ ಎಲ್ಲಾ ಸ್ವರಗಳ ಸಂದರ್ಭಗಳೂ ಸಂಧಿಯಾಗದ ಸಂದರ್ಭಗಳು. (a) ಸಂಬೋಧನಾಂತ ओ (ओकार अमन्त्रितजः प्रगृह्यः | ऋक्प्रा. १.६८). ಉದಾ. विष्णो, इन्दो | (b) ಬೇರೆ ಪದವಾದ ओ (पदं चान्यः | ऋक्प्रा. १.६९). ಉದಾ. ओ हि वर्तन्ते | (c) ओ ಅಂತವಾದ ನಿಪಾತಗಳು. (ओत् | पा. १.१.१५).ಉದಾ. अथो, उतो | (d) ई, ऊಮತ್ತು ए ಎಂಬ ದ್ವಿವಚನಾಂತಗಳು (इदूदेद्द्विवचनं प्रगृह्यम् | पा. १.१.१८). ಉದಾ. रोदसी, इन्द्रावायू, साशनानशने | (e) ई ಮತ್ತು ऊ ಎಂಬ ಸಪ್ತಮ್ಯರ್ಥಕಗಳು. (ईदूतौ च सप्तम्यर्थे | पा. १.१.१९). ಉದಾ. गौरी, सरसी, तनू | (f) अस्मे, युष्मे, त्वे, अमी ಎಂಬವೂ ಪ್ರಗೃಹ್ಯಗಳು. (अस्मे युष्मे त्वे अमी च प्रगृह्याः | ऋक्प्रा. १.७३).

ಎಲ್ಲಾ ಪ್ರಗೃಹ್ಯಗಳನ್ನು ಋಗ್ವೇದದ ಪದಪಾಠದಲ್ಲಿ इतिकरणದಿಂದ ಗುರುತಿಸಲಾಗುತ್ತದೆ. ಉದಾ. विष्णो इति, रोदसी इति, गौरी इति, अस्मे इति |

iv) उ ಎಂಬ ನಿಪಾತವು ಪದಪಾಠದಲ್ಲಿ ಶಾಕಲನಿಂದ ದೀರ್ಘವಾಗಿಯೂ ಅನುನಾಸಿಕವಾಗಿಯೂ ಇತಿಕರಣಯುಕ್ತವಾಗಿಯೂ ಮಾಡಲ್ಪಡುತ್ತದೆ. (उकारश्चेतिकरणेन युक्तो रक्तोऽप्रक्तो द्राधितः शाकलेन | ऋक्प्रा. १.७५). ಉದಾ. ऊँ इति |

---

## 3. ಸಂಧಿಗಳು

---

i) ಋಕ್ ಪ್ರಾತಿಶಾಖ್ಯದ ಪ್ರಕಾರ ಸ್ವರಗಳ ಮಧ್ಯದಲ್ಲಿ ಮೂರು ವಿಧವಾದ ಸಂಧಿಗಳಿವೆ.

ಅವುಗಳೆಂದರೆ - (a) ಪ್ರಶ್ಲಿಷ್ಟ, (b) ಕ್ಷೈಪ್ರ ಮತ್ತು (c) ಅಭಿನಿಹಿತ, (2.20, 23, 24). ಲೌಕಿಕ ಸಂಸ್ಕೃತದಲ್ಲಿ ಸವರ್ಣದೀರ್ಘ ಸಂಧಿ, ಗುಣಸಂಧಿ ಮತ್ತು ವೃದ್ಧಿಸಂಧಿ ಎಂದು ಕರೆಯಲಾಗುವ ಸಂಧಿಗಳು ಪ್ರಶ್ಲಿಷ್ಟಸಂಧಿಯ ಪ್ರಕಾರಗಳು. ಯಣ್‌ಸಂಧಿಯೇ ಕ್ಷೈಪ್ರಸಂಧಿ ಮತ್ತು ಪೂರ್ವರೂಪಸಂಧಿಯು ಅಭಿನಿಹಿತಸಂಧಿ. (समानाक्षरे सस्थाने दीर्घमेकमुभे स्वरम् | ऋक्प्रा. २.१५, अकः सवर्णे दीर्घः | पा. ६.२.१०१ - प्रश्लिषट - १ | इकारोदय एकारमकारः सोदयः | तथा उकारोदय ओकारम् | ऋक्प्रा. २.१६.१७, आद्गुणः | पा. ६.१.८७ - प्रश्लिष्ट - २ | परेष्वैकारमोजयोः | औकारं युग्मयोः | ऋक्प्रा. २.१८.१९, वृद्धिरेचि | पा. ६.१.८८ - प्रश्लिष्ट - ३ | समानाक्षरमन्तस्थां स्वामकण्ठ्यं स्वरोदयम् | ऋक्प्रा. २.२१, इको यणचि | पा. ६.१.८८ - क्षैप्र | एङः पदान्तादति | पा. ६.१.१०९ - अभिनिहित |). ಉದಾ. मधु + उदकम् = मधूदकम्, आ + इन्द्र = एन्द्र, यस्य + ऊरुषु = यस्योरुषु | आ + एनम् = ऐनम्, यत्र + ओषधिः = यत्रौषधिः | नु + अत्रः = न्वत्र, वास्तूनि + उष्मसि = वास्तून्युष्मसि | दाशुषे + अग्ने = दाशुषेऽग्ने, स्तवानो + अन्यम् = स्तवानोऽन्यम् |

ii) ए, ओ, ऐ ಮತ್ತು औ ಗಳು ಸ್ವರಗಳು ಪರವಾದಾಗ ಕ್ರಮವಾಗಿ अय्, अव्, आय् ಮತ್ತು आव् ಆಗುತ್ತವೆ. ಅಂತಿಮ य् ಮತ್ತು व्‌ಗಳು अ ಅಥವಾ आ ಅನಂತರ ಐಚ್ಛಿಕವಾಗಿ ಲೋಪ ಹೊಂದುತ್ತವೆ. ಇದು ಶಾಕಲ್ಯರ ಮತ. ಋಕ್‌ಪ್ರಾತಿಶಾಖ್ಯದ ಪ್ರಕಾರ ए ಮತ್ತು ओಗಳು ಸ್ವರಗಳು ಮುಂದೆ ಬಂದಾಗ अ ಆಗಿಯೂ ऐ ಮತ್ತು औಗಳು आ ಆಗಿಯೂ ಬದಲಾಗುತ್ತವೆ. (एचोऽयवायावः | लोपः शाकल्यस्य | पा. ६.१.८८, ८.३.१०, उत्तमौ च द्वौ स्वरौ | पूर्वौ चोपात्तमात् स्वरौ | ऋक्प्रा. २.२५,२८). ಉದಾ. अग्ने इन्द्र = अग्नय् इन्द, अग्न इन्द्र | वायो उक्थोभिः - वायव् उक्थेभिः, वाय उक्थेभिः | अन्वेतवै + उ = अन्वेतवाय् उ, अन्वेतवा उ | उभौ + उ = उभाव् उ, उभा उ | ಇದಕ್ಕೆ ಋಕ್ ಪ್ರಾತಿಶಾಖ್ಯದಲ್ಲಿ उद्ग्राहसन्धिಯೆಂದು ಹೆಸರು.

iii) ಋಕ್ ಪ್ರಾತಿಶಾಖ್ಯದ ಪ್ರಕಾರ ಪ್ರಮುಖವಾಗಿ ಎರಡು ವ್ಯಂಜನಸಂಧಿಗಳು - **ಅವಶಂಗಮಸಂಧಿ** ಮತ್ತು **ವಶಂಗಮಸಂಧಿ** ಎಂದು ಹೆಸರು. ಎಲ್ಲಿ ಜೊತೆಗೂಡುವ ವ್ಯಂಜನಗಳು ಯಾವುದೇ ಬದಲಾವಣೆಯನ್ನು ಹೊಂದುವುದಿಲ್ಲವೋ ಅಲ್ಲಿ ಅವಶಂಗಮಸಂಧಿ. (स्पर्शाः पूर्वं व्यञ्जनान्युत्तराणि आस्थापितानाम् अवशंगमम् तत् | ऋक्प्रा. ४.१, न पदान्ताट्टोरनाम् | पा.८.४.४२, तोः षि | पा. ८.४.४३ |). ಉದಾ. वषट् + ते = वषट् ते, सन् + षष्ठः = सन्षष्ठः | ಎಲ್ಲಿ ಜೊತೆಗೂಡುವ ವ್ಯಂಜನಗಳಲ್ಲಿ ಒಂದು

ಬದಲಾವಣೆ ಹೊಂದಿದರೆ ಅಲ್ಲಿ ವಶಂಗಮಸಂಧಿ. (घोषवत्परा प्रथमास्तृतीयान् स्वान् | ऋक्प्रा. ४.२, झलां जशोऽन्ते | पा. ८.२.३९). ಉದಾ. वाक् + वदन्ति = वाग्वदन्ति, यत् + वा = यद्वा |

ಇವಲ್ಲದೆ ಲೌಕಿಕ ಸಂಸ್ಕೃತದಲ್ಲಿ ಕಾಣುವ ಇತರ ಸಂಧಿಗಳೂ ವೇದದಲ್ಲಿ ಸಾಮಾನ್ಯವಾಗಿ ಬರುತ್ತವೆ. ಉದಾ. शफवत् + जर्भुरीति = शफवज्जर्भुरीति (श्चुत्व), बभूवान् + शिरः = बभूवाञ्छिरः (छकारादेश) ಇತ್ಯಾದಿ.

## 4. ಸುಬಂತರೂಪಗಳಲ್ಲಿನ ಮುಖ್ಯ ವಿಶೇಷಗಳು

i) ಅಕಾರಾಂತ ಅಥವಾ ಆಕಾರಾಂತ ಪ್ರಾತಿಪದಿಕಗಳ ಅನಂತರ ಬರುವ जस् (ಪ್ರಥಮಾ ಬಹುವಚನ) ಪ್ರತ್ಯಯಕ್ಕೆ ಐಚ್ಛಿಕವಾಗಿ असुक् (अस्) ಎಂಬ ಆಗಮವು ಬರುತ್ತದೆ. (आज्जसेरसुक् | पा. ७.१.५०). ಉದಾ. जनासः (जनाः), रुद्रियासः (रुद्रियाः)|

ii) ನಪುಂಸಕಲಿಂಗಾಂತ ಶಬ್ದಗಳ ಅನಂತರ जस् (ಪ್ರಥಮಾ ಬಹುವಚನ) ಮತ್ತು शस् (ದ್ವಿತೀಯಾ ಬಹುವಚನ) ಪ್ರತ್ಯಯಗಳಿಗೆ ಬದಲಾಗಿ ಬರುವ शि ಎಂಬ ವಿಭಕ್ತ್ಯಂತವು ವೇದದಲ್ಲಿ ಐಚ್ಛಿಕವಾಗಿ ಲೋಪ ಹೊಂದುತ್ತದೆ. (जश्शसोः शिः | शेश्छन्दसि बहुलम् | पा. ७.१.२०, ६.१.७०). ಉದಾ. विश्वा भुवनानि (विश्वानि भुवनानि), त्री पदानि (त्रीणि पदानि)|

iii) ಅಕಾರಾಂತ ಪುಲ್ಲಿಂಗ ಮತ್ತು ನಪುಂಸಕಲಿಂಗ ಶಬ್ದಗಳಿಗೆ ತೃತೀಯಾ ಬಹುವಚನದಲ್ಲಿಬರುವ भिस्‌ಗೆ ऐस् ಆದೇಶವು ವೇದದಲ್ಲಿ ಬರಬಹುದು ಅಥವಾ ಬರದಿರಬಹುದು. (अतो भिस् ऐस् | बहुलं छन्दसि | पा. ७.१.९-१०). ಉದಾ. पूर्वेभिः नूतनैः | ಒಮ್ಮೊಮ್ಮೆ ऐस् ಆದೇಶವು ಅಕಾರಾಂತವಲ್ಲದ ಪದಗಳ ವಿಷಯದಲ್ಲೂ ಕಂಡು ಬರುತ್ತದೆ. ಉದಾ. नद्यैः |

iv) ವೇದದಲ್ಲಿ ಸುಪ್ ಪ್ರತ್ಯಯಗಳು ಬಹುವಚನದಿಂದ ಏಕವಚನಕ್ಕೆ ಪರಿವರ್ತಿತವಾಗಬಹುದು (सु), ಲುಪ್ತವಾಗಬಹುದು (लुक्), ಪೂರ್ವಸವರ್ಣ, आ, आत्, शे, या, डा, ड्या, याच् ಅಥವಾ आल् ಆಗಬಹುದು. आगबहुदु | (सुपां सु-लुक्-पूर्वसवर्णाऽऽच्छेयाडाड्यायाजालः | पा. ७.१.३९). ಉದಾ. सु - ऋजवः सन्तु पन्था (पन्थानः), (व्योमनि) | पूर्वसवर्ण - सुष्टुती (सुष्टत्या), सहूती (सहूत्या),

मती (मत्या) | आ - या सुरथा दिविस्पृशा (यौ सुरथौ दिविस्पृशौ) | आत् - नताद् ब्राह्मणम् (नतं ब्राह्मणम्) | शे (ए) - युष्मे वाजबन्धवः (युष्मासु वाजबन्धवः) | या - उरुया (उरुणा) | डा (आ) - नाभा पृथिव्याः (नाभौ पृथिव्याः) | ड्या (या) - अनुष्ट्या (अनुष्टया) | याच् (या) - साधुया (साधु,) रघुयः (रघवः) | आल् (आ) - वसन्ता यजेत (वसन्ते यजेत)| ಬೇರೆ ಆದೇಶಗಳನ್ನು ವಾರ್ತಿಕಗಳು ವಿಧಿಸುತ್ತವೆ.

---

## 5. ತಿಙಂತ ರೂಪಗಳು

---

i) ವೇದದಲ್ಲಿ लुङ्, लङ् ಮತ್ತು लिट् ಲಕಾರ ರೂಪಗಳು ಎಲ್ಲಾ ಲಕಾರಗಳಲ್ಲಿ ಬರಬಹುದು. (छन्दसि लुङ्लङ्लिटः | पा. ३.४.६). ಉದಾ. देवो देवेभिरागमत् (लोट्‌ಗೆ लुङ्); इदं तेभ्योऽकरं नमः (लुङ्, लोट್‌ಗೆ ಬದಲಾಗಿ); अग्निमद्य होतारम् अवृणीत (लट्‌ಗೆ लङ्); अद्य ममार (लट्‌ಗೆ लिट्)|

ii) लेट् - ಇದು ವೇದದಲ್ಲಿ ಮಾತ್ರ ಬರುವ ಲಕಾರ - लेड् वेदे | ಅದಕ್ಕೆ लोट् ಅಥವಾ लिङ् ಲಕಾರಗಳ ಅರ್ಥವಿರುತ್ತದೆ. ಇಚ್ಛೆಯನ್ನು ವ್ಯಕ್ತಗೊಳಿಸುವಾಗ ಅದಕ್ಕೆ लोट್‌ನ ಅರ್ಥ. ಉದಾ. भुवानि, वोचावहै, उच्चात्, अश्नवत् | ಪ್ರಶ್ನಾರ್ಥಕದೊಂದಿಗೆ ಬಂದಾಗ ಅದು 'ಶಂಕಾಯುಕ್ತ ಇಚ್ಛೆ'ಯನ್ನು ವ್ಯಕ್ತಪಡಿಸುತ್ತದೆ. ಉದಾ. कुवित् नु अस्य तृष्णवः | ಅದಕ್ಕೆ 'ಪರಸ್ಪರ ಒಪ್ಪಿಗೆ' ಅಥವಾ 'ಆಕಾಂಕ್ಷೆ'ಯ ಅರ್ಥವೂ ಇದೆ. ಉದಾ. अहमेव पशूनाम् ईशै, नेज्जिह्मायन्तो नरकं पताम | ವೇದದಲ್ಲಿ लेट् ಲಕಾರದ ಸಮೃದ್ಧವಾದ ರೂಪವೈವಿಧ್ಯವನ್ನು ಕಾಣಬಹುದು. (ಈ ಲೇಖಕನ ವೇದಭಾರತೀ, Appendix - Aನಲ್ಲಿ A. 19(a) - (c) ನೋಡಿರಿ).

iii) ವೇದದಲ್ಲಿ शप् (ಕರ್ತರಿ ವಿಕರಣ) ಪ್ರತ್ಯಯದ 'ಲುಕ್' ಲೋಪದ ವಿಷಯದಲ್ಲಿ ವೈವಿಧ್ಯವನ್ನು ಕಾಣಬಹುದು. ಉದಾ. अदादिगण (2ನೇ ಗಣ)ದ ಧಾತುಗಳ ಅನಂತರ शप् 'ಲುಕ್' ಆಗಬಹುದು. (अदिप्रभृतिभ्यः शपः | (लुक्) | बहुलं छन्दसि | पा. २.४.७२-७३).ಉದಾ. हनति (हन्ति), शयते (शेते) - ಎರಡನೆ ಗಣ. त्राध्वम् - ಒಂದನೇ ಗಣದ ಧಾತುವಿನ ಅನಂತರ शप् ಲುಕ್ ಆಗಿದೆ (त्रायध्वम्). ಹಾಗೆಯೇ श्लु ಎಂಬ ವಿಕರಣವು (ಇದರಿಂದ ಧಾತುಗಳಿಗೆ -3ನೇ ಗಣ जुहोत्यादि ಧಾತುಗಳಿಗೆ ದ್ವಿತ್ವ ಬರುತ್ತದೆ). (जुहोत्यादिभ्यः श्लुः | बहुलं छन्दसि | पा. २.४.७५-७६). ಉದಾ.

दाति (ददाति); विवष्टि (वष्टि). ವಿಕರಣ ಪ್ರತ್ಯಯಗಳು ವಿವಿಧ ರೀತಿಯಲ್ಲಿ ಬದಲಾಗುತ್ತವೆ. (व्यत्ययो बहुलम् | पा. ३.१.८५). ಉದಾ. भेदति (भिनत्तಿಗೆ ಬದಲಾಗಿ); श्नम् ವಿಕರಣಕ್ಕೆ ಬದಲಾಗಿ शप् ಬಂದಿದೆ.

## 6. ಉಪಸರ್ಗಗಳ ಬಳಕೆ

i) ಲೌಕಿಕ ಸಂಸ್ಕೃತದಲ್ಲಿ ಉಪಸರ್ಗ ಅಥವಾ ಗತಿಗಳು ಧಾತುವಿಗಿಂತ ಪೂರ್ವದಲ್ಲಿ ಬರುತ್ತವೆ. ಆದರೆ ವೇದದಲ್ಲಿ ಅವು ದಾತುವಿಗಿಂತ ಪೂರ್ವದಲ್ಲಿ ಬರಬಹುದು, ಪರದಲ್ಲಿಯೂ ಬರಬಹುದು. (लोके - ते प्रागधातो | पा. १.४.८०, वेदे - छन्दसि परेऽपि | पा. १.१.८१). ಉದಾ. नमो भरन्त ऐमसि | आ इमसि, ಇಲ್ಲಿ ಉಪಸರ್ಗವು ಧಾತುವಿಗಿಂತ ಪೂರ್ವದಲ್ಲಿ ಬಂದಿದೆ. चरथाभि धृष्णु | चरथ अभि, ಇಲ್ಲಿ ಉಪಸರ್ಗವು ಧಾತುವಿನ ಪರದಲ್ಲಿ ಬಂದಿದೆ.

ii) ಲೌಕಿಕ ಸಂಸ್ಕೃತದಲ್ಲಿ ಉಪಸರ್ಗಗಳು ಕ್ರಿಯಾಪದದಿಂದ ಬೇರ್ಪಟ್ಟಿರುವುದಿಲ್ಲ. ಆದರೆ ಅವು ವೇದದಲ್ಲಿ ಬೇರ್ಪಟ್ಟಿರಬಹುದಲ್ಲದೆ, ಅವುಗಳಿಗೂ ಕ್ರಿಯಾಪದಗಳಿಗೂ ಮಧ್ಯೆ ಬೇರೆ ಪದ ಅಥವಾ ಪದಗಳು ಬರಬಹುದು. (लोके - संहितैकपदे नित्या नित्या धातूपसर्गयोः | नित्या समासे वाक्ये तु सा विवक्षामपेक्षते || (सिद्धान्तकौमुदी, २२३२ वृत्तौ, वेदे - व्यवहिताश्च | पा. २.४.८२). ಉದಾ. स देवाँ एह वक्षति | (आ इह) | परि वाम् अरुषा वयो घृणा वरन्त | यः पार्थिवानि विममे रजांसि | ಇಲ್ಲಿ वि ಉಪಸರ್ಗವನ್ನು ममे ಎಂಬ ಕ್ರಿಯಾಪದದಿಂದ ಬೇರ್ಪಡಿಸಿಲ್ಲ. ಏಕೆಂದರೆ ಕ್ರಿಯಾಪದವು ಯತ್ ಶಬ್ದದೊಂದಿಗೆ ಸಂಬಂಧಿಸಿದೆ. वि यो ममे ಎಂಬುದು ಅಪವಾದಗಳಲ್ಲಿ ಒಂದು.

## 7. ವೈದಿಕ ತುಮುನ್ನರ್ಥಕ ಅವ್ಯಯ

ಲೌಕಿಕ ಸಂಸ್ಕೃತದಲ್ಲಿ तुमुन् ಅಂತವಾದ ಒಂದೇ ರೂಪ ಉಳಿದುಕೊಂಡು ಬಂದಿದೆ. ಆದರೆ ವೇದದಲ್ಲಿ ಇದಲ್ಲದೆ (तुमुन्नन्त ಋಗ್ವೇದದಲ್ಲಿ ವಿರಳ) ವಿವಿಧ ರೂಪಗಳ ತುಮುನ್ನರ್ಥಕಗಳು ದೊರೆಯುತ್ತವೆ. ಅವುಗಳ ಅಂತ್ಯಗಳನ್ನೂ ಅವಲಂಬಿಸಿ ಅವುಗಳಿಗೆ ದ್ವಿತೀಯಾಂತ, ಚತುರ್ಥ್ಯಂತ, ಪಂಚಮ್ಯಂತ, ಷಷ್ಠ್ಯಂತ ಮತ್ತು ಸಪ್ತಮ್ಯಂತ ತುಮುನ್ನರ್ಥಕಗಳೆಂದು ಕರೆಯುತ್ತಾರೆ.

i) **ಚತುರ್ಥ್ಯಂತ ತುಮುನ್ನರ್ಥಕ :** "तुमुन्" ಅರ್ಥದಲ್ಲಿ ಈ ಪ್ರತ್ಯಯಗಳು ವೇದದಲ್ಲಿ ಬರುತ್ತವೆ. से, सेन्, असे, असेन्, कसे, कसेन्, अध्यै, अध्यैन्, कध्यै, कध्यैन्, शध्यै, शध्यैन्, तवे, तवेङ्, तवेन्। (तुमर्थे सेसेनसेअसेन्क्सेकसेनध्यै-अध्यैन्कध्यैकध्यैन् शध्यैशध्यैन्तवेतवेङ्तवेनः | पा- ३-४-९). ಉದಾ. से, सेन्, क्से = से - वक्षे (वच् + से), सेन् - एषे (इ + सेन्), क्से - प्रेषे (प्र + इ + क्से) | असे, असेन्, कसेन् = असे - जीवसे (जीव् + असे) | अध्यै, अध्यैन् = पृणध्यै (पृण् + अध्यै) | कध्यै, कध्यैन् = आहुध्यै (आ + हु + कध्यै) | शध्यै - मादयध्वै | तवे, तवेङ्, तवेन् = सूतवे (सू + तवे), कर्तवे (कृ + तवेन्)| ಈ ಪ್ರತ್ಯಯಗಳು नित्, कित्, ङित् ಆಗಿರುವುದರಿಂದ ಕೆಲವು ಸ್ವರವ್ಯತ್ಯಾಸಗಳಿಗೆ ಕಾರಣವಾಗುತ್ತವೆ ಮತ್ತು ಧಾತುವಿಗೆ ಗುಣಬರುವುದು ಬರದಿರುವುದಕ್ಕೂ ಕಾರಣವಾಗುತ್ತವೆ. ञ्नित्यादिर्नित्यम् ಎಂಬ ಸೂತ್ರವು ಆದ್ಯುದಾತ್ತವನ್ನು ವಿಧಿಸುತ್ತದೆ. ಚತುರ್ಥ್ಯಂತ ತುಮುನ್ನರ್ಥಕಗಳು ಹೀಗೂ ಇರಬಹುದು - प्रयै = (प्र + या + कै); रोहिष्यै (रुह + इष्यै); अव्यथिष्यै (अ + व्यथ् + इष्यै); दृशे (दृश् + के); विख्ये (वि + ख्या + के)| (प्रयै रोहिष्यै अव्यथिष्यै | दृशे विख्ये च | पा. ३.४.१०-११)|

ii) **ದ್ವಿತೀಯಾಂತ ತುಮುನ್ನರ್ಥಕ :** शक् ಧಾತುವಿನ ಸಂಬಂಧವಿದ್ದರೆ, ವೇದದಲ್ಲಿ ಧಾತುಗಳಿಗೆ णमुल् ಮತ್ತು कमुल् ಬರುತ್ತವೆ. (शकि णमुल् - कमुलौ | पा. ३.४-१२). ಉದಾ. विभाजं नाशक्नुवम् (वि + भज् + णमुल्); अपलुपं नाशक्नुवम् (अप + लुप् + कमुल्) - ವೃದ್ಧಿ ಅಥವಾ ಗುಣ ಇಲ್ಲ.

iii) **ಪಂಚಮ್ಯಂತ ಅಥವಾ ಷಷ್ಠ್ಯಂತ ತುಮುನ್ನರ್ಥಕಗಳು :** ईश्वर ಎಂಬ ಶಬ್ದದ ಪ್ರಯೋಗವಿದ್ದಾಗ ಧಾತುಗಳಿಗೆ तोसुन् ಮತ್ತು कसुन् ಪ್ರತ್ಯಯಗಳು ಬರುತ್ತವೆ. (ईश्वरे तोसुन् कसुनौ | पा. ३.४.१३). ಉದಾ. ईश्वरो विचार्तोः (वि + चर् + तोसुन्) | ईश्वरो विलिखः (वि + लिख् + कसुन्)| ಕ್ರಿಯೆಯ ಹೆಸರು ಮಾತ್ರ ವಿವಕ್ಷಿತವಾದಾಗ स्था, इण्, कृ, वद्, चर्, हु, तम् ಮತ್ತು जन् ಧಾತುಗಳಿಗೆ तोसुन् ಪ್ರತ್ಯಯವು ಬರುತ್ತದೆ. (भावलक्षणे स्थेण्कृञ्वदिचरिहुतमिजनिभ्यस्तोसुन् | पा. ३.४.१६). ಉದಾ. आ संस्थातोः, उदेतोः, अपकर्तोः, प्रवदितोः, होतोः, आतमितोः, आ

विजनितोः | सृप् ಮತ್ತು ತೃದ ಧಾತುಗಳಿಗೆ कसुन् ಬರುತ್ತದೆ. (सृपितृदोः कसुन् | पा. ३.४.१७)| ಉದಾ. विसृपः, आतृदः |

**ಸಪ್ತಮ್ಯಂತ ತುಮುನ್ನರ್ಥಕಗಳು ವಿರಳ.**

## 1.2.3.4 ಋಗ್ವೇದದಲ್ಲಿ ಸ್ವರಗಳು

### 1. ಉದಾತ್ತ, ಅನುದಾತ್ತ ಮತ್ತು ಸ್ವರಿತ

ವೇದದಲ್ಲಿ ಮೂರು ಸ್ವರಗಳಿವೆ : ಉದಾತ್ತ, ಅನುದಾತ್ತ ಮತ್ತು ಸ್ವರಿತ ಎಂದು. ಉದಾತ್ತ ಮೇಲಿನ ಸ್ತರದ ಸ್ವರ - (उच्चैरुदात्तः | पा. १.२.१९) ಆದಕ್ಕೆ ಯಾವುದೇ ಚಿಹ್ನೆಯಿಲ್ಲ. ಅನುದಾತ್ತವು ಕೆಳಗಿನ ಸ್ತರದ ಸ್ವರ (नीचैरनुदात्तः | पा. १.२.३०). ಅದನ್ನು ವರ್ಣದ ಕೆಳಗೆ ಹಾಕಿದ ಅಡ್ಡವಾದ ಗೆರೆಯಿಂದ ಗುರುತಿಸಲಾಗುತ್ತದೆ (ಹೀಗೆ अ॒). ಸ್ವರಿತವು ಉದಾತ್ತ ಮತ್ತು ಅನುದಾತ್ತಗಳೆರಡರ ಮಿಶ್ರಣವುಳ್ಳ ಸ್ವರ. ಅದನ್ನು ವರ್ಣದ ಮೇಲೆ ಉದ್ದುದ್ದ ಗೆರೆಯಿಂದ ಗುರುತಿಸಲಾಗುತ್ತದೆ (ಹೀಗೆ अ॑). (समाहारः स्वरितः | पा.१.२.३१). ಸ್ವರಿತದ ಅರ್ಧಭಾಗವನ್ನು ಉದಾತ್ತವೆಂದೂ ಮಿಕ್ಕ ಅರ್ಧವನ್ನು ಅನುದಾತ್ತವೆಂದೂ ಪರಿಗಣಿಸಲಾಗುತ್ತದೆ. (तस्यादित उदात्तमर्धह्रस्वम् | पा. १.२.३२)

### 2. ಸ್ವರಿತ

ಸ್ವರಿತವು ಎರಡು ಬಗೆ - ಅಸ್ವತಂತ್ರ ಮತ್ತು ಸ್ವತಂತ್ರ ಸ್ವರಿತ ಎಂದು. ಹಿಂದಿನ ಉದಾತ್ತದ ಕಾರಣದಿಂದ ಅನುದಾತ್ತವು ಸ್ವರಿತವಾದಾಗ, ಆ ಸ್ವರಿತಕ್ಕೆ ಅಸ್ವತಂತ್ರ ಸ್ವರಿತವೆಂದು ಕರೆಯುತ್ತಾರೆ. ಇದನ್ನು ಮುಂದೆ 3.(ii)ರಲ್ಲಿ ವಿವರಿಸಲಾಗುವುದು. ಹಿಂದಿನ ಉದಾತ್ತವನ್ನು ಅವಲಂಬಿಸದೆ ಇರುವುದು ಸ್ವತಂತ್ರಸ್ವರಿತ. ಅದಕ್ಕೆ जात्यादि स्वरित ಎಂದು ಹೆಸರು. ಅದು ನಾಲ್ಕು ಬಗೆ – जात्यस्वरित, क्षैप्रस्वरित, प्रश्लिष्टस्वरित ಮತ್ತು अभिनिहितस्वरित ಎಂದು.

i) जात्यस्वरितः - ಉದಾತ್ತ ಮತ್ತು ಅನುದಾತ್ತಗಳ ಮೇಲನವು ಅಂತರ್ಲೀನವಾಗಿದ್ದು, ಅದು ಶಬ್ದಕ್ಕೆ ಸಹಜವೆಂಬಂತೆ ಇದ್ದರೆ ಆ ಸ್ವರಿತಕ್ಕೆ ಜಾತ್ಯಸ್ವರಿತವೆಂದು ಹೆಸರು. (ततोऽन्यत् स्वरितं स्वारं जात्यमाचक्षते परे | ऋक्प्रा. ३.८). ಉದಾ. क॒न्या॑, क्व॑, स्वः॑, वी॒र्या॑णि

ii) **क्षैप्रस्वरितः** - ಉದಾತ್ತಸ್ವರವುಳ್ಳ इ,ई,उ ಅಥವಾ ಊಗಳು ಅಸವರ್ಣ ಅನುದಾತ್ತ ಸ್ವರವು ಪರವಾದಾಗ य ಅಥವಾ वा ಆಗಿ (ಅಂದರೆ यण् ಆಗಿ) ಪರಿಣಮಿಸಿದಾಗ (ಅಂದರೆ क्षैप्र ಅಥವಾ यण् सन्धि ಆದಾಗ) ಉತ್ಪನ್ನವಾಗುವ ಸಂಧಿಜ ಸ್ವರಿತವು ಕ್ಷೈಪ್ರಸ್ವರಿತವೆಂದು ಕರೆಯಲ್ಪಡುತ್ತದೆ. (एकाक्षरसमावेशे पूर्वयोः स्वरितः स्वरः | ऋक्प्रा. ३.३, उदात्तस्वरितयोर्यणः स्वरितोऽनुदात्तस्य || पा. ८.२.४). ಉದಾ. व्याप्त (वि + आप्त); न्विन्द्र (नु + इन्द्र)।

iii) **प्रश्लिष्टस्वरितः** - ಉದಾತ್ತ ಮತ್ತು ಅನುದಾತ್ತಗಳು ಕೂಡಿ ಸವರ್ಣದೀರ್ಘಸಂಧಿಯಾದಾಗ ಉತ್ಪನ್ನವಾಗುವ ಸ್ವರಿತವು ಪ್ರಶ್ಲಿಷ್ಟಸ್ವರಿತ. (स्वरितो वाऽनुदात्ते पदादौ | पा. ८.२.६). ಉದಾ. दिवीव (दिवि + इ व); स्रुचीव (स्रुचि + इ व)।

iv) **अभिनिहितस्वरितः** - ಪದದ ಆದಿಯಲ್ಲಿರುವ ಅನುದಾತ್ತ अ ಪದಾಂತ ಉದಾತ್ತ ए ಅಥವಾ ओನಲ್ಲಿ ಅಂತರ್ಭಾವ ಹೊಂದಿದರೆ (ಪೂರ್ವರೂಪ), ಅದಕ್ಕೆ ಅಭಿನಿಹಿತಸ್ವರಿತವೆಂದು ಹೆಸರು. (स्वरितो वा अनुदात्ते पदादौ | पा- ८-२-६). ಉದಾ. तेऽब्रुवन्, तेऽवर्धन्त |

v) ಜಾತ್ಯಾದಿಸ್ವರಿತದ ಅನಂತರ ಅವ್ಯವಹಿತವಾಗಿ ಉದಾತ್ತ ಅಥವಾ ಇನ್ನೊಂದು ಜಾತ್ಯಾದಿಸ್ವರಿತ ಬಂದರೆ, ಪರನದಲ್ಲಿ ಕಂಪವುಂಟಾಗುತ್ತದೆ. ಹಿಂದಿನ ಅಚ್ ಹ್ರಸ್ವವಾದರೆ ಅದನ್ನು १ ಎಂಬ ಸಂಕೇತದ ಮೂಲಕವೂ ದೀರ್ಘವಾದರೆ ಅದನ್ನು ३ ಎಂಬ ಸಂಕೇತದ ಮೂಲಕವೂ ಗುರುತಿಸಲಾಗುತ್ತದೆ. ಸಂಕೇತವು (१ ಅಥವಾ ३) ಸ್ವರಿತ ಮತ್ತ ಅನುದಾತ್ತ ಚಿಹ್ನೆಗಳೆರಡರಿಂದಲೂ ಗುರುತಿಸಲ್ಪಡಬೇಕು. (जात्योऽभिनिहितश्चैव क्षैप्रः प्रश्लिष्ट एव च | एते स्वराः प्रकम्पन्ते यत्रोच्चस्वरितोदयाः | ऋक्प्रा. ३.३४). ಉದಾ. क्व १ स्यः, कन्या ३ वाः (Rv.2.33.7; ಮತ್ತು 8.91.1).

---

### 3. ಸ್ವರದ ಸಾಮಾನ್ಯ ನಿಯಮಗಳು

i) ವೇದದಲ್ಲಿ ಸಾಮಾನ್ಯವಾಗಿ ಪದವು ಒಂದು ವರ್ಣವನ್ನು ಬಿಟ್ಟು ಅನುದಾತ್ತವಾಗಿರುತ್ತದೆ. (अनुदात्तं पदमेकवर्जम् | पा. ६.१.१५८). ಉದಾ. अग्निम् | वीर्याणि |

ii) ಉದಾತ್ತದ ಅನಂತರ ಬರುವ ಅನುದಾತ್ತವು ಸ್ವರಿತವಾಗುತ್ತದೆ. (उदात्तादनुदात्तस्य स्वरितः । पा. ८.४.६६). ಉದಾ. अ॒ग्निमी॑ळे । पु॒रोहि॑तम् ।

iii) ಸ್ವರಿತದ ಅನಂತರ ಬರುವ ಅನುದಾತ್ತ ಅಥವಾ ಅನುದಾತ್ತಗಳು ಪ್ರಚಯವಾಗುತ್ತವೆ. ಅವುಗಳಿಗೆ एकश्रुति ಎಂದು ಹೆಸರು. (स्वरितात् संहितायामनुदात्तानाम् । पा. १.२.३०). ಉದಾ. अ॒ग्निमी॑ळे, पु॒रोहि॑तम् । ಪ್ರಚಯಗಳನ್ನು ಅನುದಾತ್ತ ಚಿಹ್ನೆಯಿಂದ ಗುರುತಿಸಬಾರದು.

iv) ಒಂದು ಉದಾತ್ತ ಅಥವಾ ಜಾತ್ಯಾದಿಸ್ವರಿತವು ಅವ್ಯವಹಿತವಾಗಿ ಮುಂದೆ ಬಂದಾಗ ಹಿಂದಿನ ಅನುದಾತ್ತಕ್ಕೆ ಸನ್ನತರವೆಂದು ಹೆಸರು. (उदात्तस्वरितपरस्य सन्नतरः । पा. १.२.४). ಆ ಅನುದಾತ್ತವು ಹಿಂದಿನ ಉದಾತ್ತದ ಕಾರಣದಿಂದ ಸ್ವರಿತವಾಗುವುದಿರಬಹುದು ಅಥವಾ ಸ್ವರಿತದ ಅನಂತರ ಪ್ರಚಯವಾಗುವುದಿರಬಹುದು. ಮುಂದೆ ಬರುವುದು ಉದಾತ್ತ ಅಥವಾ ಜಾತ್ಯಾದಿಸ್ವರಿತವೆಂದು ಸೂಚಿಸಲು ಅದಕ್ಕೆ ಸನ್ನತರ ಸಂಜ್ಞೆಯಿತ್ತು ಅನುದಾತ್ತ ಚಿಹ್ನೆಯಿಂದ ಗುರುತಿಸಲಾಗುತ್ತದೆ. ಉದಾ. अ॒ग्निमी॑ळे पु॒रोहि॑तम्, दे॒वमृ॒त्विज॑म् । (ಮೊದಲನೆ ಉದಾಹರಣೆಯಲ್ಲಿ पु ಪ್ರಚಯವಾಗಬಹುದಾಗಿತ್ತು, ಅದಕ್ಕೆ ಸನ್ನತರ ಸಂಜ್ಞೆಯಿತ್ತು ಅನುದಾತ್ತ ಚಿಹ್ನೆಯಿಂದ ಗುರುತಿಸಲಾಗಿದೆ. ಎರಡನೆ ಉದಾಹರಣೆಯಲ್ಲಿ मृ ಸ್ವರಿತವಾಗಬಹುದಿತ್ತು. ಅದಕ್ಕೆ ಸನ್ನತರ ಸಂಜ್ಞೆ ಬಂದಿದೆ, ಅನುದಾತ್ತ ಸಂಜ್ಞೆಯಿಂದ ಗುರುತಿಸಲಾಗಿದೆ. **ಗಮನಿಸಿ :** ಸ್ವರಿತದ ಹಿಂದಿದ್ದು ಚಿಹ್ನೆಯಿಲ್ಲದ ವರ್ಣ ಉದಾತ್ತ; ಸ್ವರಿತದ ಅನಂತರ ಅನುದಾತ್ತ ಚಿಹ್ನೆಯಿಂದ ಗುರುತಿಸದ ವರ್ಣವು ಪ್ರಚಯ).

ಈ ನಾಲ್ಕು ನಿಯಮಗಳ ಸಹಾಯದಿಂದ ಸ್ವರಹಾಕಿದ ಸಂಹಿತಾಪಾಠವನ್ನು ಪದಪಾಠಕ್ಕೆ ಪರಿವರ್ತಿಸಿ ಸ್ವರವನ್ನು ಗುರುತಿಸಬಹುದು. ಹಾಗೆಯೇ ಸ್ವರಹಾಕಿದ ಪದಪಾಠವನ್ನು ಸಂಹಿತಾಪಾಠಕ್ಕೆ ಪರಿವರ್ತಿಸಿ ಸ್ವರವನ್ನು ಗುರುತಿಸಬಹುದು.

v) ಅನುದಾತ್ತ ಮತ್ತು ಜಾತ್ಯಾದಿಸ್ವರಿತಗಳು ಉದಾತ್ತ ವರ್ಣದೊಂದಿಗೆ ಸೇರಿದ ಏಕಾದೇಶವು ಉದಾತ್ತವೇ ಆಗುತ್ತದೆ. (एकादेश उदात्तेनोदात्तः । पा. ८.२.५). ಉದಾ. इन्द्र॒ + अह॑न् = इन्द्राह॑न्; सू॒नवे॑ + अग्ने॑ = सू॒नवेऽग्ने॑; प्र॒ति॒ + अह॑न् = प्रत्यहन्

vi) ದ್ವಿತ್ವ ಹೊಂದಿದ ಪದದಲ್ಲಿ ಎರಡನೆಯದಕ್ಕೆ आम्रेडित ಎಂದು ಹೆಸರು. ಆಮ್ರೇಡಿತವು ಅನುದಾತ್ತ. (तस्य परमाम्रेडितम् । अनुदात्तं च । पा. ८.१.२-३).ಉದಾ. दिवेदिवे ।

vii) ನಿಪಾತಗಳು ಆದ್ಯುದಾತ್ತ. एवದಿಂದ ಮುಂದಿನ ನಿಪಾತಗಳು ಅಂತೋದಾತ್ತ. (निपाता आद्युदात्ताः | एवादीनामन्तः | फिट् सूत्र, ८०,८१). ಉದಾ. स्वाहा, मा; एव, एवम्

## 4. अनुदात्तं पदमेकवर्जम् ಎಂಬುದಕ್ಕೆ ಅಪವಾದಗಳು

अनुदात्तं पदमेकवर्जं ಎಂಬುದಕ್ಕೆ ಅನೇಕ ಅಪವಾದಗಳು. **ಮೊದಲನೆ ಗುಂಪು ಎರಡು ಉದಾತ್ತಗಳುಳ್ಳ ಪದಗಳದು:**

i) **तवै** ಅಂತವಾದ ತುಮುನ್ನರ್ಥಕಗಳಲ್ಲಿ ಮೊದಲನೆ ಹಾಗೂ ಕೊನೆಯ ವರ್ಣಗಳು ಉದಾತ್ತವಾಗಿರುತ್ತವೆ. (अन्तश्च तवै युगपत् | पा. ६.१.२००). ಉದಾ. भर्तवै; दातवै |

ii) वनस्पति ಮುಂತಾದ ಸಮಾಸಗಳು ಮತ್ತು देवताद्वन्द्व ಸಮಾಸಗಳು ಎರಡು ಉದಾತ್ತಗಳನ್ನು ಹೊಂದಿರುತ್ತವೆ. (उभे वनस्पत्यादिषु युगपत् | पा. ६.१.१४०, देवताद्वन्द्वे च | पा. ६.१.१४१). ಉದಾ. वनस्पत्यादि-वनस्पतिः, बृहस्पतिः, शचीपतिः, नाराशंसः, शुनःशेपः | देवताद्वन्द्व - इन्द्रावरुणा, मित्रावरुणा, इन्द्राबृहस्पती |

iii) वाव, वाच ಇತ್ಯಾದಿ ನಿಪಾತಗಳು ಎರಡು ಉದಾತ್ತಗಳನ್ನು ಹೊಂದಿವೆ. (वावादीनामुभावुदात्तौ | फिट् सूत्र, ८३. ಉದಾ. वाव, वाच |

**ಇವು ಸರ್ವಾನುದಾತ್ತಗಳು:**

iv) चादि ಗಣಕ್ಕೆ ಸೇರಿದ ಶಬ್ದಗಳು ಅನುದಾತ್ತಗಳು. (चादयोऽनुदात्ताः | फिट् सूत्र, ८४). ಉದಾ. च, वा, ह, अह, इव, उ, घ, चिद् ಇತ್ಯಾದಿ.

v) वाम् ಮತ್ತು नौ, वः ಮತ್ತು नः, त्वा, मा, ते ಮತ್ತು मे, ಇವು ಪಾದದ ಆದಿಯಲ್ಲಿ ಇಲ್ಲದಿರುವಾಗ ಅನುದಾತ್ತಗಳು. (अनुदात्तं सर्वमपादादौ | पा. ८.१.१८ - इत्यधिकृत्य - युष्मदस्मदोः षष्ठी चतुर्थीद्वितीयास्थयोर्वांनावौ | बहुवचनस्य वस्नसौ | तेमयावेकवचनस्य | त्वामौ द्वितीयायाः | पा. ८.१.२१,२२,३२).ಉದಾ. ता वाम्, या वः, भिषक्तमं त्वा, उन्मा ममन्द, आ ते पितर्मरुताम्, यो मे, अभि नः |

## 5. ಕ್ರಿಯಾಪದ ಸ್ವರ

i) ಪ್ರಧಾನ ವಾಕ್ಯಖಂಡದ (Principal Clause) ಕ್ರಿಯಾಪದವು (ಅಂದರೆ यत् ಶಬ್ದದ ರೂಪಗಳೊಂದಿಗೆ ಸಂಬಂಧವನ್ನು ಹೊಂದದಿರುವುದು), लुट् ರೂಪವನ್ನು ಹೊರತುಪಡಿಸಿ, ಬೇರೆ ಯಾವುದೇ ಆದರೂ ಅದು ಪಾದದ ಆದಿಯಲ್ಲಿ ಬರದೇ ಇದ್ದರೆ ನಿಘಾತ (ಸರ್ವಾನುದಾತ್ತ) ಸ್ವರವನ್ನು ಹೊಂದುತ್ತದೆ. [तिङतिङः | (पा. ८.१.२८) | न लुट् | (पा. ८.१.२९)]. ಉದಾ. अग्निमीळे (ई ळे)|

ii) ಪ್ರಧಾನ ವಾಕ್ಯಖಂಡದ ಕ್ರಿಯಾಪದವು यत्, यदि, हन्त, कुवित्, चेत्, चण्, कच्चित्, यत्र ಎಂಬ ನಿಪಾತಗಳೊಂದಿಗೆ नह (ನಿಷೇಧದಲ್ಲಿ), सत्यम् (ಪ್ರಶ್ನೆಯಲ್ಲಿ), अङ्ग (ಸ್ನೇಹಪೂರ್ವಕ ಆಗ್ರಹದಲ್ಲಿ), हि यावत् यथा (ಯಾವುದೇ ಸಂದರ್ಭದಲ್ಲಿ) ಎಂಬ ಪದಗಳೊಂದಿಗೆ ಸಂಬಂಧಿಸಿದಾಗ ಸೋದಾತ್ತವಾಗುತ್ತದೆ (ನಿಘಾತ ಪ್ರತಿಷೇಧವನ್ನು ಹೊಂದುತ್ತದೆ), (निपातैर्यद्यदिहन्तकुविच्चेच्चण्कच्चिद्यत्रयुक्तम् | नह प्रत्यारम्भे | सत्यं प्रश्ने | अङ्गाप्रातिलोम्ये | हि च | यावद् यथाभ्याम् | पा. ८.१.३०,३४,३६). ಉದಾ. यदग्ने स्याम् | (युवा यदि) कृथः | यदङ्ग दाशुषे त्वमग्ने भद्रं करिष्यसि | आहि जुह्वे |

iii) ಗೌಣವಾಕ್ಯಖಂಡಕ್ಕೆ (Subordinate Clause) ಸೇರಿದ ಕ್ರಿಯಾಪದವು (ಅಂದರೆ यत् ಶಬ್ದದ ರೂಪಗಳೊಂದಿಗೆ ಸಂಬಂಧವುಳ್ಳದ್ದು) ಯಾವಾಗಲೂ ಸೋದಾತ್ತವಾಗಿರುತ್ತದೆ. (यद्वृत्तान्नित्यम् | पा. ८.१.६६).ಉದಾ. (यानि) चकार | न यां मिहमकिरत् |

## 6. ಉಪಸರ್ಗಗಳ ಸ್ವರ

i) अभिಯೊಂದನ್ನು ಬಿಟ್ಟು, ಎಲ್ಲಾ ಉಪಸರ್ಗಗಳೂ ಆದ್ಯುದಾತ್ತ. अभि ಮಾತ್ರ ಅಂತೋದಾತ್ತ. (उपसर्गाश्चाभिवर्जम् | फिट् सूत्र, ८१).ಉದಾ. अप, उत्; अभि |

ii) ಕ್ರಿಯಾಪದಕ್ಕೆ ನಿಘಾತಸ್ವರ (ಸರ್ವಾನುದಾತ್ತ) ಬಂದಿದ್ದರೆ, ಸಾಮಾನ್ಯವಾಗಿ ಅದರಿಂದ ಬೇರ್ಪಟ್ಟ, ವ್ಯವಹಿತವಾದ ಉಪಸರ್ಗವು ತನ್ನ ಸ್ವರವನ್ನು (ಆದ್ಯುದಾತ್ತ, अभि ಅಂತೋದಾತ್ತ) ಉಳಿಸಿಕೊಳ್ಳುತ್ತದೆ. ಆದರೆ ಕ್ರಿಯಾಪದವು ಸೋದಾತ್ತವಾಗಿದ್ದರೆ ಸಾಮಾನ್ಯವಾಗಿ ಅದರೊಂದಿಗೆ ಸಮಾಸ ಹೊಂದಿದ ಉಪಸರ್ಗವು ನಿಘಾತವನ್ನು ಹೊಂದುತ್ತದೆ. (तिङि चोदात्तवति | पा. ८.१.८१). ಉದಾ. उन्मा ममन्द | (यतो देवा) उदजायन्त (उत् + अजायन्त)|

iii) ಉಪಸರ್ಗವು (ಗತಿಯು) ಇನ್ನೊಂದು ಉಪಸರ್ಗವು (ಗತಿಯು) ಪರವಾದಾಗ ನಿಘಾತವನ್ನು ಹೊಂದುತ್ತದೆ. (गतिर्गतौ | पा. ೮.೧.೭೦) ಉದಾ. अभ्युद्धरन्ति (अभि + उत् + ध र न्ति)|

## 7. ಸಂಬೋಧನ (ಆಮಂತ್ರಿತ) ಪದದ ಸ್ವರ

i) ಪಾದದ ಆದಿಯಲ್ಲಿರುವ ಆಮಂತ್ರಿತ ಪದಕ್ಕೆ 'ಆದ್ಯುದಾತ್ತ' ಬರುತ್ತದೆ. ಇದು ಆರನೇ ಅಧ್ಯಾಯದ आमन्त्रितस्य च | (೬.೧.೧೯೮) ಎಂಬ ಸೂತ್ರದ ಪ್ರಕಾರ. ಉದಾ. अग्ने यं यज्ञमध्वरम् | (ಋ. 1.1.4).

ii) ಆಮಂತ್ರಿತ ಪದವು ಪಾದದ ಆದಿಯಲ್ಲಿ ಇಲ್ಲದಿದ್ದರೆ, ಅದಕ್ಕೆ ನಿಘಾತಸ್ವರವು ಬರುತ್ತದೆ. ಇದು ಎಂಟನೆಯ ಅಧ್ಯಾಯದ आमन्त्रितस्य च (೮.೧.೧೯) ಎಂಬ ಸೂತ್ರದ ಪ್ರಕಾರ. ಉದಾ. उप त्वा अग्ने | (ಋ. 1.1.7).

iii) ಆಮಂತ್ರಿತ ಪದವು ಪರವಾದಾಗ ಹಿಂದಿನ ಸುಬಂತವನ್ನು ಸ್ವರದ ದೃಷ್ಟಿಯಿಂದ ಅದರ ಅಂಗವೆಂದು ಭಾವಿಸಲಾಗುತ್ತದೆ. ವಾರ್ತಿಕವು ಇದನ್ನು ಕೇವಲ ಆ ಕ್ರಿಯಾಪದಕ್ಕೆ ಸಂಬಂಧಿಸಿದ (ಕರ್ತೃಕಾರಕವಾದ) ಸುಬಂತ ಮತ್ತು ಷಷ್ಠೀವಿಭಕ್ತಿಯಲ್ಲಿ, ಇರುವ ಸಂಬಂಧಿಸಿದ ಸುಬಂತಗಳಿಗೆ ಸೀಮಿತಗೊಳಿಸುತ್ತದೆ. (सुबामन्त्रिते पराङ्गवत्स्वरे पा. २.१.२; षष्ठ्यामन्त्रितकारकवचनम् | (वार्तिकम्)| ಉದಾ. परशुनावृश्चन् | ಪಾದದ ಆದಿಯಲ್ಲಿ ಬಂದು वृश्चन् ಎಂಬ ಆಮಂತ್ರಿತದೊಂದಿಗೆ ಕರ್ತೃಕಾರಕವಾಗಿ ಆದ್ಯುದಾತ್ತವನ್ನು ಹೊಂದುತ್ತದೆ. ಮೇಲಿನ 7.(i)ಅನ್ನು ನೋಡಿ. यत्ते दिवो दुहितः | ಇಲ್ಲಿ दिवः ಎಂಬ ಷಷ್ಠ್ಯಂತವು दुहितः ಎಂಬ ಆಮಂತ್ರಿತಕ್ಕೆ ಸಂಬಂಧಿಸಿದ್ದು, ಪರದಲ್ಲಿರುವ ಅದರ ಅಂಗವಾಗಿ ಎಂಟನೆ ಅಧ್ಯಾಯದ आमन्त्रितस्य च ಪ್ರಕಾರ ನಿಘಾತ ಸ್ವರವನ್ನು ಹೊಂದಿದೆ. 7.(ii)ಅನ್ನು ನೋಡಿ.

iv) ಸುಬಂತವು (ಕಾರಕ ಅಥವಾ ಷಷ್ಠೀ) ಆಮಂತ್ರಿತ ಪದದ ಅನಂತರ ಬಂದಿದ್ದರೆ ಆಗ ಅದನ್ನು ಸ್ವರದ ದೃಷ್ಟಿಯಿಂದ ಹಿಂದಿನ ಆಮಂತ್ರಿತದ ಅಂಗವೆಂದು ತಿಳಿಯಬೇಕು. (पराङ्गवच्चेति वक्तव्यम् | वार्तिकम् |). ಉದಾ. आ ते पितमरुताम् | 7.(ii)ಅನ್ನು ನೋಡಿ.

v) ಆಮಂತ್ರಿತವು ಪಾದದ ಆದಿಯಲ್ಲಿ ಬಂದಿದ್ದರೆ, ಮುಂದಿನ ಪದದ ಸ್ವರದ

ದೃಷ್ಟಿಯಿಂದ, ಆದೇಶಾದಿಗಳ ದೃಷ್ಟಿಯಿಂದ ಅದನ್ನು ಇಲ್ಲವೆಂದೇ (ಅವಿದ್ಯಮಾನವತ್) ತಿಳಿಯಬೇಕು. ಮುಂದೆ ಬರುವ ಕ್ರಿಯಾಪದ ಅಥವಾ ಇನ್ನೊಂದು ಆಮಂತ್ರಿತ ಪದದ ಸ್ವರದ ವಿಷಯದಲ್ಲಿ ಅದು ಇಲ್ಲವೆಂದೇ ತಿಳಿಯಬೇಕು. ಅಂದರೆ ಅವುಗಳಿಗೆ ನಿಘಾತಸ್ವರವು ಬರುವುದಿಲ್ಲ. (आमन्त्रितं पूर्वमविद्यमानवत् | पा. ८.१.७२). ಉದಾ. इन्द्रो जयेम | सम्राड् ऋतावः | ಮೊದಲನೆ ಉದಾಹರಣೆಯಲ್ಲಿ ಕ್ರಿಯಾಪದದ ಸ್ವರದ ಮೇಲೆ ಹಿಂದಿನ ಆಮಂತ್ರಿತದ ಪರಿಣಾಮವಿಲ್ಲ. ಎರಡನೆಯ ಉದಾಹರಣೆಯಲ್ಲಿ ಇನ್ನೊಂದು ಆಮಂತ್ರಿತ ಪದದ ಸ್ವರದ ಮೆಲೆ ಪರಿಣಾಮವಿಲ್ಲ.

---

## 8. ಬಹುವ್ರೀಹಿ ಸಮಾಸದ ಸ್ವರ

---

i) ಸಮಾಸದ ಸಾಮಾನ್ಯ ಸ್ವರವೆಂದರೆ "ಅಂತೋದಾತ್ತ" (समासस्य | पा. ६.१.२२३ – अन्त उदात्तः स्यात् |). ಉದಾ. यज्ञश्रियम् |

ii) ಬಹುವ್ರೀಹಿ ಸಮಾಸದಲ್ಲಿ ಪೂರ್ವಪದವು ತನ್ನ ಮೂಲ (ಪ್ರಕೃತಿ) ಸ್ವರವನ್ನು ಉಳಿಸಿಕೊಳ್ಳುತ್ತದೆ. (बहुव्रीहौ प्रकृत्या पूर्वपदम् | पा. ६.२.१). ಉದಾ. इन्द्रशत्रुः | (इन्द्र ಶಬ್ದವು "ಆದ್ಯುದಾತ್ತ")

iii) ಮೂಲತಃ "ಆದ್ಯುದಾತ್ತ"ವುಳ್ಳ ವಿಶ್ವ ಶಬ್ದವು ಸಂಜ್ಞೆಯಾಗಿರುವ ಬಹುವ್ರೀಹಿ ಸಮಾಸದ ಪೂರ್ವಪದವಾದಾಗ "ಅಂತೋದಾತ್ತ"ವಾಗುತ್ತದೆ. (बहुव्रीहौ विश्वं संज्ञायाम् | पा. ६.१.१०६). ಉದಾ. विश्वकर्मा | विश्वदेवः |

iv) नञ् ಅಥವಾ सु ದಿಂದ ಆರಂಭವಾಗುವ ಬಹುವ್ರೀಹಿ ಸಮಾಸವು "ಅಂತೋದಾತ್ತ"ವಾಗುತ್ತದೆ. (नञ्सुभ्याम् | पा. ६.२.१०२). ಉದಾ. अध्वरम् | सूपायनः |

v) नञ् ಅನಂತರ ಬಹುವ್ರೀಹಿ ಸಮಾಸದಲ್ಲಿ ಬರುವ जर, मर, मित्र ಮತ್ತು मृत ಶಬ್ದಗಳು "ಆದ್ಯುದಾತ್ತ"ವಾಗಿರುತ್ತವೆ. (नञो जरमरमित्रमृताः | पा. ६.२.११६). ಉದಾ. अजरः, अमरः, अमित्रः, अमृतः |

vi) ಬಹುವ್ರೀಹಿ ಸಮಾಸದಲ್ಲಿ सु ಅನಂತರ क्रतु ಮುಂತಾದವು "ಆದ್ಯುದಾತ್ತ"ವಾಗಿರುತ್ತವೆ. (क्रत्वादयश्च | पा. ६.२.११७).ಉದಾ. सुक्रतुः, सुहव्यः, सुप्रतीकः |

vii) ಬಹುವ್ರೀಹಿ ಸಮಾಸದಲ್ಲಿ सु ಅನಂತರ "ಆದ್ಯುದಾತ್ತ"ವಾದ ದ್ವ್ಯಚ್ (ಎರಡು ವರ್ಣಗಳುಳ್ಳ) ಪದಗಳು ತಮ್ಮ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತವೆ. (आद्युदात्तं द्व्यच्छन्दसि | पा. ६.२.११९). ಉದಾ. सुरथान्, स्वश्वः |

viii) ಬಹುವ್ರೀಹಿ ಸಮಾಸದಲ್ಲಿ सु ಅನಂತರ वीर ಮತ್ತು वीर्य ಎಂಬ ಶಬ್ದಗಳು "ಆದ್ಯುದಾತ್ತ"ವಾಗಿರುತ್ತವೆ. (वीरवीर्यौ च | पा. ६.२.१२०). ಉದಾ. सुवीरः, सुवीर्यस्य (वीर ಮೂಲತಃ "ಅಂತೋದಾತ್ತ" वीर्य ಎರಡನೆ ವರ್ಣದ ಮೇಲೆ ಜಾತ್ಯಸ್ವರಿತವನ್ನು ಹೊಂದಿದೆ – वीर्य)|

---

## 9. ತತ್ಪುರುಷ ಸಮಾಸದ ಸ್ವರ

i) ತತ್ಪುರುಷಸಮಾಸದಲ್ಲಿ ಪೂರ್ವಪದವು (1) तुल्यार्थ ಶಬ್ದವಾಗಿದ್ದರೆ, (2) ತೃತೀಯಾಂತವಾಗಿದ್ದರೆ, (3) ಸಪ್ತಮ್ಯಂತವಾಗಿದ್ದರೆ, (4) ಉತ್ತರಪದಕ್ಕೆ ಉಪಮಾನವಾಗಿದ್ದರೆ, (5) ಅವ್ಯಯವಾಗಿದ್ದರೆ, (6) ದ್ವಿತೀಯಾಂತವಾಗಿದ್ದರೆ ಅಥವಾ (7) ಕೃತ್ಯಪ್ರತ್ಯಯಾಂತವಾಗಿದ್ದರೆ, ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ. (तत्पुरुषे तुल्यार्थतृतीयासप्तम्युपमानाव्ययद्वितीयाकृत्याः | पा. ६.२.२). ಇಲ್ಲಿ अव्यय ಎಂಬುದರಿಂದ नञ, कु ಮತ್ತು ನಿಪಾತಗಳನ್ನು ತಿಳಿದುಕೊಳ್ಳಬೇಕು. (अव्यये नञ्कुनिपातानाम् | वार्तिकम् |). ಕ್ರಮೇಣ ಉದಾಹರಣೆಗಳು - (1) तुल्यश्वेतः | (2) किरिकाणः | (3) मन्दयत्सखम् | (4) शस्त्रीश्यामा | (5) अयज्ञः | (6) मुहूर्तसुखम् | (7) भोज्योष्णम् (भोज्य ಕೃತ್ಯ ಪ್ರತ್ಯಯಾಂತ. ದ್ವಿತೀಯ ವರ್ಣದ ಮೇಲೆ जात्यस्वरितವಿದೆ).

ii) ತತ್ಪುರುಷಸಮಾಸದಲ್ಲಿ सदृश ಮತ್ತು प्रतिरूप ಎಂಬ ಪದಗಳ ಪೂರ್ವದಲ್ಲಿನ ಪೂರ್ವಪದವು ತನ್ನ ಪ್ರಕೃತಿ ಸ್ವರವನ್ನು ಉಳಿಸಿಕೊಳ್ಳುತ್ತದೆ. (सदृशप्रतिरूपयोः सादृश्ये | पा. ६.२.११). ಉದಾ. पितृसदृशः | पितृप्रतिरूपः |

iii) ತತ್ಪುರುಷಸಮಾಸದಲ್ಲಿ ಪೂರ್ವಪದವು ಹಿತಾರ್ಥದಲ್ಲಿರುವ सुख ಮತ್ತು प्रिय ಶಬ್ದಗಳಿಗೆ ಪೂರ್ವದಲ್ಲಿದ್ದರೆ ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ. (सुखप्रिययोर्हिते | पा. ६.२.१५). ಉದಾ. गमनसुखम् | गमनप्रियम् |

iv) ತತ್ಪುರುಷಸಮಾಸದಲ್ಲಿ ಚತುರ್ಥ್ಯಂತವಾದ ಪೂರ್ವಪದವು ಉತ್ತರಪದದ ಅರ್ಥವು ಪೂರ್ವಪದದ ಅರ್ಥವಾಗಲು ಯೋಗ್ಯವಾಗಿದ್ದರೆ (ತದರ್ಥ) ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ. (चतुर्थी तदर्थे | पा. ६.२.४३).ಉದಾ. यूपदारु (यूपाय दारु)|.

v) ತತ್ಪುರುಷಸಮಾಸದಲ್ಲಿ ತೃತೀಯಾಂತವಾದ ಪೂರ್ವಪದವು ಭೂತಕರ್ಮಣಿ ಕೃದಂತದ (क्तान्त) ಪೂರ್ವದಲ್ಲಿ ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ. (तृतीया कर्मणि | पा. ६.२.४७). ಉದಾ. रुद्रहतः (रुद्रेण हतः)|

vi) ಗತಿಯು (ಉಪಸರ್ಗವು) ತತ್ಪುರುಷಸಮಾಸದಲ್ಲಿ ಕರ್ಮಣಿ ಅರ್ಥದಲ್ಲಿ ಇರುವ क्तान्तದ ಪೂರ್ವದಲ್ಲಿ ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ. (गतिरनन्तरः | पा. ६.२.४९).ಉದಾ. पुरोहितम् |

vii) ತತ್ಪುರುಷಸಮಾಸದಲ್ಲಿ ಕೃದಂತವು गति, कारक ಅಥವಾ उपपदದ ಅನಂತರ ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ. (गतिकारकोपपदात् कृत् | पा. ६.२.१३९). ಉದಾ. (1) प्रहरणम् | (2) नृवाहसा (नृन् वहति इति - with असुन्), (3) उच्चैःकारम् | (उच्चैः - ಉಪಪದ).

---

## 10. ಕರ್ಮಧಾರಯ ಸಮಾಸಗಳ ಸ್ವರ

i) ಕರ್ಮಧಾರಯ ಸಮಾಸದಲ್ಲಿ, कुमार ಪದವು ಪೂರ್ವಪದವಾಗಿದ್ದರೆ ತನ್ನ ಪ್ರಕೃತಿ ಸ್ವರವನ್ನು ಉಳಿಸಿಕೊಳ್ಳುತ್ತದೆ. (कुमारश्च | पा. ६.२.२६). ಉದಾ. कुमारश्रमणः | कुमारदैण्णाः |

---

## 11. ದ್ವಿಗುಸಮಾಸದ ಸ್ವರ

i) ದ್ವಿಗುಸಮಾಸದಲ್ಲಿ ಪೂರ್ವಪದವು (1) इ, उ ಅಥವಾ ऋಕಾರಾಂತ ಪದ, (2) ಕಾಲವಾಚಕ ಶಬ್ದ, (3) कपाल, भगाल ಅಥವಾ शराव ಶಬ್ದ, ಇವುಗಳ ಪೂರ್ವದಲ್ಲಿ ತನ್ನ ಪ್ರಕೃತಿ ಸ್ವರವನ್ನು ಉಳಿಸಿಕೊಳ್ಳುತ್ತದೆ. (इगन्तकालकपालभगालशरावेषु | पा. ६.२.२९). ಉದಾ. (1) पञ्चरत्नीः | (2) दशमास्यः | (3) पञ्चकपालः | (4) पञ्चभगालः | पञ्चशरावः |

---

## 12. ಅವ್ಯಯೀಭಾವಸಮಾಸ ಸ್ವರ

i) ಅವ್ಯಯೀಭಾವ ಸಮಾಸದಲ್ಲಿ परि, प्रति, उप ಅಥವಾ अप ಎಂಬ ನಿಪಾತಗಳು

(1) ವರ್ಜ್ಯವನ್ನು ಹೇಳುವ ಪದ ಅಥವಾ (2) ದಿನ ಮತ್ತು ರಾತ್ರಿ ಅವಯವ(ಭಾಗ)ಗಳನ್ನು ತಿಳಿಸುವ ಪದದ ಪೂರ್ವದಲ್ಲಿ ತನ್ನ ಪ್ರಕೃತಿ ಸ್ವರವನ್ನು ಉಳಿಸಿಕೊಳ್ಳುತ್ತದೆ. (परिपत्युपापा वर्ज्यमानाहोरात्रावयवेषु | पा. ६.२.३३). ಉದಾ. (1) परित्रिगर्तम् (त्रिगर्तं वर्जयित्वा) (2) प्रतिपूर्वाह्णम् (पूर्वाह्ण प्रति)|

ii) ಅವ್ಯಯೀಭಾವಸಮಾಸದಲ್ಲಿ ಉತ್ತರಪದವಾಗಿ ಬರುವ कूल, तीर, तूल, मूल, शाला, अक्ष ಮತ್ತು सम ಪದಗಳು "ಆದ್ಯುದಾತ್ತ'ವಾಗಿರುತ್ತವೆ. (कूलतीरतूल-मूलशालाक्षसमममव्ययीभावे | पा. ६.२.१७१). ಉದಾ. उपकूलम् | उपतीरम् | सुषमम् | निःषमम् |

---

## 13. ದ್ವಂದ್ವಸಮಾಸದ ಸ್ವರ

---

i) ದ್ವಂದ್ವಸಮಾಸದಲ್ಲಿ ಸಂಖ್ಯಾವಾಚಕವು ಪೂರ್ವಪದವಾಗಿದ್ದು ತನ್ನ ಸ್ವರವನ್ನು ಉಳಿಸಿಕೊಳ್ಳುತ್ತದೆ. (संख्या | पा. ६.५.३५). ಉದಾ. एकादश |

ii) ದೇವತಾದ್ವಂದ್ವಸಮಾಸಗಳ ಸ್ವರದ ವಿಷಯಕ್ಕೆ ಮೇಲೆ 4.(ii)ಅನ್ನು ನೋಡಿ.

---

## 1.2.4 ಪ್ರಶ್ನೆಗಳು

---

1.2.4.1. ಋಗ್ವೇದದ ಭಾರತೀಯ ಭಾಷ್ಯಕಾರರನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

1.2.4.2. ಋಗ್ವೇದದ ವ್ಯಾಖ್ಯಾನವನ್ನು ಮಾಡಿದ ಪಾಶ್ಚಾತ್ಯ ವಿದ್ವಾಂಸರ ಪ್ರಯತ್ನಗಳನ್ನು ಕುರಿತು ಒಂದು ಪರಿಚಯಾತ್ಮಕ ನಿಬಂಧವನ್ನು ರಚಿಸಿರಿ.

**1.2.4.3. ಕೆಳಗೆ ಕೊಟ್ಟವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ :**

i) प्रगृह्यम् |

ii) ಋಕ್‌ಪ್ರಾತಿಶಾಖ್ಯದ ಪ್ರಕಾರ ಸಂಧಿಗಳು

iii) ಋಗ್ವೇದದಲ್ಲಿ ಉಪಸರ್ಗಗಳ ಪ್ರಯೋಗ

iv) ವೈದಿಕ ತುಮುನ್ನರ್ಥಕ ರೂಪಗಳು

v) ಕ್ರಿಯಾಪದದ ಸ್ವರ

vi) ಉಪಸರ್ಗಗಳ ಸ್ವರ

vii) ಆಮಂತ್ರಿತ ಸ್ವರ

viii) ಬಹುವ್ರೀಹಿ ಸಮಾಸಗಳ ಸ್ವರ

ix) ತತ್ಪುರುಷಸಮಾಸಗಳ ಸ್ವರ

**NOTES**

ಘಟಕ – 3

# ವೇದಸೂಕ್ತಗಳು
# ಸವಿತೃ ಮತ್ತು ವಿಷ್ಣು ಸೂಕ್ತಗಳು

1.3.1 ಸವಿತೃಸೂಕ್ತಕ್ಕೆ ಪ್ರಸ್ತಾವನೆ (ಋ. 1.35)

1.3.2 ಸವಿತೃಸೂಕ್ತದ ಮಂತ್ರಗಳ ಅಧ್ಯಯನ [1.3.2.(i) - (xi)]

1.3.3 ಸವಿತೃ ದೇವತೆಯ ಲಕ್ಷಣಗಳು

1.3.4 ವಿಷ್ಣುಸೂಕ್ತಕ್ಕೆ ಪ್ರಸ್ತಾವನೆ (ಋ. 1.154)

1.3.5 ವಿಷ್ಣುಸೂಕ್ತದ ಮಂತ್ರಗಳ ಅಧ್ಯಯನ [1.3.5.(i) - (vi)]

1.3.6 ವಿಷ್ಣುದೇವತೆಯ ಲಕ್ಷಣಗಳು

1.3.7 ಪ್ರಶ್ನೆಗಳು

# ಘಟಕ – 3

# ವೇದಸೂಕ್ತಗಳು
# ಸವಿತೃ ಮತ್ತು ವಿಷ್ಣು ಸೂಕ್ತಗಳು

## 1.3.1 ಸವಿತೃಸೂಕ್ತಕ್ಕೆ ಪ್ರಸ್ತಾವನೆ

ಈ ಸೂಕ್ತವು ಋಗ್ವೇದದ ಒಂದನೆಯ ಮಂಡಲಕ್ಕೆ ಸೇರಿದ 35ನೆಯ ಸೂಕ್ತ. ಇದರ ಋಷಿ ಹಿರಣ್ಯಸ್ತೂಪ, ದೇವತೆ ಸವಿತೃ ಮತ್ತು ಛಂದಸ್ಸು, ಒಂದನೆಯ ಮತ್ತು ಒಂಬತ್ತನೆಯ ಮಂತ್ರಗಳು ಜಗತೀ ಛಂದಸ್ಸಿನಲ್ಲಿಯೂ ಮಿಕ್ಕವು ತ್ರಿಷ್ಟುಭ್ ಛಂದಸ್ಸಿನಲ್ಲಿಯೂ ಇರುವುವು. ಈ ಸೂಕ್ತದಲ್ಲಿ ಒಟ್ಟು 11 ಮಂತ್ರಗಳಿವೆ. ಅವುಗಳನ್ನು ವಿವರಿಸಲಾಗುವುದು.

### i) त्रिष्टुभ्छन्दोलक्षण

ತ್ರಿಷ್ಟುಭ್ ಛಂದಸ್ಸು ಒಂದೊಂದರಲ್ಲಿ 11 ವರ್ಣಗಳುಳ್ಳ ಒಂದೇ ರೀತಿಯ ರಚನೆಯುಳ್ಳ ನಾಲ್ಕು ಪಾದಗಳನ್ನು ಹೊಂದಿದೆ. ಒಂದೊಂದು ಪಾದದ ಆರಂಭವು "ಯತಿ" (ಛಂದೋವಿರಾಮ - Metrical Pause)ಯನ್ನು ಅವಲಂಬಿಸಿ 4 ಅಥವಾ 5 ವರ್ಣಗಳನ್ನು ಹೊಂದಿರುತ್ತದೆ. ಕಡೆಯ ಭಾಗ (Cadence) ನಾಲ್ಕು ವರ್ಣಗಳನ್ನು ಹೊಂದಿರುತ್ತದೆ. ಮಧ್ಯದ ಭಾಗ ಯತಿಯನ್ನವಲಂಬಿಸಿ ಎರಡು ಅಥವಾ ಮೂರು ವರ್ಣಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಕಡೆಯ ನಾಲ್ಕು ವರ್ಣಗಳು ಗುರು ಲಘು (– U), ಗುರು ಲಘು (– U) ಆಗಿರುತ್ತವೆ. ಆರಂಭವು U – U – ಅಥವಾ U – U – U ಆಗಿರುತ್ತದೆ. ಮಧ್ಯವು UU– ಅಥವಾ UU ಆಗಿರುತ್ತದೆ.

| ಆರಂಭ | ಮಧ್ಯ | ಅಂತ್ಯ | ಆರಂಭ | ಮದ್ಯ | ಅಂತ್ಯ |
|---|---|---|---|---|---|
| U – U – | U U – | – U – U | U – U – U | U U | – U – U |
| Iambic | | Trochaic | Iambic | | Trochaic |

### ii) जगतीछन्दोलक्षण

ಜಗತೀ ಛಂದಸ್ಸು ಒಂದೊಂದರಲ್ಲೂ 12 ವರ್ಣಗಳುಳ್ಳ ಸಮಾನ ರಚನೆಯುಳ್ಳ ನಾಲ್ಕು ಪಾದಗಳನ್ನು ಒಳಗೊಂಡಿದೆ. ಅದರ ಆರಂಭವು ತ್ರಿಷ್ಟುಭಂನ ಆರಂಭದಂತೆಯೇ ನಾಲ್ಕು ಅಥವಾ ಐದು ವರ್ಣಗಳುಳ್ಳದ್ದು. ಮಧ್ಯವು ನಾಲ್ಕು ಅಥವಾ ಐದು ವರ್ಣಗಳನ್ನು

ಹೊಂದಿರುತ್ತದೆ ಮತ್ತು ಅಂತ್ಯಭಾಗವು ತ್ರಿಷ್ಟುಭ್‌ನಂತೆಯೇ ನಾಲ್ಕು ವರ್ಣಗಳನ್ನು ಒಳಗೊಂಡಿರುತ್ತದೆ. ಅವುಗಳ ಸ್ವರೂಪವನ್ನು ನೋಡಿ :

| ಆರಂಭ | ಮಧ್ಯ | ಅಂತ್ಯ | ಆರಂಭ | ಮಧ್ಯ | ಅಂತ್ಯ |
|---|---|---|---|---|---|
| U – U – | U U – – | U – U – | U – U – – | U U – | U – U – |
| Iambic | | Iambic | Iambic | | Iambic |

## 1.3.2 ಸವಿತೃಸೂಕ್ತದ ಮಂತ್ರಗಳ ಅಧ್ಯಯನ

## 1.3.2.(i) ह्वयाम्यग्निं, इत्यादि

| ಸಂಹಿತಾಪಾಠ | ಪದಪಾಠ |
|---|---|
| ह्वया॑म्य॒ग्निं प्र॑थ॒मं स्व॒स्तये॑ | ह्वया॑मि। अ॒ग्निम्। प्र॒थ॒मम्। स्व॒स्तयें। |
| ह्वया॑मि मि॒त्रावरु॑णावि॒हाव॒से। | ह्वया॑मि। मि॒त्रावरु॑णौ। इ॒ह। अव॑से। |
| ह्वया॑मि॒ रात्रीं॒ जग॑तो नि॒वेश॑नीं॒ | ह्वया॑मि। रात्री॑म्। जग॑तः। नि॒ऽवेश॑नीम्। |
| ह्वया॑मि दे॒वं स॑वि॒तार॑मूतयें।।१।। | ह्वया॑मि। दे॒वम्। स॒वि॒तार॑म्। ऊ॒तयें।।१।। |

ಅನುವಾದ :

ಕ್ಷೇಮಕ್ಕೋಸ್ಕರ ಪ್ರಪ್ರಥಮವಾಗಿ ಅಗ್ನಿಯನ್ನು ಆಹ್ವಾನಿಸುತ್ತೇನೆ. ಮಿತ್ರಾವರುಣರನ್ನು ಇಲ್ಲಿಗೆ ಸಹಾಯಕ್ಕಾಗಿ ಆಹ್ವಾನಿಸುತ್ತೇನೆ. ಜಗತ್ತನ್ನೇ ವಿಶ್ರಾಂತಿಪಡಿಸುವ ರಾತ್ರಿಯನ್ನು ಆಹ್ವಾನಿಸುತ್ತೇನೆ. ಸವಿತೃದೇವನನ್ನು ರಕ್ಷಣೆಯ ಸಲುವಾಗಿ ಆಹ್ವಾನಿಸುತ್ತೇನೆ.

ಟಿಪ್ಪಣಿ :

ह्वयामि – ह्वे ಕರೆಯುವುದು, लट् (ವರ್ತಮಾನ ಕಾಲ), ಉತ್ತಮಪುರುಷ, ಏಕವಚನ. ಪಾದದ ಆದಿಯಲ್ಲಿ ಕ್ರಿಯಾಪದಕ್ಕೆ ನಿಘಾತ ಪ್ರತಿಷೇಧ (ಸೋದಾತ್ತತ್ವ).

स्वस्तये – (अस्माकं) अविनाशाय (ಸಾಯಣ); ನಿರುಕ್ತದ ಪ್ರಕಾರ "स्वस्ति इति अविनाशनाम" (ನಿ. 3.21); ನಾಶರಹಿತತ್ವಕ್ಕಾಗಿ, ಅಂದರೆ ಕ್ಷೇಮಕ್ಕಾಗಿ, ಕ್ಷೇಮಕ್ಕಾ..

(ಮ್ಯಾಕ್‌ಡೋನೆಲ್). ಅದು ಚತುರ್ಥೀವಿಭಕ್ತಿಯಲ್ಲಿದೆ. ಇದನ್ನು ಮಾಕ್‌ಡೋನೆಲ್ "Final Dative" ಎನ್ನುತ್ತಾರೆ. ಅದು ಕಾರ್ಯವು ಪತಕ್ಕಾಗಿ ಎಂಬುದನ್ನು ತಿಳಿಸುವ ಚತುರ್ಥೀ. ಅದು "तादर्थ्ये चतुर्थी" ಎಂದು ತಿಳಿಯಬಹುದು. अवसे ಮತ್ತು ऊतये ಎಂಬವೂ ಅದೇ ಅರ್ಥದ ಚತುರ್ಥಿಗಳು.

मित्रावरुणौ - मित्रश्च वरुणश्च, ಅದು ದೇವತಾದ್ವಂದ್ವಸಮಾಸ. ಈ ಸಮಾಸದ ಪೂರ್ವಪದಕ್ಕೆ आनङ् ಬರುತ್ತದೆ - देवताद्वन्द्वे च | (ಪಾ. 6.3.26). ದೇವತಾದ್ವಂದ್ವದ ಎರಡೂ ಪದಗಳು ತಮ್ಮ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತವೆ - देवताद्वन्द्वे च | (ಪಾ. 6.2.141).ಪದಪಾಠದಲ್ಲಿ ದ್ವಂದ್ವಸಮಾಸಗಳನ್ನು ವಿಭಜಿಸುವುದಿಲ್ಲ ಎಂಬುದನ್ನು ಗಮನಿಸಿ.

इह - अस्मिन् कर्मणि, ಈ ಕರ್ಮದಲ್ಲಿ ಅಂದರೆ ಯಜ್ಞದಲ್ಲಿ (ಸಾಯಣ).

रात्रीम्- ದೇವಿ ರಾತ್ರಿಯನ್ನು.

जगतः - ಮ್ಯಾಕ್‌ಡೋನೆಲ್ ಇದನ್ನು Objective Genitive (ಕರ್ಮಣಿ ಷಷ್ಠೀ) ಎನ್ನುತ್ತಾರೆ.

निवेशनीम् - निविशन्ति अस्याम् इति निवेशनी, ಅಧಿಕರಣದ ಅರ್ಥದಲ್ಲಿ ल्युट् - करणाधिकरणयोश्च | (ಪಾ. 3.3.117); यु = अन (युवोरनाकौ); नीप् - टिड्ढाणञ् - - - | (ಪಾ. 6.1.15); ಯಾವುದರಲ್ಲಿ ವಿಶ್ರಾಂತಿ ದೊರೆಯುವುದೋ ಅದು. रात्रीम् ಎಂಬುದಕ್ಕೆ ವಿಶೇಷಣ. ಪದಪಾಠದಲ್ಲಿ ಉಪಸರ್ಗವನ್ನು ಬೇರ್ಪಡಿಸಲಾಗಿದೆ.

## 1.3.2.(ii) आ कृष्णेन रजसा, इत्यादि

| ಸಂಹಿತಾಪಾಠ | ಪದಪಾಠ |
|---|---|
| आ कृष्णेन रजसा वर्तमानो | आ। कृष्णेन। रजसा। वर्तमानः। |
| निवेशयन्नमृतं मर्त्यं च। | निऽवेशयन्। अमृतम्। मर्त्यम्। च। |
| हिरण्ययेन सविता रथेना | हिरण्ययेन। सविता। रथेन। |
| देवो याति भुवनानि पश्यन्।।२।। | आ। देवः। याति। भुवनानि। पश्यन्।।२।। |

ಅನುವಾದ :

ಅಂಧಕಾರಮಯ ಲೋಕದಲ್ಲಿ ಪುನಃ ಪುನಃ ಸಂಚರಿಸುತ್ತಾ ಅಮರ್ತ್ಯರನ್ನೂ ಮರ್ತ್ಯರನ್ನೂ ವಿಶ್ರಾಂತಿಯಲ್ಲಿರಿಸುತ್ತಾ, ಸವಿತೃದೇವನು ಜೀವಜಂತುಗಳನ್ನು ನೋಡುತ್ತಾ ಇಲ್ಲಿಗೆ ಬರುತ್ತಾನೆ.

**ಟಿಪ್ಪಣಿ :** आ --- वर्तमानः - ಉಪಸರ್ಗವನ್ನು ಪ್ರಧಾನ ವಾಕ್ಯದ ಕ್ರಿಯಾಪದದಿಂದ ಹೇಗೋ ಹಾಗೆ ಕೃದಂತದಿಂದಲೂ ಬೇರ್ಪಡಿಸಬಹುದು. ಅದಕ್ಕೂ ಕ್ರಿಯಾಪದ ಅಥವಾ ಕೃದಂತಕ್ಕೂ ಮಧ್ಯೆ ಬೇರೆ ಪದ ಅಥವಾ ಪದಗಳು ಬರಬಹುದು - व्यवहिताश्च | (ಪಾ.1.4.82). वर्तमानः - वृत् ವರ್ತಿಸುವುದು, शानच् ಪ್ರತ್ಯಯಾಂತ ವರ್ತಮಾನ ಕೃದಂತ.

कृष्णेन रजसा - कृष्णवर्णेन लोकेन, ಕಪ್ಪಾದ ಲೋಕದ ಮೂಲಕ; ಸಪ್ತಮ್ಯರ್ಥದಲ್ಲಿ ತೃತೀಯಾ. ಸೂರ್ಯನು ಹುಟ್ಟುವುದಕ್ಕೆ ಮೊದಲು ಕತ್ತಲುಮಯವಾಗಿರುವ ಅಂತರಿಕ್ಷ ಲೋಕದ ಅರ್ಥವನ್ನು ಈ ಶಬ್ದಗಳು ಕೊಡುತ್ತಿವೆ. "अन्तरिक्षलोको हि सूर्यागमनात् पुरा कृष्णवर्णो भवति |" (ಸಾಯಣ). रजस् ಎಂದರೆ लोक - लोकाः रजांस्युच्यन्ते (ನಿರುಕ್ತ. 4.19).

निवेशयन् - ಉಪಸರ್ಗವು ಪದಪಾಠದಲ್ಲಿ ಕ್ರಿಯಾಪದ ಅಥವಾ ಕೃದಂತದಿಂದ ಬೇರ್ಪಡಿಸಲ್ಪಡುತ್ತದೆ. नि + विश् + णिच् + शतृ | ಪ್ರೇರಣಾರ್ಥಕ ವರ್ತಮಾನ ಕೃದಂತ. स्वस्वस्थाने अवस्थापयन्, ತಮ್ಮ ತಮ್ಮ ಸ್ಥಾನದಲ್ಲಿ ನೆಲೆಗೊಳಿಸುತ್ತಾ (ಸಾಯಣ) ಎಂದರ್ಥ; "Laying to rest" (ಮ್ಯಾಕ್‌ಡೋನೆಲ್).ಯಾರನ್ನು ಎಂದರೆ अमृतम्, मर्त्यम् च |

अमृतम् - न विद्यते मृतं यस्य तत्; नञ् बहुव्रीहि; ಅದರಲ್ಲಿ नञ् ಅನಂತರ जर, मर, मित्र ಮತ್ತು मृत ಶಬ್ದಗಳು ಆದ್ಯುದಾತ್ತವಾಗಿರುತ್ತವೆ - नञो जरमरमित्रमृताः | (ಪಾ. 6.2.116).

हिरण्ययेन - हिरण्मयेन; ಅದು ನಿಪಾತಿತರೂಪ - (ಪಾ. 6.4.175).

रथेना - रथेन + आ, ಮೂರನೆಯ ಪಾದದ ಕೊನೆಯಲ್ಲಿ रथेन ಶಬ್ದದಿಂದ ಬೇರ್ಪಡಿಸಿ ನಾಲ್ಕನೆಯ ಪಾದದ ಆರಂಭದ ಪದವಾಗಿ ತೆಗೆದುಕೊಳ್ಳಬೇಕು.

आ देवो याति - आ ಉಪಸರ್ಗವು ಪ್ರಧಾನ ವಾಕ್ಯದ ಕ್ರಿಯಾಪದದಿಂದ

ಬೇರ್ಪಡುವುದಲ್ಲದೆ, ಉಪಸರ್ಗ ಮತ್ತು ಕ್ರಿಯಾಪದಗಳ ಮಧ್ಯೆ ಬೇರೆ ಪದ ಅಥವಾ ಪದಗಳು ಬರಬಹುದು - व्यवहिताश्च | (ಪಾ. 1.4.82). ಪ್ರಧಾನವಾಕ್ಯದ ಕ್ರಿಯಾಪದವು ಪಾದದ ಆದಿಯಲ್ಲಿ ಇಲ್ಲದಿದ್ದರೆ ನಿಘಾತಸ್ವರವನ್ನು ಹೊಂದುತ್ತದೆ - तिङतिङः | (ಪಾ. 8.1.28). ಕ್ರಿಯಾಪದದಿಂದ ಬೇರ್ಪಟ್ಟ ಉಪಸರ್ಗವು ತನ್ನ ಸ್ವರವನ್ನು ಅಂದರೆ ಆದ್ಯುದಾತ್ತವನ್ನು (अभि ಮಾತ್ರ ಅಂತೋದಾತ್ತ) ಉಳಿಸಿಕೊಳ್ಳುತ್ತದೆ - उपसर्गाश्चाभिवर्जम् | (ಫಿಟ್ ಸೂತ್ರ, 81). (याति - या ಹೋಗುವುದು, लट्, ಪ್ರ.ಪು., ಏ.ವ.)

पश्यन् - दृश् ನೋಡುವುದು, शतृ ಪ್ರತ್ಯಯಾಂತ ವರ್ತಮಾನ ಕೃದಂತ.

## 1.3.2.(iii) याति देवः प्रवता, इत्यादि

| ಸಂಹಿತಾಪಾಠ | ಪದಪಾಠ |
|---|---|
| याति देवः प्रवता यात्युद्वता | याति। देवः। प्रऽवता। याति। उत्ऽवता। |
| याति शुभ्राभ्यां यजतो हरिभ्याम्। | याति। शुभ्राभ्याम्। यजतः। हरिऽभ्याम्। |
| आ देवो याति सविता परावतो- | आ। देवः। याति। सविता। पराऽवतः। |
| ऽप विश्वा दुरिता बाधमानः।।३।। | अप। विश्वा। दुःऽइता। बाधमानः।।३।। |

ಅನುವಾದ :

ಆ ದೇವನು ಅಧೋಮಾರ್ಗದಲ್ಲಿ ಹೋಗುತ್ತಾನೆ. (ಅವನು) ಊರ್ಧ್ವಮಾರ್ಗದಲ್ಲಿ ಹೋಗುತ್ತಾನೆ. ಪೂಜಾರ್ಹನಾದ (ಅವನು) ಎರಡು ತೇಜೋಮಯವಾದ ಅಶ್ವಗಳೊಡನೆ ಹೋಗುತ್ತಾನೆ. ಸವಿತೃದೇವನು ಎಲ್ಲ ಕ್ಲೇಶಗಳನ್ನೂ (ದುರಿತಾ) ನಿವಾರಿಸುತ್ತಾ ದೂರದಿಂದ ಬರುತ್ತಾನೆ.

**ಟಿಪ್ಪಣಿ :** याति - या, लट्, ಪ್ರ.ಪು.,ಏ.ವ. ಪಾದದ ಆದಿಯಲ್ಲಿ ಪ್ರದಾನವಾಕ್ಯದ ಕ್ರಿಯಾಪದವು ಸೋದಾತ್ತ (ಉದಾತ್ತವುಳ್ಳದ್ದು), ಎರಡನೇ याति ಕೂಡ ಸೋದಾತ್ತ, ಎರಡು ವಾಕ್ಯಗಳ ಮಧ್ಯೆ (याति देवः प्रवता, याति उद्वता) ಸಮುಚ್ಚಯಾರ್ಥ च ಲೋಪವಾಗಿರುವುದರಿಂದ चादिलोपे विभाषा | (ಪಾ. 8.1.63).

प्रवता, उद्वता - प्रवणवता (ಅಧೋಮುಖ) मार्गेण, ऊर्ध्वदेशयुक्तेन (ಮೇಲ್ಮುಖವಾದ) मार्गेण (ಸಾಯಣ). ಇದು ಸೂರ್ಯನ ಗತಿಯನ್ನು ಹೇಳುತ್ತದೆ.

ಉದಯಕಾಲದಿಂದ ಮಧ್ಯಾಹ್ನದವರೆಗೆ ಸೂರ್ಯನದು ಊರ್ಧ್ವಮುಖವಾದ ಮಾರ್ಗ, ಮಧ್ಯಾಹ್ನದಿಂದ ಅಸ್ತವಾಗುವವರೆಗೆ ಅಧೋಮುಖವಾದ ಮಾರ್ಗ. प्रवता - प्र + वन् + क्विप्, न ಬದಲಿ त, ತೃತೀಯಾಂತ; वत् ಎಂಬುದು ಕೃದಂತ, प्र ಎಂಬ ಉಪಸರ್ಗದ (ಗತಿ) ಅನಂತರ ಕೃದಂತವು ತನ್ನ ಪ್ರಕೃತಿ ಸ್ವರವನ್ನು ಉಳಿಸಿಕೊಳ್ಳುತ್ತದೆ - गतिकारकोपपदात् कृत् । (ಪಾ. 6.2.139). उद्वता - उत् + वन् + क्विप्, प्रवताದಂತೆಯೇ ರೂಪ ಮತ್ತು ಸ್ವರ.

यजतः - यष्टव्यः ಪೂಜ್ಯ (ಸಾಯಣ), "Adorable one" (ಮ್ಯಾಕ್‌ಡೋನೆಲ್), यज् + अतच् (ಉಣಾದಿ 3.390); ಅಂತೋದಾತ್ತ, ಚಿತ್‌ಸ್ವರ - चितः । (ಪಾ.6.1.16).

आ देवो याति - ಹಿಂದಿನ ಮಂತ್ರದ ಟಿಪ್ಪಣಿಯನ್ನು ನೋಡಿ.

परावतोऽप - परावतः अप; परवतः ಎಂಬುದರ ಅಂತ್ಯವರ್ಣವು ಮೂಲತಃ ಅನುದಾತ್ತವಾಗಿದ್ದು ಉದಾತ್ತದ ಅನಂತರ ಅದಕ್ಕೆ ಸ್ವರಿತ (ಪದಪಾಠವನ್ನು ನೋಡಿ). ಆದರೆ ಪೂರ್ವರೂಪ ಸಂಧಿಯ ದೆಸೆಯಿಂದ ಲುಪ್ತವಾದ अ ತನ್ನ ಉದಾತ್ತವನ್ನು ಹಿಂದಿನ ವರ್ಣದ ಮೇಲೆ ಚೆಲ್ಲುತ್ತದೆ. ಹಾಗಾಗಿ तो ಎಂಬುದು ಸ್ವರಿತವನ್ನು ಕಳೆದುಕೊಂಡು ಉದಾತ್ತವಾಗುತ್ತದೆ. परावतः ಎಂಬುದು ದೂರ ಎಂಬುದರ ಪರ್ಯಾಯ ಪದ. (ನಿರುಕ್ತ. 3.26.5).

अप - बाधमानः - बाध् ದೂರಮಾಡು, शानच् ಪ್ರತ್ಯಯಾಂತ ವರ್ತಮಾನ ಕೃದಂತ. ಒಂದನೇ ಮಂತ್ರದಲ್ಲಿ आ ---- वर्तमानः ಎಂಬುದರ ಟಿಪ್ಪಣಿ ನೋಡಿ.

विश्वा दुरिता - विश्वानि दुरितानि - ವೇದದಲ್ಲಿ ನಪುಂಸಕಲಿಂಗ ಶಬ್ದಗಳ ಅನಂತರ ಬರುವ जस् ಮತ್ತು शस್‌ಗಳಿಗೆ शि ಬರುವುದು 'ಬಹುಲ' (ಅಂದರೆ ಬರಬಹುದು, ಬರದೇ ಇರಬಹುದು)- शेश्छन्दसि बहुलम् । (ಪಾ. 6.1.70)

शुभ्राभ्याम् --- हरिभ्याम् - भिस्, भ्याम्, भ्यस् ಮತ್ತು सुप् ಎಂಬ ಸುಪ್ ಪ್ರತ್ಯಯಗಳನ್ನು ಪ್ರಾತಿಪದಿಕವು ಯಾವುದೇ ಬದಲಾವಣೆಯನ್ನು ಹೊಂದದಿದ್ದರೆ ಪದಪಾಠದಲ್ಲಿ ಬೇರ್ಪಡಿಸಲಾಗುತ್ತದೆ. शुभ्राभ्याम् ಎಂಬದರಲ್ಲಿ ಪ್ರಾತಿಪಾದಿಕ ದೀರ್ಘವಾಗಿರುವುದರಿಂದ भ्याम् ಪ್ರತ್ಯಯವನ್ನು ಬೇರ್ಪಡಿಸಿಲ್ಲ. हरिभ्याम् ಎಂಬುದರಲ್ಲಿ ಪ್ರಾತಿಪದಿಕವು ಯಾವುದೇ ಬದಲಾವಣೆ ಹೊಂದದಿರುವುದರಿಂದ भ्याम् ಅನ್ನು ಬೇರ್ಪಡಿಸಲಾಗಿದೆ - (हरिऽभ्याम् ।

## 1.3.2.(iv) अभीवृतं कृशनैः, इत्यादि

| ಸಂಹಿತಾಪಾಠ | ಪದಪಾಠ |
|---|---|
| अभीवृतं कृशनैर्विश्वरूपं | अभिऽवृतम्। कृशनैः। विश्वऽरूपम्। |
| हिरण्यशम्यं यजतो बृहन्तम्। | हिरण्यऽशम्यम्। यजतः। बृहन्तम्। |
| आस्थाद्रथं सविता चित्रभानुः | आ। अस्थात्। रथम्। सविता। चित्रऽभानुः। |
| कृष्णा रजांसि तविषीं दधानः।।४।। | कृष्णा। रजांसि। तविषीम्। दधानः।।४।। |

**ಅನುವಾದ :**

ಪುಜಾರ್ಹನಾಗಿರುವ ಮತ್ತು ವಿವಿಧವಾಗಿ ಪ್ರಕಾಶಿಸುವ ಸವಿತೃವು ಕೃಷ್ಣವರ್ಣದ ಲೋಕಗಳನ್ನು ಕುರಿತು ಬಲವನ್ನು (ತವಿಷೀಂ) ಧರಿಸುತ್ತಾ ಮುತ್ತುಗಳಿಂದ ಅಲಂಕೃತವಾದ, ಬಹುರೂಪವುಳ್ಳ, ಚಿನ್ನದ ಕೀಲುಗಳಿಂದ ಕೂಡಿದ, ಉನ್ನತವಾದ ರಥವನ್ನು ಏರಿದನು.

**ಟಿಪ್ಪಣಿ :** अभीवृतम् - अभि + वृ (ಆಚ್ಛಾದಿಸು), ಸುತ್ತುವರೆ. क्तान्त, ಭೂತಕರ್ಮಣಿ ಕೃದಂತ. अभि ಎಂಬುದು ಛಂದಸ್ಸಿಗಾಗಿ ದೀರ್ಘವಾಗಿದೆ. अभितः वर्तमानम्, ಸುತ್ತುವರೆದಿರುವ, ಎಂಬುದು ಸಾಯಣರ ಪ್ರಕಾರ ಅರ್ಥ. ಮ್ಯಾಕ್‌ಡೋನೆಲ್ 'Adorned' (ಅಲಂಕರಿಸಲ್ಪಟ್ಟ) ಎಂದು ಅರ್ಥಮಾಡುತ್ತಾರೆ ಮತ್ತು ಅದನ್ನು कृशनैः ಎಂಬುದರ ಜೊತೆಗೆ ತೆಗೆದುಕೊಳ್ಳುತ್ತಾರೆ (Adorned with pearls).

कृशनैः विश्वरूपम् - सुवर्णेन नानारूपम्, ಚಿನ್ನದಿಂದ ಬಹುರೂಪವಾದುದು (ಸಾಯಣ). कृशन ಎಂಬುದು हिरण्यದ ಪರ್ಯಾಯ ಪದ (ನಿರುಕ್ತ. 1.2.7). विश्वरूपम् - विश्वानि रूपाणि यस्य सः, तम्, ಬಹುವ್ರೀಹಿಸಮಾಸ. ಇದು ಸಂಜ್ಞೆಯಾದಾಗ, ಇದರ ಪೂರ್ವಪದವಾದ विश्व ಶಬ್ದವು (ಮೂಲತಃ ಆದ್ಯುದಾತ್ತ) ಅಂತೋದಾತ್ತವಾಗುತ್ತದೆ - बहुव्रीहौ विश्वं संज्ञायाम् | (ಪಾ. 6.2.106).

हिरण्यशम्यम् - हिरण्यमयाः शम्याः यस्य सः, तम्, ಬಹುವ್ರೀಹಿಸಮಾಸ. ಇದರಲ್ಲಿ ಪೂರ್ವಪದವು ತನ್ನ ಪ್ರಕೃತಿ ಸ್ವರವನ್ನು ಉಳಿಸಿಕೊಳ್ಳುತ್ತದೆ - बहुव्रीहौ प्रकृत्या पूर्वपदम् | (ಪಾ. 6.2.1).

यजतः - ಮೂರನೇ ಮಂತ್ರದ ಟಿಪ್ಪಣಿ ನೋಡಿ.

बृहन्तम् - बृह ವರ್ಧಿಸುವುದು; ಅದರ शतृ ಪ್ರತ್ಯಯಾಂತ ವರ್ತಮಾನ ಕೃದಂತ,

ದ್ವಿ.ವಿ., ಏ.ವ., ಇದು अभीवृतं (कृशनैः) विश्वरूपम्, हिरण्यशम्यम् ಎಂಬ ವಿಶೇಷಣಗಳೊಂದಿಗೆ ಮೂರನೆಯ ಪಾದದಲ್ಲಿ ಬರುವ रथम् ಎಂಬುದರ ವಿಶೇಷಣ.

अस्थात् - स्था ಗತಿನಿವೃತ್ತಿ (ನಿಲ್ಲುವುದು), लुङ्, ಪ್ರ.ಪು.,ಏ.ವ., ಪಾದದ ಆದಿಯಲ್ಲಿ ಇಲ್ಲದ ಕಾರಣ ಕ್ರಿಯಾಪದಕ್ಕೆ ನಿಘಾತಸ್ವರ. आ ಎಂಬ ಉಪಸರ್ಗವು ಅದರಿಂದ ಬೇರ್ಪಟ್ಟಿದೆ. आ + अस्थात् = आस्थात् | व्यावहिताश्च | (ಪಾ. 1.4.82). ಅದು ತನ್ನ ಉದಾತ್ತವನ್ನು ಉಳಿಸಿಕೊಂಡಿದೆ. उपसर्गाश्चाभिवर्जम् | (ಫಿಟ್‌ಸೂತ್ರ, 81).

चित्रभानुः - चित्रा भानवः (किरणाः) यस्य सः, ಬಹುವ್ರೀಹಿಸಮಾಸ. ಇದರಲ್ಲಿ ಪೂರ್ವಪದವು ಪ್ರಕೃತಿಸ್ವರವನ್ನು ಉಳಿಸಿಕೊಂಡಿದೆ. ಮೇಲೆ हिरण्यशम्यम् ಎಂಬುದರ ಮೇಲಿನ ಟಿಪ್ಪಣಿ ನೋಡಿ.

कृष्णा - कृष्णानि, ಮೂರನೇ ಮಂತ್ರದಲ್ಲಿ विश्वा दुरिता ಮೇಲಿನ ಟಿಪ್ಪಣಿ ನೋಡಿ. ಹಾಗೆಯೆ रजांसि - ಎರಡನೇ ಮಂತ್ರದಲ್ಲಿ रजसा ಎಂಬುದರ ಮೇಲಿನ ಟಿಪ್ಪಣಿ ಪರಿಶೀಲಿಸಿ.

तविषीम् - तविषी ಎಂದರೆ ಬಲ.

दधानः - धा ಧಾರಣ-ಪೋಷಣ, शानच् ಪ್ರತ್ಯಯಾಂತ ವರ್ತಮಾನ ಕೃದಂತ. ದ್ವಿತ್ವ ಹೊಂದಿದ ಧಾತುವಿನ ಮೊದಲನೆ ವರ್ಣದ ಮೆಲೆ ಉದಾತ್ತ - अभ्यस्तानामादिः | (ಪಾ. 5.1.189).

---

## 1.3.2.(v) वि जनाञ्छ्यावाः, इत्यादि

---

| ಸಂಹಿತಾಪಾಠ | ಪದಪಾಠ |
| --- | --- |
| वि जना॑ञ्छ्या॒वाः शि॑ति॒पादो॑ अख्य॒न्। | वि। जना॑न्। श्या॒वाः। शि॒ति॒ऽपादः॑। अ॒ख्य॒न्। |
| रथं॒ हिर॑ण्यप्रउगं॒ वह॑न्तः। | रथ॑म्। हिर॑ण्यऽप्रउगम्। वह॑न्तः। |
| शश्व॒द्विशः॑ सवि॒तुर्दैव्य॑स्यो॒- | शश्व॑त्। विशः॑। स॒वि॒तुः। दैव्य॑स्य। |
| पस्थे॒ विश्वा॒ भुव॑नानि तस्थुः।।५।। | उ॒पऽस्थे॑। विश्वा॑। भुव॑नानि। त॒स्थुः।।५।। |

ಅನುವಾದ :

(ಅವನ) ನೀಲವರ್ಣದ ಕುದುರೆಗಳು (ಶ್ಯಾವಾಃ) ಚಿನ್ನದ ಮೋಕಿನಿಂದ ಕೂಡಿದ ರಥವನ್ನು ಎಳೆಯುತ್ತಾ ಪ್ರಜೆಗಳನ್ನೆಲ್ಲಾ ನೋಡಿವೆ. ನೆಲಸಿರುವವರೆಲ್ಲರೂ (ವಿಶಃ), ಎಲ್ಲ ಜೀವಜಂತುಗಳೂ ಸವಿತೃದೇವನ ಸನ್ನಿಧಿಯಲ್ಲಿ ನಿಂತಿವೆ.

ಟಿಪ್ಪಣಿ : वि ----- अख्यन् - ख्या ನೋಡುವುದು. लुङ् ಪ್ರ.ಪು.,ಬ.ವ., ಎರಡನೆ ಮಂತ್ರದಲ್ಲಿ आ(देवो)याति ಎಂಬುದರ ಮೇಲಿನ ಟಿಪ್ಪಣಿ ನೋಡಿರಿ.

श्यावाः - ಸಾಯಣರ ಪ್ರಕಾರ ಸವಿತೃದೇವತೆಯ ಕುದುರೆಗಳಿಗೆ श्यावाः ಎಂದು ಹೆಸರು. श्यावाः सवितुः (ನಿರುಕ್ತ, 1.15.8). 'Dusky steeds' (ಮ್ಯಾಕ್‌ಡೋನೆಲ್).

शितिपादः - शितयः पादाः येषां ते शितिपादाः ಎಂದು ಬಹುವ್ರೀಹಿಸಮಾಸ ರೂಪದಲ್ಲಿ ವಿಗ್ರಹಿಸಿ ಸಾಯಣರು ಇಲ್ಲಿ ಬಹುವಚನ ಪ್ರತ್ಯಯ जस्‌ಗೆ ಬದಲಾಗಿ ಏಕವಚನ ಪ್ರತ್ಯಯ सु ಬಂದಿದೆ - सुपां सुलुक्पूर्वसवर्णा --- | (ಪಾ. 7.1.39), ಎನ್ನುತ್ತಾರೆ. ಇನ್ನೊಂದು ರೀತಿಯಲ್ಲೂ ವಿವರಿಸುತ್ತಾರೆ - शितिः श्वेतवर्णः, स एव पादः येषां ते ಎಂದು. शिति ಎಂಬುದರ ಅನಂತರ ಬಹುವ್ರೀಹಿಸಮಾಸದಲ್ಲಿ ಉತ್ತರಪದವು ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ - सितेर्नित्याबह्वज्बहुव्रीहावभसत् | (ಪಾ. 6.2.138); पाद ಎಂಬುದು ವೃಷಾದಿಗಣಕ್ಕೆ ಸೇರಿದ್ದಾದ್ದರಿಂದ ಆದ್ಯುದಾತ್ತ - वृषादीनी च | (ಪಾ. 5.1.203).

हिरण्यप्रउगम् - हिरण्यमयं प्रउगं यस्य सः, तम्, ಬಹುವ್ರೀಹಿ. प्रउग ಎಂದರ ರಥದ ಮೋಕು. ಸ್ವರಕ್ಕಾಗಿ ನಾಲ್ಕನೇ ಮಂತ್ರದಲ್ಲಿ हिरण्यशम्यम् ಮೇಲಿನ ಟಿಪ್ಪಣಿ ನೋಡಿ.

वहन्तः - वह् ಪ್ರಾಪಣ, ಹೊರುವುದು, शतृ ಪ್ರತ್ಯಯಾಂತ ವರ್ತಮಾನ ಕೃದಂತ, ಪ್ರ.ವಿ.,ಬ.ವ.

दैव्यस्य - तस्येदम् ಎಂಬ ಅರ್ಥದಲ್ಲಿ यञ् ಪ್ರತ್ಯಯ - देवाद्यञौ | (ಪಾ. 4.1.85); द्वैव्यम्, तस्य | ಈ ಶಬ್ದ ಆದ್ಯುದಾತ್ತ ञित् ಪ್ರತ್ಯಯವಿರುವುದರಿಂದ - ञ्नित्यादिर्नित्यम् | (ಪಾ. 6.1.157).

उपस्थे - समीपस्थाने (ಸಾಯಣ).

विश्वा भुवनानि – ಮೂರನೇ ಮಂತ್ರದಲ್ಲಿ विश्वा दुरिता ಮೇಲಿನ ಟಿಪ್ಪಣಿ ನೋಡಿ.

तस्थुः – स्था ನಿಲ್ಲುವುದು, लिट् ಪ್ರ.ಪು.,ಬ.ವ. ಅತಿಙಂತದ ಅನಂತರ ಮುಖ್ಯವಾಕ್ಯದ ಕ್ರಿಯಾಪದವು ನಿಘಾತವನ್ನು ಹೊಂದುತ್ತದೆ – तिङतिङः | (ಪಾ. 8.1.28).

---

## 1.3.2.(vi) तिस्रो द्यावः, इत्यादि

| ಸಂಹಿತಾಪಾಠ | ಪದಪಾಠ |
|---|---|
| तिस्रो द्यावः सवितुर्द्वा उपस्थाँ | तिस्रः। द्यावः। सवितुः। द्वौ। उपऽस्था। |
| एका यमस्य भुवने विराषाट्। | एका। यमस्य। भुवने। विराषाट्। |
| आणिं न रथ्यममृताधि तस्थुर् | आणिम्। न। रथ्यम्। अमृता।अधि।तस्थुः। |
| इह ब्रवीतु य उ तच्चिकेतत्।।६।। | इह। ब्रवीतु। यः। ऊँइति। तत्। चिकेतत्।।६।। |

ಅನುವಾದ :

ಮೂರು ಲೋಕಗಳು, ಎರಡು ಸವಿತೃವಿನ ನಿಕಟತೆಯಲ್ಲಿ, ಒಂದು ಮರ್ತ್ಯರನ್ನು ಮೀರಿ (ವಿರಾಷಾಟ್) ಯಮನ ಲೋಕದಲ್ಲಿ, ಎಲ್ಲ ಅಮರ್ತ್ಯರೂ, ರಥದ ಅಚ್ಚನ್ನು ಹೇಗೋ ಹಾಗೆ (ರಥ ಹೇಗೋ ಹಾಗೆ), ಆಶ್ರಯಿಸಿ ನಿಂತಿದ್ದಾರೆ. ಇದನ್ನು ಯಾವನು ಬಲ್ಲವನಾಗಿದ್ದಾನೆ, ಇಲ್ಲಿ ಹೇಳಲಿ!

ಟಿಪ್ಪಣಿ : तिस्र द्यावः – ದ್ಯುಲೋಕ, ಅಂತರಿಕ್ಷಲೋಕ ಮತ್ತು ಭೂಲೋಕ ಎಂಬ ಮೂರು ಲೋಕಗಳು. द्वा उपस्था – ಎರಡು ಲೋಕಗಳು, ಅಂದರೆ ದ್ಯುಲೋಕ ಮತ್ತು ಭೂಲೋಕಗಳು. ಸವಿತೃವಿನ ಸಮೀಪದಲ್ಲಿ (ಅಧೀನದಲ್ಲಿ). एका यमस्य भुवने विराषाट् – ಒಂದು ಲೋಕ (ಅಂತರಿಕ್ಷ) ಯಮನ ಸದನದಲ್ಲಿ; ಅದು विराषाट्, ಏಕೆಂದರೆ ಅಲ್ಲಿಗೆ ಹೋಗುವವರನ್ನು विरान् – गन्तॄन् (ಪಿತೃಗಳನ್ನು) ಸಹಿಸುತ್ತದೆ, ಆಶ್ರಯ ನೀಡುತ್ತದೆ (सहते).

तिस्रः – ಈ ಪದದ ಅನಂತರ जस्, ಪ್ರ.ವಿ.,ಬ.ವ., ಪ್ರತ್ಯಯವು ಉದಾತ್ತ – तिसृभ्यो जसः | (ಪಾ. 6.1.166).

द्वा उपस्था - द्वौ + उपस्था, आव् आदेश - एचोऽयवायावः । (ಪಾ. 6.1.78),व् ಲೋಪ - लोपः शाकल्यस्य ।(ಪಾ. 8.1.19).

उपस्थाँ - ಐದನೇಯ ಮಂತ್ರದಲ್ಲಿ उपस्थे ಮೇಲಿನ ಟಿಪ್ಪಣಿ ನೋಡಿ. आङ् ಇಲ್ಲಿ ಸಪ್ತಮೀವಿಭಕ್ತಿಗೆ ಬದಲಾಗಿ ಬಂದಿದೆ - आङ् याजयारामुपसंख्यानम् । (ಪಾ. 7.1.39, ವಾರ್ತಿಕ). ಅನುನಾಸಿಕವಾದ आङ् ಪ್ರಕೃತಿಭಾವವನ್ನು ಹೊಂದುತ್ತದೆ - आङोऽनुनासिकश्छन्दसि । (ಪಾ. 6.1.126).

विराषाट् - विरान् सहते इति विराषाट्, ण्वि ಎಂಬುದು सहಕ್ಕೆ ಬರುತ್ತದೆ - छन्दसि सहः । (ಪಾ. 3.2.63). स ಎಂಬುದು ष ಆಗುತ್ತದೆ - सहेः साढः षः । (ಪಾ. 8.3.56). ಪೂರ್ವಪದ ದೀರ್ಘ ಬಂದಿದೆ - अन्येषामपि दृश्यते । (ಪಾ. 6.3.137).

आणिं न - अणिम् इव ।

रथ्यम् - रथस्य इदम्, रथाद्यत् । (ಪಾ. 4.3.131)ನಿಂದ यत् । यतोऽनावः । (ಪಾ. 6.1.213) - ಆದ್ಯುದಾತ್ತ.

अमृता - अमृतानि, ಮೂರನೇ ಮಂತ್ರದಲ್ಲಿ विश्वा दुरिता ಮೇಲಿನ ಟಿಪ್ಪಣಿ ನೋಡಿ.

अधि तस्थुः - स्था ನಿಲ್ಲುವುದು, लिट्, ಪ್ರ.ಪು.,ಬ.ವ., ಎರಡನೇ ಮಂತ್ರದಲ್ಲಿ आ ---- याति ಮೇಲಿನ ಟಿಪ್ಪಣಿ ನೋಡಿ.

ब्रवीतु - ब्रू ಹೇಳುವುದು, लोट्, ಪ್ರ.ಪು.,ಏ.ವ. ಐದನೇ ಮಂತ್ರದಲ್ಲಿ तस्थुः ಮೇಲಿನ ಟಿಪ್ಪಣಿ ನೋಡಿ.

ऊँ इति - "उकारश्चेतिकरणेन युक्तो रक्तोऽपृक्तो द्राघितः शाकलेन" - ಪದಪಾಠದಲ್ಲಿ उ ಎಂಬುದು ದೀರ್ಘವೂ ಅನುನಾಸಿಕವೂ ಆಗಿ इतिकरणದಿಂದ ಕೂಡಿರುತ್ತದೆ.

इह ब्रवीतु य उ तच्चिकेतत् - ಒಂದು ಒಗಟಿನಂತಿದೆ.

चिकेतत् - कित् ಜ್ಞಾನಾರ್ಥಕ, लेट्, ಪ್ರ.ಪು.,ಏ.ವ., यः ಎಂಬ यत् ಶಬ್ದದ ರೂಪದೊಂದಿಗೆ ಸಂಬಂಧಿಸಿ ಗೌಣವಾಕ್ಯದ ಕ್ರಿಯಾಪದವಾದ್ದರಿಂದ ನಿಘಾತ ಬಂದಿಲ್ಲ - यद्वृत्तान्नित्यम् । (ಪಾ. 8.1.66).

## 1.3.2.(vii) वि सुपर्णो, इत्यादि

| ಸಂಹಿತಾಪಾಠ | ಪದಪಾಠ |
| --- | --- |
| वि सुपर्णो अन्तरिक्षाण्यख्यद् | वि। सुऽपर्णः। अन्तरिक्षाणि। अख्यत्। |
| गभीरवेपा असुरः सुनीथः। | गभीरऽवेपाः। असुरः। सुऽनीथः। |
| क्वे३दानीं सूर्यः कश्चिकेत | क्व। इदानीम्। सूर्यः। कः। चिकेत। |
| कतमां द्यां रश्मिरस्या ततान।।७।। | कतमाम्। द्याम्। रश्मिः। अस्य। आ। ततान।।७।। |

ಅನುವಾದ :

ಗಾಢ ಸ್ಫೂರ್ತಿಯುಳ್ಳ, ಚೆನ್ನಾಗಿ ಮಾರ್ಗದರ್ಶಕವಾಗಿರುವ ಆ ದಿವ್ಯಶಕ್ತಿಯಾದ (ಅಸುರ) ಆ ಪಕ್ಷಿ ಅಂತರಿಕ್ಷಲೋಕಗಳನ್ನೆಲ್ಲ ವೀಕ್ಷಿಸಿದೆ. ಆ ಸೂರ್ಯನೆಲ್ಲಿ ? ಅದನ್ನು ಯಾವನು ಬಲ್ಲವನಾಗಿದ್ದಾನೆ ? ಯಾವ ದ್ಯುಲೋಕವನ್ನು ಅವನ ಕಿರಣಗಳು ಹೊಕ್ಕಿವೆ ?

ಟಿಪ್ಪಣಿ : वि ---- अख्यत् - ख्या ನೋಡುವುದು, लुङ् ಪ್ರ.ಪು.,ಏ.ವ., ಎರಡನೇ ಮಂತ್ರದಲ್ಲಿ आ ---- याति ಮೇಲಿನ ಟಿಪ್ಪಣಿ ನೋಡಿ.

सुपर्णः - शोभनपतनः सूर्यस्य रश्मिः, ಮನೋಹರವಾದ ಪತನವುಳ್ಳ, (ಮನೋಹರವಾಗಿ ಬೀಳುವ) ಸೂರ್ಯನ ಕಿರಣ (ಸಾಯಣ). ಇದನ್ನು ಸುಂದರ ರೆಕ್ಕೆಗಳುಳ್ಳ, ಪಕ್ಷಿಯೆಂದು ಭಾವಿಸಲಾಗಿದೆ. शोभनानि पर्णानि यस्य सः, ಬಹುವ್ರೀಹಿ ಸಮಾಸ. ಈ ಸಮಾಸದಲ್ಲಿ सु ಅನಂತರ ಉತ್ತರಪದವು ಅಂತೋದಾತ್ತವಾಗುತ್ತದೆ - नञ्सुभ्याम् (ಪಾ. 6.2.172).

गभीरवेपाः - गभीरं वेपः (वेप् + असुन्) यस्य सः, ಬಹುವ್ರೀಹಿಸಮಾಸ. ಇದರ ಸ್ವರಕ್ಕೆ ನಾಲ್ಕನೇ ಮಂತ್ರದಲ್ಲಿ हिरण्यशम्यम् ಮೇಲಿನ ಟಿಪ್ಪಣಿ ನೋಡಿ.

असुरः - असून् राति (ददाति) इति असुरः, ದೈವೀಶಕ್ತಿ ಎಂದರ್ಥ. ಇನ್ನೊಂದು ಅರ್ಥ अस्यति शत्रून् (अस् - ಎಸೆಯುವುದು) इति; अस् + उरन् - असेरुरन्। (ಉಣಾದಿ. 1.42); नित् ಪ್ರತ್ಯಯದ ಕಾರಣ ಆದ್ಯುದಾತ್ತ - ञ्नित्यादिर्नित्यम्। (ಪಾ. 6.1.157).

सुनीथः - सु + नी + क्थन् (ಉಣಾದಿ. 2.159).

क्वे३दानीम् - क्वं + इदानीम्; क्व ಮೇಲೆ ಜಾತ್ಯಸ್ವರಿತವಿದೆ. क्वेदानीम् ಎಂದು (अ + इ = ए) ಗುಣಸಂಧಿಯಾದಾಗ दा ಎಂಬ ಉದಾತ್ತವರ್ಣವು ಜಾತ್ಯಸ್ವರಿತದ ಅನಂತರ ಅವ್ಯವಹಿತವಾಗಿ ಬರುತ್ತದೆ. ಜಾತ್ಯಾದಿ ಸ್ವರಿತದ ಅನಂತರ ಅವ್ಯವಹಿತವಾಗಿ ಉದಾತ್ತವು (ಅಥವಾ ಸ್ವರಿತ) ಬಂದರೆ ಉಚ್ಚಾರಣೆಯಲ್ಲಿ कम्प ಉಂಟಾಗುತ್ತದೆ. ಹಿಂದಿನ ವರ್ಣ ದೀರ್ಘವಾಗಿದ್ದರೆ ಕಂಪಕ್ಕೆ ಮೂರು ಮಾತ್ರಾ ಕಾಲ ಬೇಕಾಗುತ್ತದೆಯೆಂದು ಸೂಚಿಸಲು "३" ಎಂಬ ಸಂಕೇತವನ್ನೂ, ಹ್ರಸ್ವವಾಗಿದ್ದರೆ ಒಂದು ಮಾತ್ರಾ ಕಾಲ ಬೇಕಾಗುತ್ತದೆಯೆಂದು ಸೂಚಿಸಲು "१" ಎಂಬ ಸಂಕೇತವನ್ನೂ ಕೊಡುತ್ತಾರೆ. ಈ ಸಂಕೇತವನ್ನು ಅನುದಾತ್ತ (ಕೆಳಗೆ –) ಮತ್ತು ಸ್ವರಿತದ (ಮೇಲೆ ।) ಚಿಹ್ನೆಗಳಿಂದ ಗುರುತಿಸಲಾಗುತ್ತದೆ. जात्योऽभिनिहितश्चैव क्षैप्रः प्रश्लिष्ट एव च । एते स्वराः प्रकम्पन्ते यत्रोच्चस्वरितोदयाः । (ಋಕ್ಪ್ರಾತಿಶಾಖ್ಯ. 3.34).

चिकेत - कित् ಜ್ಞಾನಾರ್ಥಕ, लिट्, ಪ್ರ.ಪು.,ಏ.ವ., ಐದನೇ ಮಂತ್ರದಲ್ಲಿ तस्थुः ಮೇಲಿನ ಟಿಪ್ಪಣಿ ನೋಡಿ.

आ ततान - तन् ವಿಸ್ತರಿಸುವುದು, लिट्, ಪ್ರ.ಪು.,ಏ.ವ., ಎರಡನೇ ಮಂತ್ರದಲ್ಲಿ आ --- यानि ಮೇಲಿನ ಟಿಪ್ಪಣಿ ನೋಡಿ.

## 1.3.2.(viii) अष्टौ व्यख्यत्, इत्यादि

| ಸಂಹಿತಾಪಾಠ | ಪದಪಾಠ |
|---|---|
| अष्टौ व्यख्यत्ककुभः पृथिव्यास् | अष्टौ । वि । अख्यत् । ककुभः । पृथिव्याः । |
| त्री धन्व योजना सप्त सिन्धून् । | त्री । धन्वं । योजना । सप्त । सिन्धून् । |
| हिरण्याक्षः सविता देव आगाद् | हिरण्यऽअक्षः । सविता । देवः । आ । अगात् । |
| दधद्रत्ना दाशुषे वार्याणि ।।८।। | दधत् । रत्ना । दाशुषे । वार्याणि ।।८।। |

**ಅನುವಾದ :**

ಭೂಮಿಯ ಎಂಟು ಗಿರಿಶಿಖರಗಳನ್ನೂ, ಮೂರು ಲೋಕಗಳನ್ನೂ (ಧನ್ವ), ಕೆಲವು ಕ್ರೋಶಗಳನ್ನೂ (ಯೋಜನಾ), ಏಳು ನದಿಗಳನ್ನೂ ಅವನು ವೀಕ್ಷಿಸಿದ್ದಾನೆ. ಹಿರಣ್ಯಾಕ್ಷನಾದ

ಸವಿತೃದೇವನು ಪೂಜಕನಿಗೆ ಇಷ್ಟವಾದ ಐಶ್ವರ್ಯವನ್ನು ಕೊಡುತ್ತಾ ಆಗಮಿಸಿದ್ದಾನೆ.

ಟಿಪ್ಪಣಿ : अष्टौ ककुभः - प्राच्यादयश्चतस्रः दिशः आग्नेय्याद्याश्चतस्रः विदिशः इत्येवम् अष्टौ दिशः, ಪೂರ್ವ ಮುಂತಾದ ನಾಲ್ಕು ದಿಕ್ಕುಗಳು ಮತ್ತು ಆಗ್ನೇಯ ಮುಂತಾದ ನಾಲ್ಕು ವಿದಿಕ್ಕುಗಳು ಸೇರಿ ಒಟ್ಟು ಎಂಟು ದಿಶೆಗಳು. ಹೀಗೆ ಸಾಯಣರ ಪ್ರಕಾರ ककुभः ಎಂದರೆ ಭೂಮಿಯ ದಿಕ್ಕುಗಳು. ಮ್ಯಾಕ್‌ಡೋನೆಲ್ ಪ್ರಕಾರ ककुभः ಎಂದರೆ ಭೂಮಿಯ ಗಿರಿಶಿಖರಗಳು.

अख्यत् - ಏಳನೇಯ ಮಂತ್ರದ ಟಿಪ್ಪಣಿ ನೋಡಿ.

त्री - त्रीणि, ಮೂರನೆಯ ಮಂತ್ರದಲ್ಲಿ विश्वा दुरिता ಮೇಲಿನ ಟಿಪ್ಪಣಿ ನೋಡಿ.

धन्व - धन्वानि, ಪ್ರ.ವಿ.,ಬ.ವ., ಪ್ರತ್ಯಯ ಜಸ್‌ಗೆ ಬದಲಾಗಿ सु (ಏ.ವ.) ಪ್ರತ್ಯಯ ಬಂದಿದೆ - सुपां सु-लुक्-पूर्वसवर्णा --- | (ಪಾ. 7.1.39).ಸಾಯಣರ ಪ್ರಕಾರ ಮೂರು ಲೋಕಗಳು, ಮ್ಯಾಕ್‌ಡೋನೆಲ್ ಪ್ರಕಾರ "Waste lands".

योजना - ಸಾಯಣರು ಇದನ್ನು धन्व ಎಂಬುದರ ವಿಶೇಷಣವಾಗಿ ತೆಗೆದುಕೊಂಡು, ಪ್ರಾಣಿಗಳ ಮಧ್ಯೆ ಭೂಮಿಯ ವಿಭಾಗವನ್ನು ಮಾಡಿ ಅವುಗಳಿಗೆ ಬೇರೆ ಬೇರೆ ಅವಕಾಶವನ್ನು ಕಲ್ಪಿಸಿಕೊಡುವ ಅರ್ಥವನ್ನು ಗ್ರಹಿಸುತ್ತಾರೆ. प्राणिनः स्वस्वविभागेन योजयितॄन् | ಮ್ಯಾಕ್‌ಡೋನೆಲ್ ಅವರು "Leagues" ಎಂದು ಭಾಷಾಂತರಿಸಿದ್ದಾರೆ. League ಎಂದರೆ ಮೂರು ಮೈಲಿಗಳ ದೂರ. ಮೂರನೇ ಮಂತ್ರದಲ್ಲಿ विश्वा दुरिता ಮೇಲಿನ ಟಿಪ್ಪಣಿ ನೋಡಿ.

सप्त सिन्धून् - ಸಾಯಣರ ಪ್ರಕಾರ ಗಂಗಾ ಮುಂತಾದ ಏಳು ನದಿಗಳು ಅಥವಾ ಸಮುದ್ರಗಳು; ಮ್ಯಾಕ್‌ಡೋನೆಲ್ ಪ್ರಕಾರ ಏಳು ನದಿಗಳು.

हिरण्याक्षः - हिरण्यानि (हिरण्यमयानि) अक्षीणि यस्य सः, ಬಹುವ್ರೀಹಿಸಮಾಸ. ಈ ಸಮಾಸದಲ್ಲಿ सक्थि ಮತ್ತು अक्षिन् ಶಬ್ದಗಳ ಅನಂತರ षच् ಬರುತ್ತದೆ - बहुव्रीहौ सक्थ्यक्ष्णोः स्वाङ्गात् षच् | (ಪಾ. 5.4.113). ಅದಕ್ಕೆ चित्- स्वरದಿಂದ ಅಂತೋದಾತ್ತ - चितः | (ಪಾ. 6.1.16).

अगात् - इ ಗತ್ಯರ್ಥಕ, लुङ्, ಪ್ರ.ಪು.,ಏ.ವ., लुङ् ಲಕಾರದಲ್ಲಿ इण्‌ಗೆ गा ಆದೇಶವಾಗಿ ಬರುತ್ತದೆ - इणो गा लुङि | (ಪಾ. 2.4.45).ಐದನೇಯ ಮಂತ್ರದಲ್ಲಿ तस्थुः ಮೇಲಿನ ಟಿಪ್ಪಣಿ ನೋಡಿ.

दधत् - धा ಧಾರಣ-ಪೋಷಣ, शतृ ಪ್ರತ್ಯಯಾಂತ ವರ್ತಮಾನ ಕೃದಂತ. ದ್ವಿತ್ವ ಬಂದಾಗ ಮೊದಲಿನ ವರ್ಣಕ್ಕೆ ಉದಾತ್ತ - अभ्यस्तानामादिः | (ಪಾ. 5.1.189).

रत्ना - रत्नानि, ಮೂರನೆಯ ಮಂತ್ರದಲ್ಲಿ विश्वा दुरिता ಮೇಲಿನ ಟಿಪ್ಪಣಿ ನೋಡಿ.

दाशुषे - दाश्वास् ಶಬ್ದದ ಚ.ವಿ.,ಏ.ವ., ಈ ಶಬ್ದವು क्वसु ಪ್ರತ್ಯಯಾಂತವಾಗಿ ನಿಪಾತಿತವಾಗಿದೆ - दाश्वान्साह्वान् --- | (ಪಾ. 6.1.12). ಚತುರ್ಥಿ ಏ.ವ.ದಲ್ಲಿ वस್‌ಗೆ ಸಂಪ್ರದಾರಣ (व = उ) ಬರುತ್ತದೆ - वसोः सम्प्रसारणम् | (ಪಾ. 6.3.131).

वार्याणि - वृण् ವಿಭಾಗಿಸು, यत् ಪ್ರತ್ಯಯ.

## 1.3.2.(ix) हिरण्यपाणिः, इत्यादि

| ಸಂಹಿತಾಪಾಠ | ಪದಪಾಠ |
|---|---|
| हिरण्यपाणिः सविता विचर्षणिर् | हिरण्यऽपाणिः। सविता। विऽचर्षणिः। |
| उभे द्यावापृथिवी अन्तरीयते। | उभे इति। द्यावापृथिवी इति। अन्तः। ईयते। |
| अपामीवां बाधते वेति सूर्यम् | अप। अमीवाम्। बाधते। वेति। सूर्यम्। |
| अभि कृष्णेन रजसा द्यामृणोति।।९।। | अभि। कृष्णेन। रजसा। द्याम्। ऋणोति।।९।। |

ಅನುವಾದ :

ಹಿರಣ್ಯಹಸ್ತನೂ, ಕ್ರಿಯಾಶೀಲನೂ (ವಿಚರ್ಷಣಿಃ) ಆಗಿರುವ ಸವಿತೃವು ಭೂಮ್ಯಂತರಿಕ್ಷಗಳ ಮಧ್ಯೆ ಚಲಿಸುತ್ತಾನೆ. ಅವನು ರೋಗಗಳನ್ನು ನಾಶಪಡಿಸುತ್ತಾನೆ, ಸೂರ್ಯನನ್ನು ಅನುಶಾಸಿಸುತ್ತಾನೆ. ಕತ್ತಲು ಲೋಕಗಳ ಮೂಲಕ ಸ್ವರ್ಗಲೋಕದೊಳಕ್ಕೆ ಹೋಗುತ್ತಾನೆ.

ಟಿಪ್ಪಣಿ : हिरण्यपाणिः - ಸಾಯಣರು ಎರಡು ರೀತಿಯಲ್ಲಿ ವಿವರಿಸುತ್ತಾರೆ - (1) सुवर्णमयहस्तयुक्तः ಚಿನ್ನದ ಕೈಗಳುಳ್ಳವನು, (2) यजमानेभ्यो दातुं हिरण्यं हस्ते धृतवान्, ಯಜಮಾನರಿಗೆ ಕೊಡಲು ಚಿನ್ನವನ್ನು ಕೈಯಲ್ಲಿ ಹಿಡಿದುಕೊಂಡವನು. हिरण्यं

पाणी यस्य सः ಅಥವಾ हरिण्यं पाणौ यस्य सः हिरण्यपाणिः, ಬಹುವ್ರೀಹಿಸಮಾಸ, ನಾಲ್ಕನೇ ಮಂತ್ರದಲ್ಲಿ हिरण्यशम्यम् ಮೇಲಿನ ಟಿಪ್ಪಣಿ ನೋಡಿ.

विचर्षणिः - विविधदर्शनयुक्तः, ವಿವಿಧ ದೃಷ್ಟಿಗಳನ್ನು ಹೊಂದಿದವನು (ಸಾಯಣ); विचर्षणि विश्वदर्शनः (ನಿರುಕ್ತ, 3.2.16), ವಿಶ್ವದೃಷ್ಟಿಯುಳ್ಳವನು. ಮ್ಯಾಕ್‌ಡೋನೆಲ್ ಪ್ರಕಾರ "Active" (ಕ್ರಿಯಾಶೀಲ).

उभे इति - उभे ಎಂಬ ಪದದ ए ಪ್ರಗೃಹ್ಯ - ईदूदेद्द्विवचनं प्रगृह्यम् | (ಪಾ. 1.1.11). ಪ್ರಗೃಹ್ಯವನ್ನುಸೂಚಿಸಲು ಪದಪಾಠದಲ್ಲಿ इतिकरण ಬರುತ್ತದೆ.

द्यावापृथिवी - ದೇವತಾದ್ವಂದ್ವಸಮಾಸ. 'दिव्' ಎಂಬುದಕ್ಕೆ पृथिवी ಪರವಾದಾಗ द्याव ಎಂಬ ಆದೇಶ - दिवश्च पृथिव्याम् | (ಪಾ. 6.3.30). ಒಂದನೇ ಮಂತ್ರದಲ್ಲಿ मित्रावरुणौ ಮೇಲಿನ ಟಿಪ್ಪಣಿ ನೋಡಿ.

ईयते - इ ಗತ್ಯರ್ಥಕ, लट्, ಪ್ರ.ಪು.,ಏ.ವ., ಐದನೇ ಮಂತ್ರದಲ್ಲಿ तस्थुः ಮೇಲಿನ ಟಿಪ್ಪಣಿ ನೋಡಿ.

अप --- बाधते - बाध् ದೂರಮಾಡು, लट्, ಪ್ರ.ಪು.,ಏ.ವ. अप ಎಂಬ ಉಪಸರ್ಗ ಕ್ರಿಯಾಪದದಿಂದ ಬೇರ್ಪಟ್ಟು ತನ್ನ ಸ್ವರವನ್ನು ಉಳಿಸಿಕೊಂಡಿದೆ - व्यवहिताश्च | (ಪಾ. 1.4.82); उपसर्गाश्चाभिवर्जम् | (ಫಿಟ್ ಸೂತ್ರ, 81). ಕ್ರಿಯಾಪದವು (बाधते) च ಎಂಬ ಸಮುಚ್ಚಯಾರ್ಥಕದ ಪ್ರಯೋಗವಿಲ್ಲದೆ ಬಂದಿರುವ ಜೋಡಿ ವಾಕ್ಯಗಳಲ್ಲಿ ಒಂದಕ್ಕೆ ಸೇರಿದೆ. ಆದ್ದರಿಂದ ಅದಕ್ಕೆ ಐಚ್ಛಿಕವಾಗಿ ನಿಘಾತಪ್ರತಿಷೇಧ - चादिलोपे विभाषा | (ಪಾ. 8.1.63).

वेति - वि ಗತ್ಯರ್ಥಕ, लट्, ಪ್ರ.ಪು.,ಏ.ವ., ಇದು ತಿಙಂತದ ಅನಂತರ ಬಂದಿರುವುದರಿಂದ ನಿಘಾತಸ್ವರವಿಲ್ಲ.

अभि --- ऋणोति - ऋ ಹೋಗುವುದು, लट्, ಪ್ರ.ಪು.,ಏ.ವ., ಎರಡನೇ ಮಂತ್ರದಲ್ಲಿ आ --- याति ಮೇಲಿನ ಟಿಪ್ಪಣಿ ನೋಡಿ.

कृष्णेन रजसा - कर्षकेन निर्वर्तकेन रजसा तेजसा, ಕತ್ತಲನ್ನು ಧ್ವಂಸಗೊಳಿಸುವ ಪ್ರಕಾಶದಿಂದ (ಸಾಯಣ). ಎರಡನೇ ಮಂತ್ರದಲ್ಲಿ ಸಾಯಣರು कृष्णवर्णेन लोकेन ಎಂದು ಅರ್ಥಮಾಡಿ, लोका रजांस्युच्यन्ते (ನಿರುಕ್ತ. 4.9) ಎಂಬುದನ್ನೂ ಉಲ್ಲೇಖಿಸಿದ್ದಾರೆ. ಮ್ಯಾಕ್‌ಡೋನೆಲ್ ಪ್ರಕಾರ "Through dark space" ಎಂದು ಅರ್ಥ.

द्याम् ऋणोति - (द्याम्) व्याप्नोति (ಸಾಯಣ); "penetrates" (ಪ್ರವೇಶಿಸು, ಮ್ಯಾಕ್‌ಡೋನೆಲ್).

## 1.3.2.(x) हिरण्यहस्तो असुरः, इत्यादि

| ಸಂಹಿತಾಪಾಠ | ಪದಪಾಠ |
|---|---|
| हिरण्यहस्तो असुरः सुनीथः | हिरण्यऽहस्तः। असुरः। सुऽनीथः। |
| सुमृळीकः स्ववाँ यात्वर्वाङ्। | सुऽमृळीकः। स्वऽवान्। यातु। अर्वाङ्। |
| अपसेधन्रक्षसो यातुधानान् | अपऽसेधन्। रक्षसः। यातुऽधानान्। |
| अस्थाद्देवः प्रतिदोषं गृणानः।।१०।। | अस्थात्। देवः। प्रतिऽदोषम्। गृणानः।।१०।। |

**ಅನುವಾದ :**

ಹಿರಣ್ಯಹಸ್ತನೂ, ದಿವ್ಯಶಕ್ತಿಯುತನೂ, ಚೆನ್ನಾಗಿ ಮಾರ್ಗದರ್ಶನ ಮಾಡುವವನೂ, ಅತ್ಯನುಗ್ರಾಹಿಯೂ (ಸುಮೃಳೀಕಃ), ಸಹಾಯಕಾರಿಯೂ ಆಗಿರುವ ಸವಿತೃವು ಇಲ್ಲಿಗೆ ಬರಲಿ. ರಾಕ್ಷಸರನ್ನೂ, ಮಾಟಗಾರರನ್ನೂ (ಯಾತುಧಾನಾನ್) ಓಡಿಸುತ್ತಾ, ಸ್ತುತ್ಯನಾಗಿರುವ ಆ ದೇವನು ಸಂಜೆಯ ವೇಳೆಗೆ (ಪ್ರತಿದೋಷಂ) ನಿಂತಿದ್ದಾನೆ.

**ಟಿಪ್ಪಣಿ :** हिरण्यहस्तः - ಹಿಂದಿನ (9ನೇ) ಮಂತ್ರದಲ್ಲಿ हरिण्यपाणिः ಮೇಲಿನ ಟಿಪ್ಪಣಿ ನೋಡಿರಿ.

असुरः - ಏಳನೇ ಮಂತ್ರದ ಟಿಪ್ಪಣಿ ನೋಡಿ.

सुनीथः - ಏಳನೇ ಮಂತ್ರದ ಟಿಪ್ಪಣಿ ನೋಡಿ.

सुमृळीकः - सुमृडीकः, ಎರಡು ಅಚ್‌ಗಳ ಮಧ್ಯೆ ಬರುವ ಡಕಾರವನ್ನು ಬಹ್ವೃಚರು ಳಕಾರವಾಗಿ ಓದುತ್ತಾರೆ - अज्मध्यस्थ - डकारस्य ळकारं बह्वृचा जगुः | सुमृडीक ಎಂದರೆ सुष्ठु सुखयिता, ಚೆನ್ನಾಗಿ ಸುಖವುಂಟು ಮಾಡುವವನು (ಸಾಯಣ). सुष्ठु मृळीकं यस्य सः, ಬಹುವ್ರೀಹಿ, ಇದರಲ್ಲಿ सु ಅನಂತರ ಉತ್ತರಪದವು ಅಂತೋದಾತ್ತವಾಗುತ್ತದೆ - नञ्सुभ्याम् | (ಪಾ. 6.2.172).

स्ववान् - स्वं अस्य अस्तीति स्ववान् | स्ववान् यातु, वार् यातु - रुत्व

for न् - दीर्घादटि समानपादे | (ಪಾ. 8.3.9); स्ववाँ यातु - ओतोऽटिनित्यम् | (ಪಾ. 8.3.3).

यातु - या ಹೋಗುವುದು, लोट्, ಪ್ರ.ಪು.,ಏ.ವ., ಐದನೇ ಮಂತ್ರದಲ್ಲಿ तस्थुः ಮೇಲಿನ ಟಿಪ್ಪಣಿ ನೋಡಿ.

अपसेधन् - निराकुर्वन् (ಸಾಯಣ); "driving away" ದೂರ ಓಡಿಸುತ್ತಾ अप + सिध् + शतृ, ವರ್ತಮಾನ ಕೃದಂತ.

यातुधानान् -यातवो यातना एषु धीयन्ते इति यातुधानाः, तान्, ನೋವನ್ನು ತರುವವರು, ಅಂದರೆ ಮ್ಯಾಕ್‌ಡೋನೆಲ್ ಹೇಳಿದಂತೆ "sorcerers" (ದುಷ್ಟ ಮಂತ್ರವಾದಿಗಳು).

अस्थात् - स्था ನಿಲ್ಲುವುದು, लुङ्, ಪ್ರ.ಪು., ಏ.ವ., ಪಾದದ ಆದಿಯಲ್ಲಿ ನಿಘಾತಪ್ರತಿಷೇಧ.

प्रीतदोषम् - दोषम् दोषाम्, ಅವ್ಯಯೀಭಾವಸಮಾಸ, ಪ್ರತಿಸಂಜೆ ಎಂದರ್ಥ, "Towards eventide", ಸಂಜೆಯ ವೇಳೆಗೆ (ಮ್ಯಾಕ್‌ಡೋನೆಲ್). ಸಮಾಸಾಂತೋದಾತ್ತತ್ವ - समासस्य | (ಪಾ. 6.1.223).

गृणानः - गृ ಶಬ್ದಮಾಡುವುದು, शानच् ಪ್ರತ್ಯಯಾಂತ ವರ್ತಮಾನ ಕೃದಂತ, ಚಿತ್‌ಸ್ವರದಿಂದ ಅಂತೋದಾತ್ತ - चितः | (ಪಾ. 6.1.16).

---

## 1.3.2.(xi) ये ते पन्थाः सवितः, इत्यादि

---

| ಸಂಹಿತಾಪಾಠ | ಪದಪಾಠ |
|---|---|
| ये ते पन्थाः सवितः पूर्व्यासो | ये। ते। पन्थाः। सवितरिति। पूर्व्यासः। |
| अरेणवः सुकृता अन्तरिक्षे। | अरेणवः। सुऽकृताः। अन्तरिक्षे। |
| तेभिर्नो अद्य पथिभिः सुगेभी | तेभिः। नः। अद्य। पथिऽभिः। सुऽगेभिः। |
| रक्षा च नो अधि च ब्रूहि देव।।११।। | रक्ष। च। नः। अधि। च। ब्रूहि। देव।।११।। |

**ಅನುವಾದ :**

ಸವಿತೃವೇ, ಅಂತರಿಕ್ಷದಲ್ಲಿ ಸುನಿರ್ಮಿತವಾದ, ಧೂಳಿಲ್ಲದ ಯಾವ ನಿನ್ನ ಪುರಾತನ ಮಾರ್ಗಗಳಿವೆಯೋ, ಆ ಸುಗಮ ಮಾರ್ಗಗಳಿಂದ ಇಂದು ನಮ್ಮನ್ನು ರಕ್ಷಿಸು ಮತ್ತು ದೇವನೇ! ನಮ್ಮ ಪರವಾಗಿ (ದೇವತೆಗಳೆಲ್ಲರ ಮುಂದೆ) ನುಡಿ.

**ಟಿಪ್ಪಣಿ :** पन्थाः – पन्थानः, ಪ್ರ.ವಿ.,ಬ.ವ., ಪ್ರತ್ಯಯ जस्‌ಗೆ ಬದಲಾಗಿ ಏ.ವ. ಪ್ರತ್ಯಯ सु ಬಂದಿದೆ – सुपां सुलुक्पूर्वसवर्णा --- | (ಪಾ. 7.1.39); ದಾರಿಗಳು.

पूर्व्यासः – पूर्वैः कृताः पूर्व्याः, य ಇಲ್ಲಿ कृतः ಎಂಬ ಅರ್ಥದಲ್ಲಿ ಬಂದಿದೆ – पूर्वैः कृतमिनियौ च | (ಪಾ. 4.4.133). ಅ,ಆ ಕಾರಾಂತಗಳ ಅನಂತರ ಪ್ರ.ವಿ.,ಬ.ವ., ಪ್ರತ್ಯಯ जस्‌ಗೆ असुक् ಬರುತ್ತದೆ – आज्जसेरसुक् | (ಪಾ.7.1.50).

अरेणवः – न विद्यन्ते रेणवः येषां ते; अरेणु ಎಂಬ नञ् बहुव्रीहि ಸಮಾಸವು ಅಂತೋದಾತ್ತ; नञ् ಅನಂತರ ಉತ್ತರಪದವು ಅಂತೋದಾತ್ತವಾಗುತ್ತದೆ – नञ्सुभ्याम् | (ಪಾ. 6.2.172). ಬಹುವಚನದಲ್ಲಿ अरेणवः ಎಂಬ ರೂಪ ಬಂದಾಗ ವಿಭಕ್ತಿ ಪ್ರತ್ಯಯ ಅನುದಾತ್ತ – अनुदात्तौ सुप्पितौ | (ಪಾ. 3.1.8).

सुकृतः – सुष्ठु कृतः, कृत ಎಂಬುದು क्तान्त, ಗತಿಯು (ಉಪಸರ್ಗವು) ಕ್ತಾಂತವು ಪರವಾದಾಗ ತನ್ನ ಸ್ವರವನ್ನು ಉಳಿಸಿಕೊಳ್ಳುತ್ತದೆ – गतिरनन्तरः | (ಪಾ. 6.2.49).

तेभिः – तैः, ವೇದದಲ್ಲಿ भिस्‌ಗೆ ऐस् ಆದೇಶ (ಅಕಾರಾಂತ ಶಬ್ದಗಳಿಗೆ) ಐಚ್ಛಿಕ – अतो भिस् ऐस् | बहुलं छन्दसि | (ಪಾ. 7.1.9-10).

सुगेभिः – सुष्ठु गच्छन्ति एषु इति सुगाः, डा ಪ್ರತ್ಯಯ गम्‌ಗೆ ಬಂದಿದೆ – सुदुरोरधिकरे | (ಪಾ. 3.2.48, ವಾರ್ತಿಕ), ಇಲ್ಲಿ भिस्‌ಗೆ ऐस् ಬಂದಿಲ್ಲ, ಮೇಲಿನ ಟಿಪ್ಪಣಿ ನೋಡಿ.

रक्ष – रक्ष् ರಕ್ಷಿಸುವುದು, लोट्, ಮ.ಪು.,ಏ.ವ., ಪಾದದ ಆದಿಯಲ್ಲಿ ಅದಕ್ಕೆ ನಿಘಾತ ಪ್ರತಿಷೇಧ. ಸಂಹಿತಾಪಾಠದಲ್ಲಿ ದ್ವ್ಯಚ್ ಆದ ಅಕಾರಾಂತ ಕ್ರಿಯಾಪದ ದೀರ್ಘವಾಗುತ್ತದೆ – द्व्यचोऽतस्तिङः | (ಪಾ. 6.3.135).

ब्रूहि – ब्रू ಮಾತನಾಡುವುದು, लोट् ಮ.ಪು.,ಏ.ವ., ಐದನೇ ಮಂತ್ರದಲ್ಲಿ तस्थुः ಮೇಲಿನ ಟಿಪ್ಪಣಿ ನೋಡಿ.

सवितः, देव - ಆಮಂತ್ರಿತ ಪದವು ಪಾದದ ಆದಿಯಲ್ಲಿ ಇಲ್ಲದಿದ್ದರೆ ನಿಘಾತಸ್ವರವನ್ನು ಹೊಂದುತ್ತದೆ - आमन्त्रितस्य च | (ಪಾ. 8.1.19).

## 1.3.3 ಸವಿತೃದೇವತೆಯ ಲಕ್ಷಣಗಳು

ಸವಿತೃದೇವತೆಯು ಸೌರದೇವತೆ, ಸೂರ್ಯನ ಪ್ರಚೋದಕ ಶಕ್ತಿಯ ಅಂಶದ ಆಕೃತೀಕರಣ (personification). ಆಗಾಗ್ಗೆ ಸೂರ್ಯನೊಂದಿಗೆ ಅವನು ಏಕರೂಪನಾಗಿ ಗೋಚರಿಸುತ್ತಾನೆ. ಸೂರ್ಯನೊಂದಿಗೆ ಅವನ ಸಂಬಂಧ ಅಷ್ಟು ನಿಕಟ. ಅವನು ಋಗ್ವೇದದಲ್ಲಿ 11 ಸಂಪೂರ್ಣ ಸೂಕ್ತಗಳಲ್ಲಿ ಸ್ತುತಿಸಲ್ಪಟ್ಟಿದ್ದಾನೆ; ಬೇರೆ ಸೂಕ್ತಗಳಲ್ಲಿ ಕೆಲವು ಬಿಡಿ ಮಂತ್ರಗಳಲ್ಲಿ ಕೂಡ ಅವನ ಸ್ತುತಿಯಿದೆ. ಸೂರ್ಯನನ್ನು ರಶ್ಮಿಗಳಿಂದ ಬೆಳೆಸುತ್ತಾನೆ, ಸೂರ್ಯನನ್ನು ಪ್ರಚೋದಿಸುತ್ತಾನೆ, ಜನರಿಗೆ ಸೂರ್ಯನ ಸಂಕೇತಗಳನ್ನು ರವಾನಿಸುತ್ತಾನೆ, ಹೀಗೆ ವರ್ಣಿಸುವ ಸಂದರ್ಭಗಳಲ್ಲಿ ಅವನು ಸೂರ್ಯನಿಗಿಂತ ಭಿನ್ನವಾಗಿ ತೋರುತ್ತಾನೆ. (ನೋಡಿ, ಋ.7.63). ಅನೇಕ ಮಂತ್ರಗಳಲ್ಲಿ ಅವನನ್ನು ಸೂರ್ಯನಿಂದ ಬೇರೆಯೆಂದು ತಿಳಿಯುವುದು ಸಾಧ್ಯವಿಲ್ಲ.

ಸವಿತೃದೇವತೆಯ ಅತ್ಯಂತ ವಿಶಿಷ್ಟವಾದ ಲಕ್ಷಣವೆಂದರೆ ಹಿರಣ್ಯಮಯತ್ವ. ಅವನ ಅಂಗಾಂಗಗಳು, ಅವನಿಗೆ ಸೇರಿದ ಎಲ್ಲವೂ ಹಿರಣ್ಯಮಯ. ಅವನು ಹಿರಣ್ಯಾಕ್ಷ. ಹಿರಣ್ಯಪಾಣಿ, ಹಿರಣ್ಯಹಸ್ತ. ಅವನ ರಥವು ಹಿರಣ್ಯಮಯ - हिरण्ययेन रथेना देवो याति | (ಋ. 1.35.2). ಅವನ ರಥದ ಕೀಲುಗಳು ಚಿನ್ನದವು (ಹಿರಣ್ಯಶಮ್ಯ) ಅದರ ಮೋಕು ಹಿರಣ್ಯಮಯ (ಹಿರಣ್ಯಪ್ರಉಗ). ಅವನ ರಥವನ್ನು ಎರಡು ಅಥವಾ ಹೆಚ್ಚು ಶ್ಯಾವ ಎಂಬ ಕುದುರೆಗಳು ಎಳೆಯುತ್ತವೆ. ಆ ಅಶ್ವಗಳ ಪಾದಗಳು ಬಿಳಿಯ ಬಣ್ಣವುಳ್ಳವು. ಅವುಗಳು "ಶಿತಿಪಾದಃ" ಎಂದು ವರ್ಣಿಸಲ್ಪಟ್ಟಿವೆ. ಸವಿತೃವು ತನ್ನ ಹಿರಣ್ಯರಥದಲ್ಲಿ ಕುಳಿತು ಹೊರಟವನು. ಏರಿಕೆಯ ಮಾರ್ಗ ಮತ್ತು ಇಳಿಕೆಯ ಮಾರ್ಗಗಳೆರಡರಲ್ಲೂ ಎಲ್ಲಾ ಜೀವರಾಶಿಗಳನ್ನು ಅವಲೋಕಿಸುತ್ತಾ ಸಂಚರಿಸುತ್ತಾನೆ. ಅವನ ಮಾರ್ಗಗಳು ಪ್ರಾಚೀನ, ಧೂಳಿಲ್ಲದವು ಮತ್ತು ಚಲಿಸಲು ಸುಗಮವಾದವುಗಳು. ಅವನು ಆ ದಾರಿಗಳಲ್ಲಿ ತನ್ನ ಪೂಜಕರನ್ನು ಸಲಹುವವನು ಮತ್ತು ಇಹಲೋಕವನ್ನು ತ್ಯಜಿಸಿದ ಆತ್ಮಗಳನ್ನು ಪುಣ್ಯವಂತರ ಧಾಮಕ್ಕೆ ತಲುಪಿಸುವವನು. ಅವನು ಜನರನ್ನು ಎಲ್ಲಾ ದುಃಸ್ವಪ್ನಗಳಿಂದ ರಕ್ಷಿಸುವವನು ಮತ್ತು ನಿಷ್ಪಾಪರನ್ನಾಗಿ ಮಾಡುವವನು. ಅವನು ಎಲ್ಲಾ ರಾಕ್ಷಸರನ್ನು ದುಷ್ಟಮಾಂತ್ರಿಕರನ್ನು ದೂರ ಓಡಿಸುವವನು. ಅವನು ನಿಯಮಗಳಿಗೆ ಬದ್ಧನು. ನೀರು ಮತ್ತು ವಾಯು ಅವನ ನಿಯಂತ್ರಣದಲ್ಲಿರುವವು.

ಅವನು ತನ್ನ ಹಿರಣ್ಯಬಾಹುಗಳಿಂದ ಆಕಾಶದಲ್ಲಿ ಮೂಡುವವನು, ಎಲ್ಲರನ್ನೂ

ಸಚೇತನರನ್ನಾಗಿ ಮಾಡುವನು. ಹಾಗೆಯೇ ಅವನು ರಾತ್ರಿಯನ್ನೂ ತರುವನು, ಎಲ್ಲರಿಗೂ ವಿಶ್ರಾಂತಿಯನ್ನು ನೀಡುವನು. ಹೀಗೆ ಅವನು ರಾತ್ರಿ ಮತ್ತು ಹಗಲುಗಳ ದೇವತೆ. ಉಷಸ್ ಸೂರ್ಯೋದಯ ಮತ್ತು ಸೂರ್ಯಾಸ್ತಗಳ ವೈಭವವನ್ನು ಪ್ರತಿನಿಧಿಸಿದರೆ, ಸವಿತೃದೇವತೆಯು ಸೂರ್ಯೋದಯ ಮತ್ತು ಸೂರ್ಯಾಸ್ತಗಳ ಸಚೇತಕ ಶಕ್ತಿಯನ್ನು ಪ್ರತಿನಿಧಿಸುತ್ತಾನೆ. ಅವನ ಸ್ವಭಾವದಲ್ಲಿ ಮತ್ತು ಕ್ರಿಯೆಗಳಲ್ಲಿ ಅವನ ನೈತಿಕ ಲಕ್ಷಣಗಳು ವ್ಯಕ್ತವಾಗುತ್ತವೆ. ಅವನು ಪಾಪಗಳನ್ನು ನಿವಾರಿಸುತ್ತಾನೆ. ಪ್ರಾಯಃ ಈ ಅಂಶವನ್ನು ಅವನು ವರುಣನಿಂದ ಪಡೆದಿರಬೇಕು. ಅವನು ಭೂಮಿಯ ಮೇಲೆ ಮನುಷ್ಯರನ್ನು ರಕ್ಷಿಸುತ್ತಾನೆ, ಬೇರೆ ಲೋಕಗಳಲ್ಲಿ ಅವರ ಕ್ಷೇಮವನ್ನು ನೋಡಿಕೊಳ್ಳುತ್ತಾನೆ. ಸಾವಿನ ಅನಂತರ ಅವರಿಗೆ ಸಂತೋಷವನ್ನು ಕೊಡುತ್ತಾನೆ. ದೇವತೆಗಳ ಅಮರತ್ವ ಕೂಡ ಸವಿತೃವಿನ ಯೋಗದಾನ.

ಸವಿತೃವು ದೈವೀಶಕ್ತಿಯಾಗಿ ಸೂರ್ಯನಿಗೆ ದಾರಿ ತೋರುತ್ತಾನೆ, ಪ್ರಚೋದಕನಾಗಿದ್ದಾನೆ. ಅಲ್ಲದೆ ಅವನು ವಿಶ್ವದ ಭೌತಿಕ, ಬೌದ್ಧಿಕ ಹಾಗೂ ನೈತಿಕ ಪ್ರಚೋದನೆ ಮತ್ತು ಪ್ರೇರಣೆಗಳ ಪ್ರತಿನಿಧಿಯಾಗಿದ್ದಾನೆ. ಈ ಕಾರಣದಿಂದಲೇ ಅವನಿಗೆ ಹಿಂದುಗಳ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಜೀವನದಲ್ಲಿ ಅತ್ಯಂತ ಪವಿತ್ರ ಸ್ಥಾನ. ಪ್ರತಿ ಹಿಂದುವೂ ಸವಿತೃವಿನ ವೈಭವವನ್ನು ಹೀಗೆ ನಿತ್ಯವೂ ಸ್ಮರಿಸಿಕೊಳ್ಳುತ್ತಾನೆ.

तत्सवितुर्वरेण्यं भर्गो देवस्य धीमहि ।

धियो यो नः प्रचोदयात् ।।

ಇದೇ ಪ್ರಸಿದ್ಧ ಸಾವಿತ್ರೀ ಮಂತ್ರ, ಛಂದಸ್ಸಿನಿಂದ ಗಾಯತ್ರೀಮಂತ್ರ. ಇದರಲ್ಲಿ ಸವಿತೃವನ್ನು ಪೂಜಕರ, ಸಾಧಕರ ಬುದ್ಧಿಯನ್ನು ಪ್ರಚೋದಿಸಲೆಂದು ಬೇಡಿಕೊಳ್ಳಲಾಗುತ್ತದೆ. ಹೀಗೆ ಸೌರದೇವತೆಯಾಗಿ ಸೂರ್ಯನ ಬಿಸುವು, ಪ್ರಕಾಶ ಮತ್ತು ತೇಜಸ್ಸುಗಳನ್ನು ಪ್ರತಿನಿಧಿಸಿದರೆ, ಸವಿತೃವು ಅದೇ ಸೌರಶಕ್ತಿಯ ಆಧ್ಯಾತ್ಮಿಕ ಪ್ರಚೋದನೆಯ ಅಂಶವನ್ನು ಪ್ರತಿನಿಧಿಸುತ್ತಾನೆ.

ನಿಷ್ಪತ್ತಿಯ ದೃಷ್ಟಿಯಿಂದ ಸವಿತೃವು ಪ್ರಚೋದಕ, ಪ್ರೇರಕ. ಈ ಅರ್ಥದಲ್ಲಿ ಅವನ ಹೆಸರು सू – ಪ್ರೇರಣೆ ನೀಡುವುದು ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. "ಸವಿತೃ" ಎಂದರೆ "ಪ್ರೇರಕ ದೇವತೆ."

## 1.3.4 ವಿಷ್ಣು ಸೂಕ್ತಕ್ಕೆ ಪ್ರಸ್ತಾವನೆ

ಈ ಸೂಕ್ತವು ಋಗ್ವೇದದ ಮೊದಲನೆಯ ಮಂಡಲಕ್ಕೆ ಸೇರಿದ 154ನೇಸೂಕ್ತ. ಇದರ ಋಷಿ ದೀರ್ಘತಮಸ್, ದೇವತೆ ವಿಷ್ಣು ಮತ್ತು ಛಂದಸ್ಸು ತ್ರಿಷ್ಟುಭ್. (ತ್ರಿಷ್ಟುಭ್ ಛಂದಸ್ಸಿನ ಸ್ವರೂಪವನ್ನು ತಿಳಿಯಲು ಹಿಂದಿನ ಸವಿತೃ ಸೂಕ್ತಕ್ಕೆ ಕೊಟ್ಟ ಪ್ರಸ್ತಾವನೆಯನ್ನು ನೋಡಿ). ಈ ಸೂಕ್ತದಲ್ಲಿ ಆರು ಮಂತ್ರಗಳಿವೆ. ಅವುಗಳಲ್ಲಿ ವಿಷ್ಣುವಿನ ವಿಶೇಷ ಲಕ್ಷಣಗಳು ವರ್ಣಿಸಲ್ಪಟ್ಟಿವೆ.

## 1.3.5 ವಿಷ್ಣುಸೂಕ್ತದ ಮಂತ್ರಗಳ ಅಧ್ಯಯನ

### 1.3.5.(i) विष्णोर्नु कं वीर्याणि, इत्यादि

| ಸಂಹಿತಾಪಾಠ | ಪದಪಾಠ |
|---|---|
| विष्णोर्नु कं वीर्याणि प्र वोचं | विष्णोः। नु। कम्। वीर्याणि। प्र। वोचम्। |
| यः पार्थिवानि विममे रजांसि। | यः। पार्थिवानि। विऽममे। रजांसि। |
| यो अस्कभायदुत्तरं सधस्थं | यः। अस्कभायत्। उत्ऽतरम्। सधऽस्थम्। |
| विचक्रमाणस्त्रेधोरुगायः।।१।। | विऽचक्रमाणः। त्रेधा। उरुऽगायः।।१।। |

ಅನುವಾದ :

ಪೃಥಿವಿಗೆ ಸಂಬಂಧಿಸಿದ ಲೋಕಗಳನ್ನು ಯಾರು ಅಳತೆಮಾಡಿದನೋ, ವಿಸ್ತಾರವಾದ ಗಮನವುಳ್ಳವನಾಗಿ ಮೂರು ಜಾಬುಗಳನ್ನು ಹಾಕಿ ಯಾರು ಉನ್ನತ ಲೋಕವನ್ನು ನೆಲೆಗೊಳಿಸಿದನೋ ಆ ವಿಷ್ಣುವಿನ ವೀರಕರ್ಮಗಳನ್ನು ನಾನು ಈಗ ಉದ್ಘೋಷಿಸಬೇಕು. (ಜಾಬು = ದಾಪುಗಾಲು)

ಟಿಪ್ಪಣಿ : नु कम् - ಪದಪಾಠವು ಇವುಗಳನ್ನು ಬೇರೆ ಬೇರೆ ಪದಗಳೆಂದು ಪರಿಗಣಿಸಿದೆ. ಯಾಸ್ಕರು ಇವುಗಳನ್ನು ಜೋಡಿ ನಿಪಾತವೆಂದು ಭಾವಿಸುತ್ತಾರೆ. (ನಿರುಕ್ತ, 3.13). ಸಾಯಣರು ಯಾಸ್ಕರ ಮತವನ್ನು ಅಂಗೀಕರಿಸುತ್ತಾರೆ. ಒಟ್ಟಿಗೆ ಅವುಗಳ ಅರ್ಥ "ಈಗ" ಎಂದು. ಸ್ವರವೂ ಕೂಡ ಈ ವಿವರಣೆಗೆ ಸಮಂಜಸವಾಗಿದೆ - निपाता आद्युदात्ताः | (ಫಿಟ್‌ಸೂತ್ರ, 80), नुकम् |

वीर्याणि प्रवोचम् - वीर्याणि ಎಂದರೆ वीरकर्माणि (ಸಾಯಣ). वीर् ಪ್ರತಾಪ ತೋರುವುದು, ಇದಕ್ಕೆ यत् ಪ್ರತ್ಯಯ ಸೇರಿ वीर्यम् ಶಬ್ದದ ನಿಷ್ಪತ್ತಿ. यत् ಎಂಬುದು तित्

ಪ್ರತ್ಯಯವಾದ್ದರಿಂದ तित् स्वरितम् । (ಪಾ. 6.1.185) ಎಂದು ಸ್ವರಿತ. वीर्य + शस् (ದ್ವಿ.ವಿ.,ಬ.ವ.) – वीर्याणि ಎಂದು ರೂಪ. ಸುಪ್ ಪ್ರತ್ಯಯವು ಅನುದಾತ್ತ – अनुदात्तौ सुप्पितौ । (ಪಾ. 3.1.8). ಹೀಗಾಗಿ ಸ್ವರ ಹೀಗಿರುತ್ತದೆ – वीर्याणि । (णि ಪ್ರಚಯವಾಗಿದೆ). प्र वोचम्-वच् ಮಾತನಾಡುವುದು, प्र + वच् ಘೋಷಿಸುವುದು, लुङ्, ಉ.ಪು.,ಏ.ವ., ಈ ಕ್ರಿಯಾಪದದ अडागम ಲೋಪವಾಗಿದೆ. ವೇದದಲ್ಲಿ ಇದಕ್ಕೆ मा ಎಂಬ ನಿಷೇಧಾರ್ಥಕ ಇರಬೇಕೆಂದೇನೂ ಇಲ್ಲ – बहुलं छन्दस्यमाङ्योगेऽपि । (ಪಾ. 6.4.75). ಉಪಸರ್ಗವು ಪ್ರಧಾನವಾಕ್ಯದ ಕ್ರಿಯಾಪದದಿಂದ ಬೇರ್ಪಡಿಸಲ್ಪಡುತ್ತದೆ. ಹಾಗೆ ಬೇರೆ ಇರುವುದನ್ನು ಇಲ್ಲಿ ಕಾಣುತ್ತೇವೆ. ಕೆಲವು ಕಡೆ ಉಪಸರ್ಗಕ್ಕೂ ಮತ್ತು ಕ್ರಿಯಾಪದ ಅಥವಾ ಕೃದಂತಕ್ಕೂ ಮಧ್ಯದಲ್ಲಿ ಬೇರೆ ಪದ ಅಥವಾ ಪದಗಳು ಬರಬಹುದು. ಅಂತಹ ಸಂದರ್ಭದಲ್ಲಿ ಬೇರೆಯಾದ ಉಪಸರ್ಗವು ತನ್ನ ಮೂಲ ಸ್ವರವನ್ನು ಆದ್ಯುದಾತ್ತವನ್ನು (अभि ಮಾತ್ರ ಅಂತೋದಾತ್ತ) ಉಳಿಸಿಕೊಳ್ಳುತ್ತದೆ – व्यवहिताश्च । (ಪಾ. 1.4.82); उपसर्गाश्चाभिवर्जम् । (ಫಿಟ್‌ಸೂತ್ರ, 81). ಕ್ರಿಯಾಪದವು ಪಾದದ ಆರಂಭದಲ್ಲಿ ಇಲ್ಲದಿದ್ದರೆ ನಿಘಾತವನ್ನು ಹೊಂದುತ್ತದೆ – तिङतिङः । (ಪಾ. 8.1.28).

पार्थिवानि रजांसि – पृथिव्या इमानि पार्थिवानि रजांसि, ಸಾಯಣರು ಎರಡು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ - (1) ಪೃಥಿವಿ, ದ್ಯುಲೋಕ ಮತ್ತು ಅಂತರಿಕ್ಷ ಲೋಕಗಳಿಗೆ ಸಂಬಂಧಿಸಿದ ಅಗ್ನಿ, ವಾಯು ಮತ್ತು ಆದಿತ್ಯ ರೂಪದ ತೇಜಸ್ಸುಗಳು; (2) ಭೂಮಿಗಿಂತ ಕೆಳಗೆ ಇರುವ ಏಳು ಲೋಕಗಳು. ಇಲ್ಲಿ ಎರಡನೆ ವ್ಯಾಖ್ಯಾನದಲ್ಲಿ ಸಾಯಣರು रजांसि ಎಂದರೆ लोकाः ಎಂದು ತೆಗೆದುಕೊಳ್ಳುತ್ತಾರೆ. लोकाः रजांस्युच्यन्ते । (ನಿರುಕ್ತ, 4.10). "Terrestrial regions" ಭೂಮಿಗೆ ಸಂಬಂಧಿಸಿದ ಪ್ರದೇಶಗಳು (ಮ್ಯಾಕ್‌ಡೋನೆಲ್).

विममे – वि + मा – ಅಳೆಯುವುದು, लिट्, ಪ್ರ.ಪು., ಏ.ವ., ಉಪಸರ್ಗವು ಸಾಮಾನ್ಯವಾಗಿ ಗೌಣ ವಾಕ್ಯಗಳ ಕ್ರಿಯಾಪದಗಳೊಂದಿಗೆ ಸಮಾಸ ಹೊಂದುತ್ತದೆ. ಇದು ಕೇವಲ ವೇದದಲ್ಲಿರುವ तिङन्तोत्तरपदसमास । (ಸಿದ್ಧಾಂತಕೌಮುದಿ, ಸಮಾಸ ಪ್ರಕರಣದಲ್ಲಿ सहसुपा ಸೂತ್ರದ ಯೋಗ ವಿಭಾಗವನ್ನು ನೋಡಿ). ಇಲ್ಲಿ ममे ಎಂಬ ಕ್ರಿಯಾಪದವು यः ಎಂಬ यत् ಶಬ್ದದ ಸಂಬಂಧದಿಂದ ಗೌಣವಾಕ್ಯದ ಕ್ರಿಯಾಪದವಾಗಿದೆ. ಅದಕ್ಕೆ ನಿಘಾತ ಪ್ರತಿಷೇಧ – यद्वृत्तान्नित्यम् । (ಪಾ. 8.1.66) - ಸೋದಾತ್ತತ್ವ. ಹಾಗೆ ಸೋದಾತ್ತವಾದ ಕ್ರಿಯಾಪದದೊಂದಿಗೆ ಸಮಸ್ತವಾದ ಉಪಸರ್ಗವು ನಿಘಾತವನ್ನು ಹೊಂದುತ್ತದೆ – तिङि चोदात्तवति । (ಪಾ. 8.1.71).

अस्कभायत् - स्कभ् - ನೆಲೆಗೊಳಿಸು, ನೆಡು, लङ्, ಪ್ರ.ಪು.,ಏ.ವ., स्कभ् ಎಂಬುದು ವೈದಿಕ ಧಾತು. यः ದೊಂದಿಗೆ ಸಂಬಂಧ, ಆದ್ದರಿಂದ ಮೇಲೆ ममे ವಿಷಯದಲ್ಲಿ ಹೇಗೋ ಹಾಗೆ ನಿಘಾತ ಪ್ರತಿಷೇಧ.

उत्तरं सधस्थम् - उत्कृष्टतरं सर्वेषां लोकानामुपरिभूतम्, अपुनरावृत्तेः तस्य उत्कृष्टत्वम् --- उपासकानां सहस्थानं सत्यलोकम् | ಉತ್ಕೃಷ್ಟತರವಾದ, ಅಂದರೆ ಎಲ್ಲಾ ಲೋಕಗಳಿಗಿಂತ ಮೇಲಿರುವ; ಪುನರಾವೃತ್ತಿಯಿಲ್ಲದಿರುವುದರಿಂದ ಆ ಲೋಕವು ಉತ್ಕೃಷ್ಟ. ಅಂತಹ ಉಪಾಸಕರು ಒಟ್ಟಿಗೆ ಇರುವ ಸ್ಥಾನವಾದ ಸತ್ಯಲೋಕ (ಸಾಯಣ). सधस्थम् - सह तिष्ठतीति, तम्, ವೇದದಲ್ಲಿ "ಸಧ" ಎಂಬುದು "ಸಹ" ಎಂಬುದಕ್ಕೆ ಆದೇಶ - सध मादस्थयोश्छन्दसि | (ಪಾ. 6.3.96).

विचक्रमाणः - विविधं क्रममाणः (ಸಾಯಣ); वि + क्रम् + कानच्, ದ್ವಿತ್ವ - लिटः कानज्वा, ಲಿಡರ್ಥಕ ಭೂತ ಕೃದಂತ. ಚಿತ್ ಸ್ವರದಿಂದ ಅಂತೋದಾತ್ತ - चितः | (ಪಾ. 6.1.16).

उरुगायः - उरुभिः गीयमानः अतिप्रभूतं गीयमानो वा, ಬಹುಜನರಿಂದ ಸ್ತುತಿಸಲ್ಪಡುವವನು ಅಥವಾ ಬಹುವಾಗಿ ಸ್ತುತಿಸಲ್ಪಡುವವನು; उरुगमनः - ಬಹುಗಮನವುಳ್ಳವನು (ಸಾಯಣ). "Wide-paced" (ಮ್ಯಾಕ್‌ಡೋನೆಲ್).

---

## 1.3.5.(ii) प्र तद्विष्णुः स्तवते, इत्यादि

---

| ಸಂಹಿತಾಪಾಠ | ಪದಪಾಠ |
|---|---|
| प्र तद्विष्णुः स्तवते वीर्येण | प्र। तत्। विष्णुः। स्तवते। वीर्येण। |
| मृगो न भीमः कुचरो गिरिष्ठाः। | मृगः। न। भीमः। कुचरः। गिरिऽस्थाः। |
| यस्योरुषु त्रिषु विक्रमणेष्व् | यस्य। उरुषु। त्रिषु। विऽक्रमणेषु। |
| अधिक्षियन्ति भुवनानि विश्वा।।२।। | अधिऽक्षियन्ति। भुवनानि। विश्वा।।२।। |

**ಅನುವಾದ :**

ಅವನ ಶೌರ್ಯದ ಕಾರಣದಿಂದ ವಿಷ್ಣುವು ಇಚ್ಛೆಯಂತೆ ಸಂಚರಿಸುವ ಹಾಗೂ ಗಿರಿಯಲ್ಲಿ ನೆಲೆಸಿದ ಭಯಂಕರನಾದ ಮೃಗವೆಂದು ಸ್ತುತಿಸಲ್ಪಡುತ್ತಾನೆ. ಅವನ ಮೂರು

ವಿಶಾಲವಾದ ಮೂರು ನಿಕ್ಷೇಪಗಳಲ್ಲಿ ಎಲ್ಲಾ ಜೀವಿಗಳು ನೆಲೆಸಿದ್ದಾರೆ.

ಟಿಪ್ಪಣಿ : प्र ---- स्तवते – स्तु ಸ್ತುತಿಸು, लट् ಪ್ರ.ಪು.,ಏ.ವ., ಕರ್ಮಣಿ ಅರ್ಥದಲ್ಲಿ - (स्तूयते = ಸ್ತುತಿಸಲ್ಪಡುತ್ತಾನೆ). 1ನೇ ಮಂತ್ರದಲ್ಲಿ प्र वोचम् ಮೇಲಿನ ಟಿಪ್ಪಣಿಯನ್ನು ನೋಡಿ.

मृगः न – मृगः इव, न ಎಂಬುದು ಸಾದೃಶ್ಯವಾಚಕ.

कुचरः – कुत्सितहिंसादिकर्ता, दुर्गमप्रदेशगन्ता वा, ಕೀಳಾದ ಹಿಂಸೆ ಮುಂತಾದವನ್ನು ಮಾಡುವವನು, ಅಥವಾ ದುರ್ಗಮವಾದ ಪ್ರದೇಶದಲ್ಲಿ ಹೋಗುವವನು. ಯಾಸ್ಕರು "कुत्सितं कर्म चरति", ನಿಂದನೀಯವಾದ ಕರ್ಮ ಮಾಡುತ್ತಾನೆ, ಅಥವಾ "क्व अयं न गच्छति" ಎಲ್ಲಿಗೆ ತಾನೆ ಹೋಗುವುದಿಲ್ಲ? ಎಲ್ಲಾ ಕಡೆ ಹೋಗುತ್ತಾನೆ, ಎಂದು ವಿವರಿಸುತ್ತಾರೆ. कु + चर + अच्; ಚಿತ್‌ಸ್ವರದಿಂದ ಅಂತೋದಾತ್ತ – चितः । (ಪಾ. 6.1.163).

गिरिष्ठाः – गिरिवदुच्छितद्युलोकस्थायी यद्वा गिरि मन्त्रादिरूपायां वाचि सर्वदा वर्तमानः, ಪರ್ವತದಂತೆ ಎತ್ತರವಾದ ದ್ಯುಲೋಕದಲ್ಲಿ ನೆಲೆಸಿದವನು ಅಥವಾ ಮಂತ್ರ ಮುಂತಾದ ರೂಪದಲ್ಲಿರುವ ನುಡಿಯಲ್ಲಿ ಸದಾ ಇರುವವನು (ಸಾಯಣ) गिरौ गिरि वा तिष्ठतीति गिरिष्ठाः (ಎರಡನೆಯ ವಿಕಲ್ಪದಲ್ಲಿ ಸಪ್ತಮೀ ಅಲುಕ್ ಸಮಾಸ). ष्ठः ಎಂಬುದು ಕೃದಂತ, ಅದು गति, कारक ಅಥವಾ उपपद ದ ಅನಂತರ ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ – गतिकारकोपपदात् कृत् । (ಪಾ. 6.2.139).

अधिक्षियन्ति – अधि + क्षि ನೆಲೆಸು, लट्, ಪ್ರ.ಪು.,ಬ.ವ., यस्य ಎಂಬ यत् ಶಬ್ದದ ಸಂಬಂಧವಿರುವುದರಿಂದ ಕ್ರಿಯಾಪದಕ್ಕೆ ನಿಘಾತಪ್ರತಿಷೇಧ. ಒಂದನೇ ಮಂತ್ರದಲ್ಲಿ विममे ಮೇಲಿನ ಟಿಪ್ಪಣಿ ನೋಡಿ.

भुवनानि विश्वा – ನಪುಂಸಕಲಿಂಗ ಶಬ್ದಗಳಿಗೆ ಪ್ರ.ವಿ.,ಬ.ವ., ಪ್ರತ್ಯಯ जस् ಮತ್ತು ದ್ವಿ.ವಿ.,ಬ.ವ., ಪ್ರತ್ಯಯ शस्‌ಗಳಿಗೆ शि ಆದೇಶವು ವೇದದಲ್ಲಿ ವೈಕಲ್ಪಿಕ – शेश्छन्दसि बहुलम् । (ಪಾ. 6.1.70).भुवनानि ಎಂಬಲ್ಲಿ शि ಬಂದಿದೆ, ಆದರೆ विश्वा ಎಂಬಲ್ಲಿ ಬಂದಿಲ್ಲ. ಇಲ್ಲಿ भुवनानि ಎಂದರೆ भूतजातानि, ಪ್ರಾಣಿ ಸಮುದಾಯಗಳು (ಸಾಯಣ).

## 1.3.5.(iii) प्र विष्णवे शूषमेतु, इत्यादि

| ಸಂಹಿತಪಾಠ | ಪದಪಾಠ |
|---|---|
| प्र विष्णवे शूषमेतु मन्म | प्र। विष्णवे। शूषम्। एतु। मन्म। |
| गिरिक्षित उरुगायाय वृष्णे। | गिरिऽक्षिते। उरुऽगायाय। वृष्णे। |
| य इदं दीर्घं प्रयतं सधस्थम् | यः। इदम्। दीर्घम्। प्रऽयतम्। सधऽस्थम्। |
| एको विममे त्रिभिरित्पदेभिः।।३।। | एकः। विऽममे। त्रिऽभिः। इत्। पदेभिः।।३।। |

ಅನುವಾದ :

ನನ್ನ ಗಟ್ಟಿ ಉಸಿರಿನ ಸ್ತುತಿಯು ಯಾರು ಒಬ್ಬನೇ ಕೇವಲ ಮೂರು ಹಾಬುಗಳಲ್ಲಿ ಈ ದೀರ್ಘವಾದ ಬಹು ವಿಸ್ತೃತವಾದ ಪ್ರಪಂಚವನ್ನು ಅಳತೆ ಮಾಡಿದನೋ ಅವನಿಗೆ, ಗಿರಿಯಲ್ಲಿ ವಾಸಿಸುವ ವಿಶಾಲ ಗಮನದ ಆ ವೃಷಭ ವಿಷ್ಣುವಿಗೆ ಸಲ್ಲಲಿ.

ಟಿಪ್ಪಣಿ : विष्णवे – सर्वव्यापकाय (ಸಾಯಣ), ವಿಷ್ಣುವಿಗೆ.

शूषम् – अस्मत्कृत्यादिजन्यं बलम्, ನಮ್ಮ ಕರ್ಮ ಮುಂತಾದವುಗಳಿಂದ ಉತ್ಪನ್ನವಾದ ಬಲ; "inspiring" ಪ್ರೇರಕ (ಮ್ಯಾಕ್‌ಡೋನೆಲ್)

मन्म – मननं स्तोत्रम् (ಸಾಯಣ); "ಸೂಕ್ತ" (hymn) (ಮ್ಯಾಕ್‌ಡೋನೆಲ್).

प्र ---- एतु – इ ಹೋಗುವುದು, लोट्, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ प्र वोचम् ಮೇಲಿನ ಟಿಪ್ಪಣಿ ನೋಡಿ.

गिरिक्षिते – वाचि गिरिवदुन्नतप्रदेशे वा तिष्ठते; क्षित् – क्षिते ಕೃದಂತ; गिरिक्षित् ನಲ್ಲಿ ಸ್ಪಷ್ಟವಾಗುವಂತೆ ಕಾರಕದ ಅನಂತರ ಕೃದಂತವು ತನ್ನ ಸ್ವರವನ್ನು ಉಳಿಸಿಕೊಂಡಿದೆ. गिरिक्षिते ಎಂಬ ಚತುರ್ಥ್ಯಂತದಲ್ಲಿ ते ಎಂಬುದರ ಅನುದಾತ್ತ ಸುಪ್ ಪ್ರತ್ಯಯಕ್ಕೆ ಬರುವ ಅನುದಾತ್ತ – अनुदात्तौ सुप्पितौ | (ಪಾ. 3.1.8).ಎರಡನೇ ಮಂತ್ರದಲ್ಲಿ गिरिष्ठा ಮೇಲಿನ ಟಿಪ್ಪಣಿ ನೋಡಿ.

उरुगायाय – उरुगाय, ಚ.ವಿ.,ಏ.ವ., ಒಂದನೇ ಮಂತ್ರದಲ್ಲಿ उरुगायः ಮೇಲಿನ ಟಿಪ್ಪಣಿ ನೋಡಿ.

वृष्णे – वर्षित्रे कामानाम्, ಬಯಕೆಗಳನ್ನು ಸುರಿಸುವ (ಸಾಯಣ); "the bull" (ವೃಷಭ) (ಮ್ಯಾಕ್‌ಡೋನೆಲ್.)

प्रयतम् – नियतम् (ಸಾಯಣ); "far-extended" ಬಹುವಿಸ್ತಾರದ (ಮ್ಯಾಕ್‌ಡೋನೆಲ್); प्र + यत (यम् + क्त); प्र ಎಂಬ ಗತಿಯು ಕ್ತಾಂತದ ಪೂರ್ವದಲ್ಲಿ ತನ್ನ ಮೂಲಸ್ವರವನ್ನು ಉಳಿಸಿಕೊಂಡಿದೆ – गतिरनन्तरः। (ಪಾ. 6.2.49).

सधस्थम् – ಒಂದನೇ ಮಂತ್ರದ ಟಿಪ್ಪಣಿ ನೋಡಿ.

विममे – ಒಂದನೇ ಮಂತ್ರದ ಟಿಪ್ಪಣಿ ನೋಡಿ.

पदेभिः – ವೇದದಲ್ಲಿ भिस्‌ಗೆ ऐस् ಆದೇಶವು ವೈಕಲ್ಪಿಕ – अतो भिस ऐस्। बहुलं छन्दसि। (ಪಾ. 7.1.9-10).

## 1.3.5.(iv) यस्य त्री पूर्णा, इत्यादि

| ಸಂಹಿತಾಪಾಠ | ಪದಪಾಠ |
|---|---|
| यस्य त्री पूर्णा मधुना पदान्य् | यस्य। त्री। पूर्णा। मधुना। पदानि। |
| अक्षीयमाणा स्वधया मदन्ति। | अक्षीयमाणा। स्वधया। मदन्ति। |
| य उ त्रिधातु पृथिवीमुत द्याम् | यः। ऊँ इति। त्रिऽधातु। पृथिवीम्। उत। द्याम्। |
| एको दाधार भुवनानि विश्वा।।४।। | एकः। दाधार। भुवनानि। विश्वा।।४।। |

ಅನುವಾದ :

ಯಾರ ಮೂರು ಪದಾಕ್ರಮಣಗಳು ಮಧುವಿನಿಂದ ತುಂಬಿ, ಕ್ಷೀಣವಾಗದಂತೆ ತಮ್ಮ ಶಕ್ತಿಯಿಂದ ಆನಂದಿಸುತ್ತಿವೆಯೋ, ಯಾರು ಒಬ್ಬನೇ ಭೂಮಿಯನ್ನು ಮತ್ತು ದ್ಯುಲೋಕವನ್ನು ಮೂರು ಧಾತುಗಳುಳ್ಳವುಗಳಾಗಿ ಮತ್ತು ಎಲ್ಲಾ ಪ್ರಾಣಿಗಳನ್ನು ಆಸರೆ ಕೊಟ್ಟು ನಿಲ್ಲಿಸಿದನೋ, (ಆ ವಿಷ್ಣುವಿಗೆ ನನ್ನ ಸ್ತುತಿಯು ಸಲ್ಲಲಿ).

ಟಿಪ್ಪಣಿ : त्री पूर्णा – त्रीणि पूर्णानि, ಎರಡನೇ ಮಂತ್ರದಲ್ಲಿ भुवनानि विश्वा ಮೇಲಿನ ಟಿಪ್ಪಣಿ ನೋಡಿ.

मधुना - मधुरेण दिव्येन अमृतेन, ಮಧುರವಾದ ಸ್ವರ್ಗದ ಅಮೃತದಿಂದ (ಸಾಯಣ); "the mead", ಜೇನು (ಮ್ಯಾಕ್‌ಡೋನೆಲ್).

पदानि - पादप्रक्षेपानि, ಹಾಕುಗಳು.

अक्षीयमाणा - अक्षीयमाणानि, न क्षीयमाणानि, नञ् ತತ್ಪುರುಷ, ಅವ್ಯಯವಾದ नञ् ತತ್ಪುರುಷಸಮಾಸದಲ್ಲಿ ತನ್ನ ಮೂಲಸ್ವರವನ್ನು ಉಳಿಸಿಕೊಳ್ಳುತ್ತದೆ - तत्पुरुषे तुल्यार्थतृतीयासप्तम्युपमानाव्ययद्वितीयाकृत्याः | (ಪಾ. 6.2.2). अव्यये नञ्कुनिपातानाम् | (ವಾರ್ತಿಕ), 2ನೇ ಮಂತ್ರದಲ್ಲಿ भुवनानि विश्वा ಮೇಲಿನ ಟಿಪ್ಪಣಿ ನೋಡಿ.

स्वधया - अन्नेन, ಆಹಾರದಿಂದ ([illegible]). "bliss" ಆನಂದದಿಂದ (ಮ್ಯಾಕ್‌ಡೋನೆಲ್).

मदन्ति - मद् ಹರ್ಷಿಸು, लट्, ಪ್ರ.ಪು..ಬ.ವ., ಸಾಯಣರು ಇದನ್ನು मादयन्ति (ಣಿಜಂತ) ಅರ್ಥದಲ್ಲಿ ತೆಗೆದುಕೊಳ್ಳುತ್ತಾರೆ. ವಿಷ್ಣುವಿನ ಮೂರು ಪಾದವಿಕ್ಷೇಪಗಳು ಅವುಗಳಲ್ಲಿರುವ ಜನರನ್ನು ಆನಂದಗೊಳಿಸುತ್ತವೆ. ಸ್ವರಕ್ಕಾಗಿ ಒಂದನೇ ಮಂತ್ರದಲ್ಲಿ विममे (ममे) ಮೇಲಿನ ಟಿಪ್ಪಣಿ ನೋಡಿ.

ॐ इति - ಸವಿತೃಸೂಕ್ತದ (ಋ.1.35)ಆರನೇ ಮಂತ್ರದ ಟಿಪ್ಪಣಿ ನೋಡಿ.

त्रिधातु - त्रयाणां धातूनां समाहार [illegible]धातु, ಸಮಾಹಾರ ದ್ವಂದ್ವಸಮಾಸ. ಇಲ್ಲಿ ಉತ್ತರಪದದ ಮೊದಲ ವರ್ಣದ ಮೇಲೆ [illegible]ವು ಬಂದಿದೆ - परादिश्छन्दसि बहुलम् | (ಪಾ. 6.2.199). ಸಾಯಣರು [illegible], ಬಲ, ತೇಜಸ್ಸು ಎಂಬ ಮೂರು ಭೂತಗಳಿಗೆ ಸಂಬಂಧಿಸಿದಂತೆ ಅರ್ಥಮಾಡು[illegible]. ಅದನ್ನು ಕ್ರಿಯಾವಿಶೇಷಣವಾಗಿ ತೆಗೆದುಕೊಂಡು ವಿಷ್ಣುವು ಮೂರು ಭೂತ[illegible]ತವಾದಂತೆ ಲೋಕಗಳನ್ನು ಎತ್ತಿ ಹಿಡಿದಿರುವನು. ಅವರ ಪ್ರಕಾರ त्रिधातु ಎಂದ[illegible]"ವೂ ಅಥವಾ "[illegible]ಣತ್ರಯ"ವೂ ಆಗಬಹುದು. ಮ್ಯಾಕ್‌ಡೋನೆಲ್ ಅವರು ಕೊ[illegible] "threefold wise" ಮೂರುಪಟ್ಟು ಬುದ್ಧಿಯಿಂದ ಎಂಬುದೂ ಕೂಡ ಸ್ಪಷ್ಟವಾಗಿಲ್ಲ.

एको दाधार भुवनानि विश्वा [illegible], ಅದ್ವಿತೀಯನು, ಒಬ್ಬನೇ ಆದರೂ ಎಲ್ಲಾ ಹದಿನಾಲ್ಕು ಲೋಕಗಳನ್ನು ([illegible]) [illegible]ಸಿರುವನು. "(He) alone has supported ---- all beings", ಒಬ್ಬ[illegible] ಜೀವರುಗಳನ್ನು ಆಧರಿಸಿದನು

(ಮ್ಯಾಕ್‌ಡೋನೆಲ್), ಜೊತೆಗೆ पृथिवीम्, द्याम् ಎಂದೂ ಹೇಳಿರುವುದರಿಂದ भुवनानि विश्वा ಎಂಬುದಕ್ಕೆ ಎಲ್ಲಾ ಜೀವರುಗಳು ಎಂದು ಅರ್ಥಗ್ರಹಿಸುವುದು ಉತ್ತಮ. भुवनानि विश्वा - ಎರಡನೇ ಮಂತ್ರದಲ್ಲಿನ ಟಿಪ್ಪಣಿ ನೋಡಿ. दाधार - धृ -ಆಧರಿಸು ದಾತು, लिट्, ಪ್ರ.ಪು.,ಏ.ವ., ಸ್ವರಕ್ಕೆ ಒಂದನೇ ಮಂತ್ರದಲ್ಲಿ विममे (ममे) ಮೇಲಿನ ಟಿಪ್ಪಣಿ ನೋಡಿ.

## 1.3.5.(v) तदस्य प्रियमभि, इत्यादि

| ಸಂಹಿತಾಪಾಠ | ಪದಪಾಠ |
|---|---|
| तदस्य प्रियमभि पाथो अश्यां | तत्। अस्य। प्रियम्। अभि। पाथः। अश्याम्। |
| नरो यत्र देवयवो मदन्ति। | नरः। यत्र। देवऽयवः। मदन्ति। |
| उरुक्रमस्य स हि बन्धुरित्था | उरुऽक्रमस्य। सः। हि। बन्धुः। इत्था। |
| विष्णोः पदे परमे मध्व उत्सः।।५।। | विष्णोः। पदे। परमे। मध्वः। उत्सः।।५।। |

ಅನುವಾದ :

ದೇವತೆಗಳಲ್ಲಿ ನಿಷ್ಠರಾದ ಜನರು ಎಲ್ಲಿ ಆನಂದಿಸುತ್ತಾರೋ ಅದನ್ನು, ಇವನ ಪ್ರಿಯ ಅಂತರಿಕ್ಷ ಸ್ಥಾನವನ್ನು ನಾನು ತಲುಪಬೇಕು. ವಿಷ್ಣುವಿನ ಅತ್ಯಂತ ಮೇಲಿನ ಹೆಜ್ಜೆಯಲ್ಲಿ ಮಧುವಿನ ಬುಗ್ಗೆಯಿದೆ. ಅದೇ ವಿಸ್ತಾರವಾದ ಜಾಬಿನವನಾದ ಅವನಿಗೆ ನಿಜವಾಗಲೂ ಹತ್ತಿರವಾದದ್ದು.

ಟಿಪ್ಪಣಿ : प्रियम् – प्रियभूतं तत् सेव्यत्वेन प्रसिद्धम्, ಪ್ರಿಯವಾದ, ಆಶ್ರಯಸ್ಥಾನವೆಂದು ಪ್ರಸಿದ್ಧವಾದ, ಇದು पाथः ಎಂಬುದರ ವಿಶೇಷಣ.

पाथः – अन्तरिक्षनाम एतत्, ಅಂತರಿಕ್ಷದ ಪರ್ಯಾಯಪದ (ಸಾಯಣ), ಯಾಸ್ಕರು ಹಾಗೆ ಗುರುತಿಸಿದ್ದಾರೆ – पाथोऽन्तरिक्षम् पथा व्याख्यातम् – ಅದು ಅವಿನಾಶಿಯಾದ ಬ್ರಹ್ಮಲೋಕವನ್ನು ಹೇಳುತ್ತದೆ – अविनाशिनं ब्रह्मलोकम् इत्यर्थः (ಸಾಯಣ); "domain" ವಾಸಸ್ಥಾನ (ಮ್ಯಾಕ್‌ಡೋನೆಲ್).

अभि अश्याम् – अश् ಪಡೆಯುವುದು (ಪ್ರಾಪ್ತಿ), लुङ्, ಉ.ಪು.,ಏ.ವ., ಒಂದನೇ ಮಂತ್ರದಲ್ಲಿ प्र वोचम् ಮೇಲಿನ ಟಿಪ್ಪಣಿ ನೋಡಿ.

नरः - ನೃ ಶಬ್ದದ ಪ್ರ.ವಿ.,ಬ.ವ., (ना नरौ नरः).

देवयवः - देवं (विष्णुम्) आत्मन इच्छन्ति इति, ಈ ಅರ್ಥದಲ್ಲಿ क्यच् - सुप आत्मनः क्यच् | (ಪಾ. 3.2.8); उ ಎಂಬುದನ್ನು ತಾಚ್ಛೀಲ್ಯದ ಅರ್ಥದಲ್ಲಿ क्यच्‌ಗೆ ಸೇರಿಸಲಾಗಿದೆ - क्याच्छन्दसि | (ಪಾ. 3.2.170). देवयुः - ಚಿತ್‌ಸ್ವರದಿಂದ ಅಂತೋದಾತ್ತ - चितः | (ಪಾ. 6.1.16). व ಮೇಲೆ ಸುಪ್ ಪ್ರತ್ಯಯದ ಅನುದಾತ್ತ, ಅದು ಸ್ವರಿತವಾಗಿದೆ - अनुदात्तौ मुप्पितौ | उदात्तादनुदात्तस्य स्वरितः | (ಪಾ. 3.1.8; 8.4.66).

मदन्ति - ನಾಲ್ಕನೇ ಮಂತ್ರದ ಟಿಪ್ಪಣಿ ನೋಡಿ.

उरुक्रमस्य - अत्यधिकं सर्वं जगदाक्रममाणस्य तत्तदात्मना, ಎಲ್ಲಾ ಲೋಕಗಳನ್ನು ಅವುಗಳದೇ ಆದ ಸ್ವರೂಪದಲ್ಲಿ ಅಧಿಕವಾಗಿ ಆಕ್ರಮಿಸುವವನು (ಸಾಯಣ); "wide-paced" (ಮ್ಯಾಕ್‌ಡೋನೆಲ್). उरु क्राम्यति इति उरुक्रमः, तस्य, ಕೃದಂತವಾದ क्रम ಶಬ್ದವು उरु ಎಂಬ ಉಪಪದದ ಅನಂತರ ತನ್ನ ಸ್ವರವನ್ನು ಉಳಿಸಿಕೊಳ್ಳುತ್ತದೆ - गतिकारकोपपदात् कृत् | (ಪಾ. 6.2.139).

बन्धुः - सर्वेषां सुकृतिनां बन्धुभूतः --- तस्य पदं प्राप्तवताम् अपुनावृत्तेः, ವಿಷ್ಣು ಎಲ್ಲಾ ಪುಣ್ಯಶಾಲಿಗಳ ಬಂಧು (ಹಿತೈಷಿ). ಅವನ ಪದವನ್ನು (ಸ್ಥಾನವನ್ನು) ಪಡೆದವರಿಗೆ ಪುನರಾವೃತ್ತಿಯಿಲ್ಲ.

इत्था - इत्थम् उक्तप्रकारेण, ಹೀಗೆ, ಹೇಳಿದ ರೀತಿಯಲ್ಲಿ (ಸಾಯಣ); "truly" (ಮ್ಯಾಕ್‌ಡೋನೆಲ್). ಮ್ಯಾಕ್‌ಡೋನೆಲ್ ಅವರು बन्धुम् ಎಂಬುದನ್ನು उरुक्रमस्य ಎಂಬುದರೊಂದಿಗೆ ತೆಗೆದುಕೊಂಡು ಹೀಗೆ ಅನುವಾದಿಸುತ್ತಾರೆ - "truly akin to the wide-strider", ಉದ್ದಜಾಬಿನವನಿಗೆ ಅತ್ಯಂತ ನಿಕಟವಾದ ಎಂದು.

विष्णोः - व्यापकस्य परमेश्वरस्य, ಸರ್ವವ್ಯಾಪಕನಾದ ಪರಮೇಶ್ವರನ (ಸಾಯಣ).

परमे पदे - उत्कृष्टे निरतिशये केवलसुखात्मके --- स्थाने, ಉತ್ಕೃಷ್ಟವಾದ ಅನುಪಮವಾದ ಕೇವಲ ಆನಂದಮಯವಾದ ಸ್ಥಾನದಲ್ಲಿ (ಸಾಯಣ).

मध्व उत्सः - मधुरस्य परमानन्दरसस्य सुधारूपस्य ---- निष्यन्दः, ಮಧುರವಾದ, ಪರಮಾನಂದ ರಸದ ಅಂದರೆ ಸುಧೆಯ ಬುಗ್ಗೆ (ಸಾಯಣ); उत्सः - "well" (ಬಾವಿ) (ಮ್ಯಾಕ್‌ಡೋನೆಲ್).

## 1.3.5.(vi) ता वां वास्तून्युष्मसि, इत्यादि

| ಸಂಹಿತಾಪಾಠ | ಪದಪಾಠ |
|---|---|
| ता वां वास्तून्युश्मसि गमध्यै | ता। वाम्। वास्तूनि। उश्मसि। गमध्यै। |
| यत्र गावो भूरिशृङ्गा अयासः। | यत्र। गावः। भूरिऽशृङ्गाः। अयासः। |
| अत्राह तदुरुगायस्य वृष्णः | अत्र। अह। तत्। उरुऽगायस्य। वृष्णः। |
| परमं पदमव भाति भूरि।।६।। | परमम्। पदम्। अव। भाति। भूरि।।६।। |

**ಅನುವಾದ :**

ಎಲ್ಲಿ ಬಹು ಕೋಡುಗಳುಳ್ಳ ಗೋವುಗಳು ಸಂಚರಿಸುತ್ತಿವೆಯೋ, ಅಲ್ಲಿಗೆ ನಿಮ್ಮಿಬ್ಬರ ನಿವಾಸಸ್ಥಾನಗಳಿಗೆ ಹೋಗಲು ಇಚ್ಛಿಸುತ್ತೇವೆ. ಅಲ್ಲಿ ಆ ವಿಶಾಲ ಗಮನನಾದ ವೃಷಭನ ಉನ್ನತವಾದ ಸ್ಥಾನವು ಬಹುವಾಗಿ ಬೆಳಗುತ್ತಿದೆ.

**ಟಿಪ್ಪಣಿ :** ता वास्तूनि – ಎರಡನೇ ಮಂತ್ರದಲ್ಲಿ भुवनानि विश्वा ಮೇಲಿನ ಟಿಪ್ಪಣಿ ನೋಡಿ.

वाम् – ನೀವಿಬ್ಬರು, ಸಾಯಣರ ಪ್ರಕಾರ ಯಜಮಾನ ಮತ್ತು ಅವನ ಪತ್ನಿ. ಆ ವಾಸಸ್ಥಾನಗಳೆಂದರೆ (वास्तूनि) ಸ್ವರ್ಗದ ಪ್ರದೇಶಗಳು, ಅವರಿಬ್ಬರು ಯಜ್ಞಕರ್ಮಸಂಚಿತವಾದ ಪುಣ್ಯದಿಂದ ಅಲ್ಲಿಗೆ ಹೋಗುತ್ತಾರೆ. ಮ್ಯಾಕ್‌ಡೋನೆಲ್ ಪ್ರಕಾರ वाम् ಎಂದರೆ (ನೀವಿಬ್ಬರು) ಇಂದ್ರ ಮತ್ತು ವಿಷ್ಣು.

उश्मसि – वश् ಇಚ್ಛಿಸುವುದು, लट्, ಉ.ಪು.,ಬ.ವ., उश्मः ಧಾತುವಿನ ಸಂಪ್ರಸಾರಣದಿಂದ ರೂಪ. ವೇದದಲ್ಲಿ मस् ಎಂಬುದು ಇಕಾರಾಂತವಾಗಿ मसि ಆಗುತ್ತದೆ – इदन्तो मसि | (ಪಾ. 7.1.46).ಒಂದನೇ ಮಂತ್ರದಲ್ಲಿ वोचत् ಎಂಬುದರ ಸ್ವರದಂತೆ ಇದರ ಸ್ವರ (ನಿಘಾತಸ್ವರ).

गमध्यै – ವೈದಿಕ ತುಮುನ್ನರ್ಥಕ (ಚತುರ್ಥ್ಯಂತ) – तुमर्थे- (ಪಾ. 3.4.9). ಇಲ್ಲಿ अध्यैन् ಬಂದಿದೆ. नित्स्वरದಿಂದ ಆದ್ಯುದಾತ್ತ – ञ्नित्यादिर्नित्यम् | (ಪಾ. 6.1.157).

गवः – ಮ್ಯಾಕ್‌ಡೋನೆಲ್ ಪ್ರಕಾರ ಉಷಸ್ಸಿನ ಕಿರಣಗಳನ್ನು ಗೋವುಗಳಿಗೆ ಹೋಲಿಸಲಾಗಿದೆ. "ಕಿರಣಗಳು" (ಸಾಯಣ).

भूरिशृङ्गाः – अत्यन्तोन्नत्युपेताः बहुभिराश्रयणीया वा, ಅತ್ಯಂತ ಎತ್ತರವನ್ನು ಹೊಂದಿದವು ಅಥವಾ ಬಹುಜನರಿಂದ ಆಶ್ರಯಿಸಲ್ಪಡುವವು. ಮ್ಯಾಕ್‌ಡೋನೆಲ್ ಪ್ರಕಾರ "many-horned" (ಬಹುಕೊಂಬುಗಳುಳ್ಳ). भूरिशृङ्गानि येषां ते (गावः), ಬಹುವ್ರೀಹಿಸಮಾಸ. ಇದರಲ್ಲಿ ಪೂರ್ವಪದವು ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ – बहुव्रीहौ प्रकृत्या पूर्वपदम् । (ಪಾ. 6.2.1).

अयासः – इ ಹೋಗುವುದು – अयः, ಪ್ರ.ವಿ.,ಬ.ವ., (ಯಾಸ್ಕ); ಪ್ರ.ವಿ.,ಬ.ವ., ಪ್ರತ್ಯಯ जस्‌ಗೆ असुक् (अस्) ಬರುತ್ತದೆ – आज्जसेरसुक् । (ಪಾ.7.1.50). ಮ್ಯಾಕ್‌ಡೋನೆಲ್ ಪ್ರಕಾರ ಅದು अयास् ಶಬ್ದದ ಪ್ರ.ವಿ.,ಬ.ವ., (अयाः अयासौ अयासः). ಚಟುವಟಿಕೆಯುಳ್ಳ, ಶೀಘ್ರಗತಿಯ, ಪಟುವಾದ ಎಂದರ್ಥ.

उरुगायस्य – ಮೂರನೇ ಮಂತ್ರದಲ್ಲಿ उरुगायाय ಮೇಲಿನ ಟಿಪ್ಪಣಿ ನೋಡಿ

वृष्णः – कामानां वर्षितुः ಬಯಕೆಗಳನ್ನು ಸುರಿಸುವವನ (ಸಾಯಣ). "bull", ವೃಷಭ (ಮ್ಯಾಕ್‌ಡೋನೆಲ್).

परमं पदम् – ಐದನೇ ಮಂತ್ರದಲ್ಲಿ परमे पदे ಮೇಲಿನ ಟಿಪ್ಪಣಿ ನೋಡಿ.

भाति – भा ಪ್ರಕಾಶಿಸುವುದು, ಲಟ್, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ वोचम् ಎಂಬುದರ ಸ್ವರದಂತೆ ಇದರ ಸ್ವರ.

## 1.3.6 ವಿಷ್ಣುದೇವತೆಯ ಲಕ್ಷಣಗಳು

ಋಗ್ವೇದದಲ್ಲಿ ವಿಷ್ಣುದೇವತೆಯನ್ನು ಸ್ತುತಿಸುವ ಸೂಕ್ತಗಳು ಐದಾರಿವೆ. ಕೆಲವು ಸೂಕ್ತಗಳಲ್ಲಿ ಬೇರೆ ದೇವತೆಗಳೊಂದಿಗೆ ಸ್ತುತಿಸಲ್ಪಟ್ಟಿದ್ದಾನೆ. ಉದಾಹರಣೆಗೆ 4.69ರಲ್ಲಿ ಇಂದ್ರನೊಂದಿಗೆ, 5.87ರಲ್ಲಿ ಮರುತರೊಂದಿಗೆ ಸ್ತುತಿಸಲ್ಪಟ್ಟಿದ್ದಾನೆ. ಅವನ ಸ್ತುತಿಪರವಾದ ಸೂಕ್ತಗಳಲ್ಲಿ ಮತ್ತು ಮಂತ್ರಗಳಲ್ಲಿ ಅವನ ಈ ಎರಡು ವಿಶೇಷ ಕಾರ್ಯಗಳು ಉಕ್ತವಾಗಿವೆ - (1) ಮೂರು ಜಾಬುಗಳನ್ನು ಹಾಕುವುದು (ಪದಾಕ್ರಮಣ ಮಾಡುವುದು) ಮತ್ತು (2) ವೃತ್ರನೊಂದಿಗಿನ ಯುದ್ಧದಲ್ಲಿ ಇಂದ್ರನಿಗೆ ಸಹಾಯ ಮಾಡುವುದು. ಇವುಗಳಲ್ಲಿ ಮೊದಲಿನದೇ ಅವನ ಪ್ರಧಾನ ಕಾರ್ಯ. ಅದರಿಂದಲೇ ಅವನಿಗೇ ಮೀಸಲಾದ ಉರುಗಾಯಃ ಮತ್ತು ಉರುಕ್ರಮಣಃ ಎಂಬ ವಿಶೇಷಣಗಳಿವೆ. ಆ ಮೂರು ಜಾಬುಗಳಲ್ಲಿ ಅವನು ವಿಶ್ವವನ್ನೆಲ್ಲಾ ಅಳೆದುಬಿಡುತ್ತಾನೆ; ಭೂಮಿಯ ಭಾಗಗಳನ್ನು, ಅಂತರಿಕ್ಷವನ್ನು ಮತ್ತು ದ್ಯುಲೋಕವನ್ನು

ಆಕ್ರಮಿಸುತ್ತಾನೆ. ಅವನ ಎರಡು ಜಾಬುಗಳು ಮನುಷ್ಯನ ದೃಷ್ಟಿಗೆ ಗೋಚರವಾಗಿವೆ. ಆದರೆ ಮೂರನೆಯ ಜಾಬು ಮನುಷ್ಯರ ದೃಷ್ಟಿಗೂ ಮೀರಿದ್ದು ಮತ್ತು ಹಕ್ಕಿಗಳ ಹಾರಾಟಕ್ಕೂ ದೂರದ್ದು. ಈ ತೃತೀಯ ಜಾಬಿನ ಸ್ಥಾನದಲ್ಲಿ ದೇವಭಕ್ತರು ಆನಂದಿಸುತ್ತಾರೆ. ಅಲ್ಲಿ ಅವರಿಗೆ ಮಧುವಿನ ಬುಗ್ಗೆಯಿದೆ.

ಈ ಮೂರು ಪದಾಕ್ರಮಣಗಳು ಬಹುಶಃ ಸೂರ್ಯಗತಿಯ ಮೂರು ಹಂತಗಳನ್ನು ಪ್ರತಿನಿಧಿಸುತ್ತವೆ. ಸೂರ್ಯನ ಗತಿಯು ಪೃಥ್ವಿ, ಅಂತರಿಕ್ಷ ಮತ್ತು ದ್ಯುಲೋಕಗಳೆಂಬ ಮೂರು ವಿಭಾಗಗಳಲ್ಲಿ ಕಂಡುಬರುತ್ತದೆ. ಅವುಗಳನ್ನೇ ಸಾಂಕೇತಿಕವಾಗಿ ವಿಷ್ಣುವಿನ ಮೂರು ಪದಾಕ್ರಮಣಗಳೆಂದು ಕರೆದಿರಬಹುದು. ವಿಷ್ಣುವಿನ 90 ಅಶ್ವಗಳು ನಾಲ್ಕು ಹೆಸರುಗಳನ್ನು ಹೊತ್ತು ಚಕ್ರದಂತೆ ತಿರುಗುತ್ತವೆ ಎಂದು ವರ್ಣಿಸಲಾಗಿದೆ. ಈ ತೊಂಬತ್ತು ಅಶ್ವಗಳೆಂದರೆ ಒಂದು ಋತುವಿನಲ್ಲಿ ಕಂಡು ಬರುವ ದಿನಗಳು. ನಾಲ್ಕು ಹೆಸರುಗಳು ಎಂದರೆ ನಾಲ್ಕು ಋತುಗಳು. ಚಕ್ರವೆಂದರೆ ಒಂದು ವರ್ಷ. ತೊಂಬತ್ತನ್ನು ನಾಲ್ಕರಿಂದ ಗುಣಿಸಿದರೆ ಒಂದು ವರ್ಷದಲ್ಲಿ ಬರುವ 360 ದಿವಸಗಳಾಗುತ್ತವೆ. ಹೀಗೆ ವಿಷ್ಣುವು ಮೂಲತಃ ಆಕಾಶದ ಮೂರು ವಿಭಾಗಗಳಲ್ಲಿ ಹಾಯುವ ಸೂರ್ಯನ ಗತಿಯನ್ನು ಮೂರ್ತೀಕರಿಸಿದ ರೂಪವೆಂದು ತಿಳಿಯುವುದು ಸಮಂಜಸವೆನಿಸುತ್ತದೆ.

ಎರಡನೇ ವಿಶೇಷಕಾರ್ಯವೆಂಬುದು, ಅಂದರೆ ಇಂದ್ರನಿಗೆ ಸಹಾಯಮಾಡುವುದು ಎಂಬುದು, ವಿಷ್ಣುವಿಗೆ ಆನುಷಂಗಿಕವಾದುದು. ವೃತ್ರನೊಂದಿಗೆ ಯುದ್ಧಮಾಡುವ ಇಂದ್ರನಿಗೆ ಅವನ ಮಿತ್ರತ್ವವು ಬೇಕೆಂಬುದು ಅನೇಕ ಸೂಕ್ತಗಳಲ್ಲಿ ಹೇಳಲ್ಪಟ್ಟಿದೆ. ಹಾಗೆಯೇ ಇದರಿಂದ ಇಂದ್ರನ ಮಿತ್ರರಾದ ಮರುತರ ಸಂಬಂಧವೂ ಅವನಿಗೆ ಸಿದ್ಧಿಸುತ್ತದೆ. ಮರುತರೊಂದಿಗಿನ ಅವನ ಸ್ತುತಿಯು ಇದನ್ನೇ ಸೂಚಿಸುತ್ತದೆ (5.87).

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸೂಕ್ತವನ್ನು ವಿಮರ್ಶಿಸೋಣ. ಈ ಸೂಕ್ತದಲ್ಲಿ ವಿಷ್ಣುವು ಭೂಭಾಗಗಳನ್ನು ತನ್ನ ಪದಾಕ್ರಮಣದಿಂದ ಅಳತೆ ಮಾಡಿದ್ದು ಮೊದಲ ಮಂತ್ರದಲ್ಲಿ ಸ್ತುತಿಸಲ್ಪಟ್ಟಿದೆ. ಅದೇ ಅವನ ಮೊದಲ ಶೂರ ಕರ್ಮ. ಅವನು ಈ ಪದಾಕ್ರಮಣ ಮಾಡುವುದು ಮನುಷ್ಯರ ಜೀವನಕ್ಕೆ ಭೂಮಿಯನ್ನು ಸ್ಥಾಪಿಸುವುದಕ್ಕೋಸ್ಕರ. ಅವನು ಉತ್ತರ ಸಧಸ್ಥವನ್ನು, ಅಂದರೆ ಸ್ವರ್ಗವನ್ನು ಸೃಷ್ಟಿಸಿದನು ಎಂದು ವರ್ಣಿಸಲಾಗಿದೆ. ಪರ್ವತದಲ್ಲಿ ನೆಲೆಸಿದ ವೃಷಭನಂತೆ ಅವನು ತನ್ನ ಇಚ್ಛೆಗನುಸಾರ ಸಂಚರಿಸುತ್ತಾನೆ. ಅವನ ಮೂರು ಜಾಬುಗಳಲ್ಲಿ ಎಲ್ಲಾ ಪ್ರಾಣಿಗಳು, ಮರ್ತ್ಯರು ಮತ್ತು ಅಮರ್ತ್ಯರು, ನೆಲೆಸಿದ್ದಾರೆ. ಅತ್ಯಂತ ಮೇಲಿನ ಜಾಬು ಅವನಿಗೆ ಅತ್ಯಂತ ಪ್ರಿಯವಾದುದು. ಅದರಲ್ಲಿಯೇ ದೇವಭಕ್ತರು ನೆಲೆಸಿ ಆನಂದಿಸುತ್ತಿದ್ದಾರೆ. ಅವರ ಆನಂದಕ್ಕೆ ಅಲ್ಲಿರುವ ಮಧುವಿನ ಬುಗ್ಗೆ, ವಿಷ್ಣುವಿನ ಕೃಪೆ, ಕಾರಣ. ಅಲ್ಲಿಯೇ ಬೆಳಕಿನ ಕಿರಣಗಳು

ವಾಸಮಾಡುತ್ತವೆ. ಅವುಗಳಿಂದ ಅವನ ಮೂರನೆ ಹೆಜ್ಜೆಯು ಬೆಳಗುತ್ತಿದೆ. ಹೀಗೆ ಪ್ರಸ್ತುತ ಸೂಕ್ತವು ವಿಷ್ಣುವಿನ ಎಲ್ಲಾ ವಿಶೇಷ ಕಾರ್ಯಗಳನ್ನು ಸ್ತುತಿಸುತ್ತದೆ.

"ವಿಷ್ಣು" ಎಂಬ ಹೆಸರು ವಿಷ್ - ವ್ಯಾಪಿಸುವುದು ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. "ವ್ಯಾಪನಶೀಲ ದೇವತೆ" ಎಂದರ್ಥ.

## 1.3.7 ಪ್ರಶ್ನೆಗಳು

1.3.7.1. ಸವಿತೃದೇವತೆಯ ಸ್ವರೂಪವನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

1.3.7.2. ವಿಷ್ಣುದೇವತೆಯ ಸ್ವರೂಪದ ಮೇಲೆ ಒಂದು ಟಿಪ್ಪಣಿ ಬರೆಯಿರಿ.

**1.3.7.3. ವ್ಯಾಕರಣ ದೃಷ್ಟಿಯಿಂದ ವಿವರಿಸಿರಿ,**

ह्वयामि, मित्रावरुणौ, वर्तमानः, निवेशयन्, विश्वरूपम्, बृहन्तम्, दधानः, दैव्यस्य, विश्वा भुवनानि, विराषाट्, तस्थुः, असुरः, गभीरवेपाः, योजना, दाशुषे, हिरण्यपाणिः, प्रतिदोषम्, वीर्याणि, पार्थिवानि, सधस्थम्, गिरिष्ठाः, अधिक्षियन्ति, उरुगायाय, त्रीपूर्णा, उरुक्रमस्य, उश्मसि, अभि .... अश्याम्, पदेभिः ।

1.3.7.4. ಇವುಗಳಲ್ಲಿನ ಸ್ವರವನ್ನು ವಿವರಿಸಿ.

हिर॑ण्यशम्यम्, चि॒त्रभा॑नुः, अ॒मृत॑म्, शि॒ति॒पाद॑ः, हिर॑ण्यप्रउगम्, अ॒मृता॑, क्वे॒३॑ दानीम्, (रश्मिरस्या) त॒ता॒न॒, अ॒भि .... ऋ॒णो॒ति, गृणानः, वी॒र्या॑णि, गि॒रि॒ष्ठाः, गि॒रि॒क्षि॒तै॑, (एको॑) वि॒म॒मे॒, भूरि॑शृङ्गाः, द्यावा॑पृथि॒वी ।

**1.3.7.5. ಇವುಗಳ ಅರ್ಥವನ್ನು ಬರೆಯಿರಿ.**

अवसे, निवेशनीम्, रजसा, कृशनैः, तविषीम्, श्यावाः, उपस्थे, विराषाट्, आणिम्, सुपर्णः, असुरः, सुनीथः, ककुभः, वार्याणि, विचर्षणिः, अमीवाम्, सुमृळीकः, यातुधानान्, अरेणवः, उत्तरं सधस्थम्, उरुगायः, कुचरः, शूषम्, स्वधया, त्रिधातु, पाथः, देवयवः, वास्तूनि, गवः ।

NOTES

ಘಟಕ - 4

# ವೇದಸೂಕ್ತಗಳು

## ಇಂದ್ರಸೂಕ್ತ

1.4.1 ಇಂದ್ರಸೂಕ್ತಕ್ಕೆ ಪ್ರಸ್ತಾವನೆ (ಋ.2.12)

1.4.2 ಇಂದ್ರಸೂಕ್ತದ ಮಂತ್ರಗಳ ಅಧ್ಯಯನ [1.4.2.(i) - (xv)]

1.4.3 ಇಂದ್ರದೇವತೆಯ ಲಕ್ಷಣಗಳು

1.4.4 ಪ್ರಶ್ನೆಗಳು

## ಘಟಕ - 4

# ವೇದಸೂಕ್ತಗಳು
# ಇಂದ್ರಸೂಕ್ತ

## 1.4.1 ಇಂದ್ರಸೂಕ್ತಕ್ಕೆ ಪ್ರಸ್ತಾವನೆ

ಈ ಸೂಕ್ತವು ಋಗ್ವೇದದ ಎರಡನೆ ಮಂಡಲದಲ್ಲಿ ಹನ್ನೆರಡನೆಯ ಸೂಕ್ತ. ಇದರ ಋಷಿ ಗೃತ್ಸಮದ, ದೇವತೆ ಇಂದ್ರ ಮತ್ತು ಛಂದಸ್ಸು ತ್ರಿಷ್ಟುಭ್. (ತ್ರಿಷ್ಟುಭ್ ಛಂದಸ್ಸಿನ ಸ್ವರೂಪವನ್ನು ತಿಳಿಯಲು ಖಂಡ 1, ಘಟಕ 3ರಲ್ಲಿ ಸವಿತೃಸೂಕ್ತಕ್ಕೆ ಕೊಟ್ಟ ಪ್ರಸ್ತಾವನೆಯನ್ನು ನೋಡಿ). ಈ ಸೂಕ್ತದಲ್ಲಿ 15 ಮಂತ್ರಗಳಿವೆ ಎಲ್ಲವೂ ಇಂದ್ರನ ಮಹಿಮೆಯನ್ನು ವರ್ಣಿಸುತ್ತವೆ. ಕಡೆಯ ಮಂತ್ರವನ್ನು ಬಿಟ್ಟು ಮಿಕ್ಕ ಮಂತ್ರಗಳಲ್ಲಿ ಕೊನೆಗೆ स जनास इन्द्रः ಎಂಬ ಮಾತು ಬರುತ್ತವೆ "ಅವನು, ಓ ಜನರೇ, ಇಂದ್ರನು" - ಎಂದು ಅರ್ಥ. ಇದಕ್ಕೆ ಹಿನ್ನೆಲೆಯಾಗಿ ಒಂದು ಕಥೆಯನ್ನು ಸಾಯಣಾದಿಗಳು ಉಲ್ಲೇಖಿಸಿದ್ದಾರೆ. ಆ ಕಥೆಯ ಮೂರು ಆವೃತ್ತಿಗಳನ್ನು ಕಾಣುತ್ತೇವೆ. ಒಂದು ಆವೃತ್ತಿಯ ಪ್ರಕಾರ ಗೃತ್ಸಮದ ಋಷಿಯು ತನ್ನ ಭಕ್ತಿಯ ಪ್ರಭಾವದಿಂದ ಇಂದ್ರನಂತೆ ಬೃಹತ್ತಾದ ರೂಪವನ್ನು ತಾಳಿದನು. ಅವನ ಮೂರ್ತಿಯು ಏಕಕಾಲಕ್ಕೆ ಭೂಲೋಕ, ಅಂತರಿಕ್ಷಲೋಕ ಮತ್ತು ದ್ಯುಲೋಕಗಳಲ್ಲಿ ಕಾಣಿಸಿತು. ಧುನಿ ಮತ್ತು ಚುಮುರಿ ಎಂಬ ಇಬ್ಬರು ರಾಕ್ಷಸರು ಅವನನ್ನೇ ಇಂದ್ರನೆಂದು ತಿಳಿದು ಆಘಾತ ಮಾಡಲು ಪ್ರವೃತ್ತರಾದರು. ಆಗ ಋಷಿಯು ಈ ಸೂಕ್ತವನ್ನು ಪಠಿಸುತ್ತಾ ಅವರ ಪ್ರಯತ್ನವನ್ನು ತಡೆದನು. ಇಂದ್ರನ ಶೌರ್ಯಾದಿಗಳನ್ನು ವರ್ಣಿಸಿ "ಅವನು ಇಂದ್ರ, ನಾನಲ್ಲ" ಎಂದು ಹೇಳಿ ಅವರ ಆಘಾತದಿಂದ ತಪ್ಪಿಸಿಕೊಂಡನು.

ಎರಡನೆ ಆವೃತ್ತಿಯಂತೆ ಇಂದ್ರ ಮತ್ತು ಇತರ ದೇವತೆಗಳು ಒಟ್ಟಿಗೆ ವೈನ್ಯನು ನಡೆಸುತ್ತಿದ್ದ ಯಜ್ಞಕ್ಕೆ ಬಂದರು. ಅದರಲ್ಲಿ ಗೃತ್ಸಮದನು ಒಬ್ಬ ಋತ್ವಿಜನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ರಾಕ್ಷಸರು ಇಂದ್ರನನ್ನು ಕೊಲ್ಲಲು ಅಲ್ಲಿಗೇ ಬಂದರು. ಅದನ್ನು ಕಂಡ ಇಂದ್ರನು ಗೃತ್ಸಮದನ ರೂಪವನ್ನು ಧರಿಸಿ ಮೌನವಾಗಿ ಅಲ್ಲಿಂದ ತೆರಳಿದನು. ಯಜ್ಞದ ಕಾರ್ಯ ಮುಗಿದ ಮೇಲೆ ಗೃತ್ಸಮದನು ಹೊರಗೆ ಬಂದನು. ಅಲ್ಲಿಯೇ ಕಾಯುತ್ತಿದ್ದ ರಾಕ್ಷಸರು ಅವನನ್ನೇ ಇಂದ್ರನೆಂದು ಭಾವಿಸಿ ಅವನ ಮೇಲೆ ಬೀಳಲು ಬಂದರು. ಆಗ ಋಷಿಯು ಈ ಸೂಕ್ತವನ್ನು ಪಠಿಸಿ ಅವನು ಇಂದ್ರ, ನಾನಲ್ಲ ಎಂದು ಹೇಳುತ್ತಾ ಅವರನ್ನು ತಡೆದನು.

ಮೂರನೆಯ ಆವೃತ್ತಿಯ ಪ್ರಕಾರ ಇಂದ್ರನು ಒಬ್ಬನೇ ಗೃತ್ಸಮದನು ನಡೆಸುತ್ತಿದ್ದ

ಯಜ್ಞಕ್ಕೆ ಬಂದನು. ಅಸುರರ ಆಕ್ರಮಣವನ್ನು ನಿರೀಕ್ಷಿಸಿ ಋಷಿಯ ರೂಪವನ್ನು ಧರಿಸಿ ಅಲ್ಲಿಂದ ಪಾರಾದನು, ಸ್ವರ್ಗಕ್ಕೆ ಮರಳಿದನು. ಸ್ವಲ್ಪ ಹೊತ್ತು ಕಾಯ್ದು ರಾಕ್ಷಸರು ಯಜ್ಞಶಾಲೆಯನ್ನು ಪ್ರವೇಶಿಸಿದರು. ಗೃತ್ಸಮದನನ್ನು ನೋಡಿ ಅವನೇ ಇಂದ್ರನೆಂದು ತಿಳಿದು ಕೊಲ್ಲಲು ಸನ್ನದ್ಧರಾದರು. ಆಗ ಋಷಿಯು ಈ ಸೂಕ್ತವನ್ನು ಪಠಿಸುತ್ತಾ ಅವನು ಇಂದ್ರ, ನಾನಲ್ಲ ಎಂದು ವರ್ಣಿಸುತ್ತಾ ಅವರ ಪ್ರಯತ್ನವನ್ನು ತಡೆದನು.

## 1.4.2 ಇಂದ್ರಸೂಕ್ತದ ಮಂತ್ರಗಳ ಅಧ್ಯಯನ

### 1.4.2.(i) यो जात एव प्रथमो, इत्यादि

| ಸಂಹಿತಾಪಾಠ | ಪದಪಾಠ |
|---|---|
| यो जात एव प्रथमो मनस्वान् | यः । जातः । एव । प्रथमः । मनस्वान् । |
| देवो देवान्क्रतुना पर्यभूषत् । | देवः । देवान् । क्रतुना । परिऽअभूषत् । |
| यस्य शुष्माद्रोदसी अभ्यसेतां | यस्य । शुष्मात् । रोदसी इति । अभ्यसेताम् । |
| नृम्णस्य मह्ना स जनास इन्द्रः ।।१।। | नृम्णस्य । मह्ना । सः । जनासः । इन्द्रः ।।१।। |

ಅನುವಾದ :

ಜನಿಸಿದ ಕೂಡಲೆ ಯಾರು ಬಲದಲ್ಲಿ ಇತರ ದೇವತೆಗಳನ್ನು ಮೀರಿಸಿದ ಪ್ರಥಮ ಪ್ರಾಜ್ಞ ದೇವತೆಯೋ, ಯಾರ ಪರಾಕ್ರಮದ (ನೃಮ್ಣಸ್ಯ) ಮಹಿಮೆಯಿಂದ, ಉಗ್ರಬಲದಿಂದ ದ್ಯಾವಾಪೃಥಿವಿಗಳು ಕಂಪಿಸಿದವೋ, ಜನರೇ, ಅವನು ಇಂದ್ರ!

**ಟಿಪ್ಪಣಿ :** एव – ಇದು ಅಂತೋದಾತ್ತ – एवादीनामन्तः | (ಫಿಟ್‌ಸೂತ್ರ, 82).

प्रथमः – देवानां प्रधानभूतः, ದೇವತೆಗಳಲ್ಲಿ ಪ್ರಮುಖನು (ಸಾಯಣ); "chief" (ಮ್ಯಾಕ್‌ಡೋನೆಲ್).

मनस्वान् – मनस्विनाम् अग्रगण्यः, ಜ್ಞಾನಿಗಳಲ್ಲಿ ಮೊದಲಿಗನು; "the wise" (ಮ್ಯಾಕ್‌ಡೋನೆಲ್). ಪದಪಾಠದಲ್ಲಿ पवित्रवान् ಎಂಬಲ್ಲಿ वान् (मतुप्) ಪ್ರತ್ಯಯವನ್ನು ಬೇರ್ಪಡಿಸಿದಂತೆ ಇಲ್ಲಿ वान् ಪ್ರತ್ಯಯವನ್ನು ಬೇರ್ಪಡಿಸಿಲ್ಲ . ಗಮನಿಸಿ.

क्रतुना - वृत्रवधादिलक्षणेन स्वकीयेन कर्मणा, ವೃತ್ರವಧೆ ಮುಂತಾದ ತನ್ನ ಕ್ರಿಯೆಯಿಂದ, "In power", ಸಾಮರ್ಥ್ಯದಲ್ಲಿ (ಮ್ಯಾಕ್‌ಡೋನೆಲ್).

पर्यभूषत् - परि +अभूषत्, ಇದನ್ನು ಸಾಯಣರು ಎರಡು ರೀತಿಯಲ್ಲಿ ವಿವರಿಸುತ್ತಾರೆ - (1) रक्षकत्वेन पर्यग्रहीत्, ರಕ್ಷಕನಾಗಿ ಸುತ್ತುವರೆದನು, ಮತ್ತು (2) पर्यभवत्, अत्यक्रामत्, ಮೀರಿಸಿದ. ಮೊದಲನೇ ಸಂದರ್ಭದಲ್ಲಿ ಅದು परि + भूष् ಅಲಂಕರಿಸು, लङ्, ಪ್ರ.ಪು.,ಏ.ವ., ಎರಡನೇ ಸಂದರ್ಭದಲ್ಲಿ ಅದು परि + भू - ಮೀರಿಸುವುದು, लङ् ಪ್ರ.ಉ.,ಏ.ವ., क्स (स = ष) ವೈಕಲ್ಪಿಕವಾಗಿ ಬಂದಿದೆ, ಎಂದು ಇಟ್ಟುಕೊಳ್ಳಬೇಕು. ಮ್ಯಾಕ್‌ಡೋನೆಲ್ ಎರಡನೆ ಅರ್ಥವನ್ನು ಅನುಸರಿಸಿದ್ದಾರೆ. पर्यभूषत् ಎಂಬುದು तिङन्तोत्तरपद समास | ಇಂತಹ ಸಮಾಸ ವೇದದಲ್ಲಿ ಮಾತ್ರ. ಇದನ್ನು सह सुपा (ಪಾ. 2.1.3) ಸೂತ್ರದಲ್ಲಿ ಯೋಗವಿಭಾಗದಿಂದ सह ಎಂಬುದನ್ನು ತೆಗೆದುಕೊಂಡು ಸಮರ್ಥಿಸಿದ್ದಾರೆ. ಸಾಮಾನ್ಯವಾಗಿ ಉಪಸರ್ಗವು यत् ಶಬ್ದದ ರೂಪಗಳು ಮತ್ತು ಇತರ ಕೆಲವು ನಿಪಾತಗಳ ಸಂಬಂಧದಿಂದ ನಿಘಾತ ಪ್ರತಿಷೇಧವನ್ನು ಹೊಂದಿದ ಕ್ರಿಯಾಪದಗಳೊಂದಿಗೆ ಸಮಾಸವನ್ನು ಹೊಂದುತ್ತದೆ. ಇಲ್ಲಿ ಕ್ರಿಯಾಪದಕ್ಕೆ यत् ಶಬ್ದದ ರೂಪ यः ಎಂಬುದರ ಸಂಬಂಧದಿಂದ ನಿಘಾತಪ್ರತಿಷೇಧವನ್ನು ಹೊಂದಿದೆ यद्वृत्तान्नित्यम् | (ಪಾ. 8.1.66). ಹೀಗೆ ಸೋದಾತ್ತವಾದ ಕ್ರಿಯಾಪದದೊಂದಿಗೆ ಸಮಸ್ತವಾದ ಉಪಸರ್ಗವು ತನ್ನ ಪ್ರಕೃತಿಸ್ವರವನ್ನು ಕಳೆದುಕೊಂಡು ನಿಘಾತವನ್ನು ಹೊಂದುತ್ತದೆ - तिङि चोदात्तवति | (ಪಾ. 8.1.71).

शुष्मात् - शरीरात्, बलात् (ಸಾಯಣ); "vehemence" (ಮ್ಯಾಕ್‌ಡೋನೆಲ್).

रोदसी - ಇದು द्यावापृथिवी ಎಂಬ ದೇವತಾದ್ವಂದ್ವದ ಪರ್ಯಾಯ ಪದ. ಇದರ ಅಂತ್ಯವರ್ಣವು (ई) ಪ್ರಗೃಹ್ಯ - ईदूदेद्द्विवचनं प्रगृह्यम् | (ಪಾ. 1.1.11). ಅದು ಪ್ರಗೃಹ್ಯವೆಂದು ಸೂಚಿಸಲು ಪದಪಾಠದಲ್ಲಿ इतिकरण ಬಂದಿದೆ. रोदस्यौ॰ रोदसी - पूर्वसवर्णदीर्घ - सुपां सुलुक् --- | (ಪಾ. 7.1.39).

अभ्यसेताम् - भ्यस् ಭಯಪಡುವುದು, लङ्, ಪ್ರ.ಪು.,ದ್ವಿ.ವ., यस्य ಎಂಬ यत् ಶಬ್ದದ ರೂಪದೊಂದಿಗೆ ಸಂಬಂಧವಿರುವುದರಿಂದ ಕ್ರಿಯಾಪದವು ನಿಘಾತಪ್ರತಿಷೇಧವನ್ನು ಹೊಂದಿದೆ - यद्वृत्तान्नित्यम् | (ಪಾ. 8.1.66).

नृम्णस्य - सेनालक्षणस्य बलस्य, ಸೈನ್ಯರೂಪದ ಬಲದ; "Valour" ಪ್ರತಾಪ (ಮ್ಯಾಕ್‌ಡೋನೆಲ್).

स जनास इन्द्रः - ಈ ಮಂತ್ರ ಮತ್ತು ಮುಂದಿನ ಹದಿಮೂರು ಮಂತ್ರಗಳ

ಕೊನೆಯಲ್ಲಿ ಇದರ ಪುನರಾವರ್ತನೆಯಿದೆ. "ಜನರೇ, ಅವನು ಇಂದ್ರ". जनासः – अ, आ ಕಾರಾಂತ ಶಬ್ದಗಳಿಗೆ ಪ್ರ.ವಿ.,ಬ.ವ., ಪ್ರತ್ಯಯ जस् ಬಂದಾಗ, ಆ ಪ್ರತ್ಯಯಕ್ಕೆ असुक् ಬರುತ್ತದೆ – आज्जसेरसुक् | (ಪಾ. 7.1.50).ಇದು ಆಮಂತ್ರಿತ ಪದ. ಪಾದದ ಆದಿಯಲ್ಲಿ ಬರದಿದ್ದಾಗ ಆಮಂತ್ರಿತಪದವು ಎಂಟನೆ ಅಧ್ಯಾಯದ आमन्त्रितस्य च | (ಪಾ. 8.1.19) ಪ್ರಕಾರ ನಿಘಾತಸ್ವರವನ್ನು ಹೊಂದುತ್ತದೆ.

## 1.4.2.(ii) यः पृथिवीं व्यथमानाम्, इत्यादि

| ಸಂಹಿತಾಪಾಠ | ಪದಪಾಠ |
|---|---|
| यः पृथिवीं व्यथमानामदृंहद् | यः। पृथिवीम्। व्यथमानाम्। अदृंहत्। |
| यः पर्वतान्प्रकुपिताँ अरम्णात्। | यः। पर्वतान्। प्रऽकुपितान्। अरम्णात्। |
| यो अन्तरिक्षं विममे वरीयो | यः। अन्तरिक्षम्। विऽममे। वरीयः। |
| यो द्यामस्तभ्नात्स जनास इन्द्रः।।२।। | यः। द्याम्। अस्तऽभ्नात्। सः। जनासः। इन्द्रः।।२।। |

ಅನುವಾದ :

ಯಾರು ಅದುರುತ್ತಿರುವ ಭೂಮಿಯನ್ನು ಸ್ಥಿರಗೊಳಿಸಿದನೋ ಕ್ಷುಬ್ಧ ಪರ್ವತಗಳನ್ನು ನಿಯಂತ್ರಿಸಿದನೋ, ವಿಸ್ತೃತವಾದ ಅಂತರಿಕ್ಷವನ್ನು ಅಳತೆಮಾಡಿದನೋ, ಸ್ವರ್ಗಕ್ಕೆ ಬೆಂಬಲವಿತ್ತನೋ, ಜನರೇ, ಅವನು ಇಂದ್ರ!

**ಟಿಪ್ಪಣಿ :** व्यथमानाम् – व्यथ् ಅಲುಗಾಡುವುದು, शानच् ಪ್ರತ್ಯಯಾಂತ ವರ್ತಮಾನ ಕೃದಂತ. पृथिवीम् ಎಂಬುದಕ್ಕೆ ವಿಶೇಷಣ.

अदृंहत् – दृढामकरोत्, ದೃಢಗೊಳಿಸಿದನು (ಸಾಯಣ); दृह – ಬೆಳೆಯುವುದು, लङ्, ಪ್ರ.ಪು.,ಏ.ವ. ಸ್ವರಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

प्रकुपितान् – इतस्ततः चलितान्, ಅತ್ತಿತ್ತ ಚಲಿಸುತ್ತಿರುವ, पर्वतान् ಎಂಬುದಕ್ಕೆ ವಿಶೇಷಣ. प्र + कुप् – ಚಲಿಸುವುದು, प्र ಉಪಸರ್ಗವು क्तान्त (कुपित) ಪರವಾದಾಗ ತನ್ನ ಸ್ವರವನ್ನು ಉಳಿಸಿಕೊಳ್ಳುತ್ತದೆ – गतिरनन्तरः | (ಪಾ. 6.2.49).

अरम्णात् – रम् ಆನಂದಿಸುವುದು, ಶಾಂತಗೊಳ್ಳುವುದು, लङ्, ಪ್ರ.ಪು.,ಏ.ವ.,

ಒಂಬತ್ತನೆಯ ಗಣದ श्ना (ना) ವಿಕರಣ ಬಂದಿದೆ. ಪ್ರೇರಣಾರ್ಥವನ್ನು ಹೊಂದಿದೆ, ಆದರೆ णिच् ಬಂದಿಲ್ಲ. ಸ್ವರಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

विममे - वि + मा ಅಳತೆಮಾಡು, लिट्, ಪ್ರ.ಪು.,ಏ.ವ., ಉಪಸರ್ಗದ ಸ್ವರ ಮುಂತಾದವುಗಳಿಗೆ ಒಂದನೇ ಮಂತ್ರದಲ್ಲಿ पर्यभूषत् ಮೇಲಿನ ಟಿಪ್ಪಣಿ ನೋಡಿ.

वरीयः - ವಿಸ್ತಾರವಾಗಿ, विममे ಜೊತೆಗೆ ಕ್ರಿಯಾವಿಶೇಷಣ.

अस्तभ्नात् - स्तम्भ् -ನಿಲ್ಲಿಸುವುದು, लङ्, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ (ಸ್ವರದ ವಿಷಯಕ್ಕೆ)

स जनास, इन्द्रः - ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(iii) यो हत्वाहिमरिणात्, इत्यादि

| ಸಂಹಿತಾಪಾಠ | ಪದಪಾಠ |
|---|---|
| यो हत्वाहिमरिणात्सप्त सिन्धून्। | यः। हत्वा। अहिम्। अरिणात्। सप्त। सिन्धून्। |
| यो गा उदाजदपधा वलस्य। | यः। गाः। उत्ऽआजत्। अपऽधा। वलस्य। |
| यो अश्मनोरन्तरग्निं जजान | यः। अश्मनोः। अन्तः। अग्निम्। जजान। |
| संवृक्समत्सु स जनास इन्द्रः।।३।। | सम्ऽवृक्। समत्ऽसु। सः। जनासः। इन्द्रः।।३।। |

ಅನುವಾದ :

ಯಾರು ಸರ್ಪವನ್ನು ವಧಿಸಿ ಸಪ್ತನದಿಗಳನ್ನೂ ಹೊರಬಿಟ್ಟನೋ, ವಲನೆಂಬ ರಾಕ್ಷಸನ ಸೆರೆಯನ್ನು ತೆರೆಯುವ ಮೂಲಕ ಗೋವುಗಳನ್ನು ಬಿಡಿಸಿದನೋ, ಎರಡು ಬಂಡೆಗಳ ಮಧ್ಯೆ ಅಗ್ನಿಯನ್ನು ಉತ್ಪತ್ತಿ ಮಾಡಿದನೋ, ಜನರೇ, ಅವನು ಇಂದ್ರ!

ಟಿಪ್ಪಣಿ : अहिम् - मेघम् (ಸಾಯಣ); ಹಾವು, ಸರ್ಪ (ಮ್ಯಾಕ್‌ಡೋನೆಲ್). ಇಲ್ಲಿ अहि ಎಂದರೆ ಸರ್ಪಾಕಾರದ ವೃತ್ರ.

अरिणात् - प्रैरयत्, ಹರಿಯುವಂತೆ ಮಾಡಿದನು, री - ಹರಿಯುವುದು, लङ्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

सप्त सिन्धून् – (1) सर्पणशीला स्यन्दनशीलाः आपः, ಹರಿಯುವ ನೀರು; (2) सप्त गङ्गयमुनाद्याः मुख्याः नदीः, ಗಂಗಾ, ಯಮುನಾ ಮುಂತಾದ ಏಳು ಮುಖ್ಯ ನದಿಗಳು (ಸಾಯಣ); ಪಂಜಾಬಿನ ಏಳು ನದಿಗಳು (ಮ್ಯಾಕ್‌ಡೋನೆಲ್).

गाः – गो ಶಬ್ದದ ದ್ವಿ.ವಿ.,ಬ.ವ., ರೂಪ.

उदाजत् – उत् + अज् ಬಿಡಿಸುವುದು, लङ्, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ पर्यभूषत् ಮೇಲಿನ ಟಿಪ್ಪಣಿ ನೋಡಿ.

अपधा – अप + धा + ಭಾವಾರ್ಥದಲ್ಲಿ अन् (अ); ಪಂಚಮೀವಿಭಕ್ತಿ ಪ್ರತ್ಯಯಕ್ಕೆ आ ಬಂದಿದೆ – सुपां सुलुक्पूर्वसवर्णाच्छेयाडाड्यायाजालः | (ಪಾ. 7.1.39); ತೆರೆಯುವಿಕೆಯಿಂದ. ನಿರುಕ್ತದ ವ್ಯಾಖ್ಯಾನಕಾರರಾದ ದುರ್ಗಾಚಾರ್ಯರು ಇದನ್ನು ತೃತೀಯಾಂತವೆಂದು (अपधानेन) ಗ್ರಹಿಸುತ್ತಾರೆ, ತೆರೆಯುವ ಮೂಲಕ.

वलस्य – वलनामकस्य असुरस्य, ವಲ ಎಂಬ ಹೆಸರಿನ ರಾಕ್ಷಸನಿಂದ (ಸಾಯಣ).

अश्मनोः – अस्नुते व्याप्नोति अन्तरिक्षमिति अश्मा मेघः | तयोः, अश्मा ಎಂದರೆ ಮೋಡ, ಎರಡು ಮೋಡಗಳ ಮಧ್ಯೆ. ಅಗ್ನಿಯೆಂದರೆ "ಮಿಂಚು". ಮ್ಯಾಕ್‌ಡೋನೆಲ್ "between two rocks", ಎರಡು ಬಂಡೆಗಳ ಮಧ್ಯೆ ಎಂದು ಅರ್ಥಮಾಡುತ್ತಾರೆ, ಬಂಡೆ ಅಂದರೆ ಇಲ್ಲಿ ಮೇಘವೇ.

जजान – जन् ಹುಟ್ಟುವುದು (ವೈದಿಕಧಾತು), लिट्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

संवृक् – सम् + वृज् ನಿವಾರಿಸು, सम् + वृज् + क्विप्, संवृज् ಎಂದರೆ ಗೆದ್ದವನು. वृज् ಎಂಬುದು ಕೃದಂತ, सम् ಉಪಸರ್ಗ, ಉಪಸರ್ಗ (ಗತಿ), ಕಾರಕ ಅಥವಾ ಉಪಪದದ ಅನಂತರ ಕೃದಂತ ತನ್ನ ಪ್ರಕೃತಿ ಸ್ವರವನ್ನು ಉಳಿಸಿಕೊಳ್ಳುತ್ತದೆ – गतिकारकोपदात् कृत् | (ಪಾ. 6.2.139).

समत्सु – समद्, ಸ.ವಿ.,ಬ.ವ., संभक्षयन्ति योद्धृणाम् आयूंषि इति समदः संग्रामाः, तेषु, ಯೋದ್ಧಾರರ ಆಯುಷ್ಯಗಳನ್ನು ಭಕ್ಷಿಸುತ್ತವೆಯೆಂದು समदः, ಅಂದರೆ ಸಂಗ್ರಾಮಗಳು (ಸಾಯಣ).

स जनास इन्द्रः – ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(iv) येनेमा विश्वा च्यवना, इत्यादि

| ಸಂಹಿತಾಪಾಠ | ಪದಪಾಠ |
|---|---|
| येनेमा विश्वा च्यवना कृतानि | येन। इमा। विश्वा। च्यवना। कृतानि। |
| यो दासं वर्णमधरं गुहाकः। | यः। दासम्। वर्णम्। अधरम्। गुहा। अकरित्यकः। |
| श्वघ्नीव यो जिगीवाँ लक्षमादद् | श्वघ्नीऽइव। यः। जिगीवान्। लक्षम्। आदत्। |
| अर्यः पुष्टानि स जनास इन्द्रः।।४।। | अर्यः। पुष्टानि। सः। जनासः। इन्द्रः।।४।। |

**ಅನುವಾದ :**

ಯಾರಿಂದ ಎಲ್ಲ ವಸ್ತುಗಳು ಅದೃಢಗೊಳಿಸಲ್ಪಟ್ಟವೋ, ಯಾರು ದಾಸವರ್ಣವನ್ನು ನಿಕೃಷ್ಟವಾಗಿ (ಅಧರಂ) ಅದೃಶ್ಯವಾಗುವಂತೆ (ಗುಹಾ) ಮಾಡಿದನೋ (ಅಕಃ), ಯಾರು ವಿಜಯಿಯಾದ ಜೂಜುಕೋರನು ಪಣವಾಗಿಟ್ಟಿದ್ದನ್ನು ಹೇಗೋ ಹಾಗೆ, ಶತ್ರುವಿನ ಐಶ್ವರ್ಯವನ್ನು ವಶಪಡಿಸಿಕೊಳ್ಳುವನೋ, ಜನರೇ, ಅವನು ಇಂದ್ರ!

**ಟಿಪ್ಪಣಿ :** इमा विश्वा च्यवना कृतानि – इमानि विश्वानि च्यवनानि कृतानि, ನಪುಂಸಕಲಿಂಗಾಂತ ಶಬ್ದಗಳಿಗೆ ಪ್ರ.ವಿ.,ಬ.ವ., ಪ್ರತ್ಯಯ जस् ಮತ್ತು ದ್ವಿ.ವಿ.,ಬ.ವ., ಪ್ರತ್ಯಯ शस्ಗಳಿಗೆ ಬದಲಾಗಿ शि ಬರುವುದು ವೇದದಲ್ಲಿ ವೈಕಲ್ಪಿಕ – शेश्छन्दसि बहुलम्। (ಪಾ. 6.1.70). च्यवना ಎಂದರೆ नश्वराणि, ಆದರೆ च्यवना कृतानि ಎಂದರೆ ಸಾಯಣರು स्थिरीकृतानि ಎಂದು ಅರ್ಥಮಾಡುತ್ತಾರೆ. ಅವರ ಪ್ರಕಾರ ಅಸ್ಥಿರವಾದ (ನಶ್ವರವಾದ ಲೋಕಗಳನ್ನು ಸ್ಥಿರಗೊಳಿಸಿದನು ಎಂದರ್ಥ.).

दासं वर्णम् – शूद्रादिकम् (ಸಾಯಣ); "Dasa colour" (ಮ್ಯಾಕ್‌ಡೋನೆಲ್). ಶೂದ್ರಾದಿ ಎಂಬ ಅರ್ಥ ಅರ್ವಾಚೀನ ಕಾಲಕ್ಕೆ ಸೇರಿದ್ದು. ಆಗ ದಾಸರು ಅಂದರೆ ಯಜ್ಞ-ಯಾಗಾದಿಗಳನ್ನು ವಿರೋಧಿಸುತ್ತಿದ್ದ, ಯಜ್ಞವನ್ನು ಕೆಡಿಸುತ್ತಿದ್ದ ಕೆಲವು ದುಷ್ಟಶಕ್ತಿಗಳು.

गुहा अकः – गुहा ಎಂದರೆ गुहायाम् ಗೂಢಸ್ಥಾನದಲ್ಲಿ, ಗುಹೆಯಲ್ಲಿ, ಸ.ವಿ. ಪ್ರತ್ಯಯಕ್ಕೆ आ ಬಂದಿದೆ. ಮೂರನೇ ಮಂತ್ರದಲ್ಲಿ अपधा ಮೇಲಿನ ಟಿಪ್ಪಣಿ ನೋಡಿ. अकः – कृ ಮಾಡುವುದು, लुङ् ಪ್ರ.ಪು.,ಏ.ವ., ಇಲ್ಲಿ ವಿಸರ್ಗವು. ಮೂಲ रेफಕ್ಕೆ ಬಂದಿದೆ ಇದನ್ನು ಸೂಚಿಸಲು ಪದಪಾಠದಲ್ಲಿ अकरित्यकः ಎಂದು रेफ ಮತ್ತು इतिकरणಗಳೊಂದಿಗೆ ಕ್ರಿಯಾಪದವನ್ನು ಪುನರಾವೃತ್ತಿ ಮಾಡಿ ತೋರಿಸಿದೆ.

श्वघ्नी इव - श्वभिः मृगान् हन्तीति श्वघ्नी व्याधः, स इव, ನಾಯಿಗಳಿಂದ (श्वभिः) ಮೃಗಗಳನ್ನು ಕೊಲ್ಲುತ್ತಾನೆ ಎಂದು ಬೇಡನಿಗೆ श्वघ्नी ಎಂದು ಹೆಸರು. ಅವನ ಹಾಗೆ ಎಂದರ್ಥ. (ಸಾಯಣ). इव ಶಬ್ದದೊಂದಿಗೆ ನಿತ್ಯಸಮಾಸ, ವಿಭಕ್ತಿಲೋಪವಿಲ್ಲ, ಪೂರ್ವಪದವು ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ - इवेन नित्यसमासः विभक्त्यलोपः पूर्वपदप्रकृतिस्वरत्वं च वाच्यम्। (ವಾರ್ತಿಕ)। ಮ್ಯಾಕ್‌ಡೋನೆಲ್ ಪ್ರಕಾರ श्वघ्नी इव ಎಂದರೆ "ದ್ಯೂತಕರನಂತೆ" ಎಂದರ್ಥ.

लक्षम् - लक्ष्यम्, ಗುರಿಯನ್ನು (ಸಾಯಣ); ಪಣವನ್ನು (ಮ್ಯಾಕ್‌ಡೋನೆಲ್).

आदत् - आ + दा - ತೆಗೆದುಕೊಳ್ಳುವುದು, लुङ्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

अर्यः पुष्टानि - अरेः समृद्धानि, ವೈರಿಯ ಸಂಪತ್ತನ್ನು (ಸಾಯಣ).

स जनासः इन्द्रः - ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(v) यं स्मा पृच्छन्ति, इत्यादि

| ಸಂಹಿತಾಪಾಠ | ಪದಪಾಠ |
|---|---|
| यं स्मा पृच्छन्ति कुह सेति घोरम् | यम्। स्म। पृच्छन्ति। कुह। सः। इति। घोरम्। |
| उतेमाहुर्नैषो अस्तीत्येनम्। | उत। ईम्। आहुः। न। एषः। अस्ति। इति। एनम् |
| सो अर्यः पुष्टीर्विज इवा मिनाति | सः। अर्यः। पुष्टीः। विजःऽइव। आ। मिनाति। |
| श्रदस्मै धत्त स जनास इन्द्रः।।५।। | श्रत्। अस्मै। धत्त। सः। जनासः। इन्द्रः।।५।। |

**ಅನುವಾದ :**

ಯಾವ ಘೋರನಾದವನನ್ನು ಕುರಿತು "ಅವನೆಲ್ಲಿ?" ಎಂದು ಕೇಳುತ್ತಾರೋ ಅವನನ್ನು ಕುರಿತು "ಇವನಿಲ್ಲ" ಎಂದು ಹೇಳುತ್ತಾರೋ, ಅವನು ಶತ್ರುವಿನ ಐಶ್ವರ್ಯವನ್ನು (ಪುಷ್ಟೀಃ)

ಪಣದಂತೆ ಕ್ಷೀಣಿಸುತ್ತಾನೋ, ಅವನನ್ನು ನಂಬಿಕೊಳ್ಳಿರಿ. ಜನರೇ, ಅವನು ಇಂದ್ರ!

**ಟಿಪ್ಪಣಿ :** स्मा – ಛಂದಸ್ಸಿಗಾಗಿ ದೀರ್ಘವಾಗಿದೆ, ಪದಪಾಠದಲ್ಲಿ ಅದರ ಹ್ರಸ್ವರೂಪವು ಉಳಿದುಕೊಂಡಿದೆ.

पृच्छन्ति – प्रछ् ಕೇಳುವುದು, लट्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

सेति – सस् इति, ಛಂದೋಬದ್ಧ ಪಾದದಲ್ಲಿ सಕಾರವು ಲೋಪವಾಗಿ, ಪಾದಪೂರಣಕ್ಕಾಗಿ ಗುಣಸಂಧಿಯಾಗಿದೆ – सोऽचि लोपे चेत्पादपूरणम् | (ಪಾ. 6.1.134).

घोरम् – शत्रूणां घातकम्, ಶತ್ರುಸಂಹಾರಕ (ಸಾಯಣ).

न एष अस्ति – ಇದೇ ಅಭಿಪ್ರಾಯಕ್ಕೆ ನೋಡಿ – 'नेन्द्रो अस्तीति नेम उत्व आह' (ಋ. 8.100.3).

ईम् – ಪಾದಪೂರಣ (ಸಾಯಣ).

आहुः – ब्रू ಮಾತನಾಡುವುದು, लट्, ಪ್ರ.ಪು.,ಬ.ವ., लट್‌ನಲ್ಲಿ ब्रू ಧಾತುವಿಗೆ आह, आहतुः, आहुः, आत्थ, आहथुः ಎಂದು ಐದು ವೈಕಲ್ಪಿಕವಾದ ಆದೇಶರೂಪಗಳು – ब्रुवः पञ्चानाम् आदित आहो ब्रुवः | (ಪಾ. 3.4.84).

अर्यः – "of the niggard" (ಮ್ಯಾಕ್‌ಡೋನೆಲ್); ಹಿಂದಿನ ಮಂತ್ರದಲ್ಲಿ "of the foe" ಎಂದು ಅರ್ಥ ನೀಡಿದ್ದಾರೆ.

विज इव – ಸಾಯಣರು इव ಎಂಬುದನ್ನು एव ಎಂಬ ಅರ್ಥದಲ್ಲಿ ಗ್ರಹಿಸಿ, उद्वेजक एव सन् ಎಂದು ವಿವರಿಸಿದ್ದಾರೆ. ಹಿಂದಿನ ಮಂತ್ರದಲ್ಲಿ श्वघ्नीव ಮೇಲಿನ ಟಿಪ್ಪಣಿ ನೋಡಿ.

आ मिनाति – मी ಹಿಂಸಿಸು, लट्, ಪ್ರ.ಪು.,ಏ.ವ., ಇದು ಪ್ರಧಾನವಾಕ್ಯದ ಕ್ರಿಯಾಪದ, ಸಾಮಾನ್ಯವಾಗಿ ಉಪಸರ್ಗವು ಕ್ರಿಯಾಪದದಿಂದ ಬೇರ್ಪಟ್ಟಿರುತ್ತದೆ – व्यवहिताश्च | (ಪಾ. 1.4.82); ಅದು ತನ್ನ ಮೂಲಸ್ವರವನ್ನು ಉಳಿಸಿಕೊಳ್ಳುತ್ತದೆ (ಆದ್ಯುದಾತ್ತ, अभि ಒಂದನ್ನು ಬಿಟ್ಟು, अभि ಅಂತೋದಾತ್ತ) - उपसर्गाश्चाभिवर्जम् | (ಫಿಟ್‌ಸೂತ್ರ, 81). मिनाति ಎಂಬ ರೂಪದಲ್ಲಿ ಧಾತು (मी) ಹ್ರಸ್ವವಾಗಿದೆ – मीनातेर्निगमे | (ಪಾ. 7.3.81). ಅದು ಪಾದದ ಆದಿಯಲ್ಲಿಲ್ಲದ ಪ್ರಧಾನ ವಾಕ್ಯ ಕ್ರಿಯಾಪದವಾದ್ದರಿಂದ ನಿಘಾತಸ್ವರವನ್ನು ಹೊಂದುತ್ತದೆ – तिङतिङः | (ಪಾ. 8.1.28).

धत्त - धा ಧಾರಣ, ಪೋಷಣ, लोट्, ಮ.ಪು.,ಬ.ವ., ಇದಕ್ಕೂ ನಿಘಾತಸ್ವರ, ಮೇಲಿನ मिनाति ಎಂಬುದರಂತೆ.

## 1.4.2.(vi) यो रध्रस्य चोदिता, इत्यादि

| ಸಂಹಿತಾಪಾಠ | ಪದಪಾಠ |
|---|---|
| यो रध्रस्य चोदिता यः कृशस्य | यः। रध्रस्य। चोदिता। यः। कृशस्य। |
| यो ब्रह्मणो नाधमानस्य कीरेः। | यः। ब्रह्मणः। नाधमानस्य। कीरेः। |
| युक्तग्राव्णो योऽविता सुशिप्रः | युक्तऽग्राव्णः। यः। अविता। सुऽशिप्रः। |
| सुतसोमस्य स जनास इन्द्रः।।६।। | सुतऽसोमस्य। सः। जनासः। इन्द्रः।।६।। |

ಅನುವಾದ :

ಯಾರು ಧನಿಕನ, ದರಿದ್ರನ, ಸ್ತುತಿಸುವ, ಯಾಚಿಸುವ ಬ್ರಾಹ್ಮಣನ ಪ್ರೇರಕನೋ, ಚಂದುಟಿಯುಳ್ಳ, ಯಾರು ಕಲ್ಲುಗಳನ್ನು ತೊಡಗಿಸಿದನೋ, ಸೋಮವನ್ನು ಹಿಂಡಿರುವವನ ಸಹಾಯಕನೋ, ಜನರೇ, ಅವನು ಇಂದ್ರ!

ಟಿಪ್ಪಣಿ : रध्रस्य - समृद्धस्य ಸಿರಿವಂತನ (ಸಾಯಣ).

चोदिता - धनानां प्रेरयिता, ಸಂಪತ್ತನ್ನು ನೀಡುವವನು; "furtherer" ಹೆಚ್ಚು ಮಾಡುವವನು (ಮ್ಯಾಕ್‌ಡೋನೆಲ್).

कृशस्य - दरिद्रस्य (ಸಾಯಣ).

ब्रह्मणः - ब्राह्मणस्य (ಸಾಯಣ).

नाधमानस्य - नाथ् ಬೇಡುವುದು, शानच् ಪ್ರತ್ಯಯಾಂತ ವರ್ತಮಾನ ಕೃದಂತ, यजमानस्य (ಸಾಯಣ).

कीरेः - करोतेः, कीर्तयतेर्वा, ಹಾಡುವವನು, ಕವಿ.

युक्तग्राव्णः - युक्तौ ग्रावाणौ येन सः युक्तग्रावा, तस्य, ಬಹುವ್ರೀಹಿಸಮಾಸ, ಇದರಲ್ಲಿ ಪೂರ್ವಪದವು ತನ್ನ ಪ್ರಕೃತಿಸ್ವರವನ್ನು ಉಳಿಸಿಕೊಳ್ಳುತ್ತದೆ - बहुव्रीहौ प्रकृत्या पूर्वपदम् । (ಪಾ. 6.2.1).

**योऽविता** – ಪೂರ್ವರೂಪಸಂಧಿಯಿಂದ ಲುಪ್ತವಾದ ಅನುದಾತ್ತ अಕಾರವು ತನ್ನ ಸ್ವರವನ್ನು ಹಿಂದಿನ ಉದಾತ್ತವರ್ಣದ ಮೇಲೆ ಚೆಲ್ಲಿದೆ, ಉದಾತ್ತ + ಅನುದಾತ್ತಗಳ ಮೇಲನವಾಗಿ ಸ್ವರಿತ. ಇದನ್ನು ಅಭಿನಿಹಿತಸ್ವರಿತವೆಂದು ಕರೆಯುತ್ತಾರೆ. **स्वरितो वाऽनुदात्ते पदादौ |** (ಪಾ. 8.2.6).

**सुशिप्रः** – **शोभनहनुः, सुशीर्षको वा**, ಸುಂದರ ಗದ್ದವುಳ್ಳವನು ಅಥವಾ ಸುಂದರ ಶಿರವುಳ್ಳವನು (ಸಾಯಣ); ಚೆಂದುಟಿಯುಳ್ಳವನು (fair-lipped) (ಮ್ಯಾಕ್‌ಡೋನೆಲ್). **शोभनौ शिप्रौ यस्य सः**, ಬಹುವ್ರೀಹಿಸಮಾಸ, ಇದರಲ್ಲಿ **सु** ಅನಂತರ ಉತ್ತರಪದವು ಅಂತೋದಾತ್ತವಾಗಿರುತ್ತದೆ – **नञ्सुभ्याम् |** (ಪಾ. 6.2.172).

**सुतसोमस्य** – **सुतः सोमः येन सः, तस्य**, ಬಹುವ್ರೀಹಿ, ಸ್ವರದ ವಿಷಯದಲ್ಲಿ ಮೇಲೆ **युक्तग्राव्णः** ಮೇಲಿನ ಟಿಪ್ಪಣಿ ನೋಡಿ.

**स जनासः इन्द्रः** – ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(vii) यस्याश्वासः प्रदिशि, इत्यादि

| ಸಂಹಿತಾಪಾಠ | ಪದಪಾಠ |
|---|---|
| यस्याश्वा॑सः प्रदिशि यस्य गावो | यस्य॑। अश्वा॑सः। प्रऽदिशि॑। यस्य॑। गाव॑ः। |
| यस्य ग्रामा यस्य विश्वे रथा॑सः। | यस्य॑। ग्रामा॑ः। यस्य॑। विश्वे॑। रथा॑सः। |
| यः सूर्यं॑ य उषसं॑ जजान | यः। सूर्य॑म्। यः। उषस॑म्। जजान॑। |
| यो अपां नेता स जनास इन्द्रः॥७॥ | यः। अपाम्। नेता। सः। जनासः। इन्द्रः॥७॥ |

ಅನುವಾದ :

ಕುದುರೆಗಳು, ಗೋವುಗಳು, ಗ್ರಾಮಗಳು, ಎಲ್ಲ ರಥಗಳು ಯಾರ ಅಧೀನವೋ (ಪ್ರದಿಶಿ), ಯಾರು ಸೂರ್ಯ ಉಷಸ್ಸುಗಳನ್ನು ಸೃಷ್ಟಿಸಿದನೋ, ಯಾರು ನೀರುಗಳ ಅನುಶಾಸನಕನೋ, ಜನರೇ, ಅವನು ಇಂದ್ರ!

ಟಿಪ್ಪಣಿ : **यस्य** – **सर्वान्तर्यामितया वर्तमानस्य**, ಎಲ್ಲರ ಅಂತರ್ಯಾಮಿಯಾಗಿರುವಂತಹ ಅವನ (ಸಾಯಣ).

अ[illegible] – स जनासः इन्द्रः – ಒಂದನೇ ಮಂತ್ರದಲ್ಲಿ जनास ಮೇಲಿನ ಟಿಪ್ಪಣಿ ನೋಡಿ.

प्रदिशि – प्रदेशने, अनुशासने (ಸಾಯಣ).

ग्रामाः – ग्रसन्तेऽत्रेति, ग्रसेरा च (ಉಣಾದಿ, 1.140); ग्राम ಎಂದರೆ ಜನಪದ; "clans", ಜನಾಂಗಗಳು (ಮ್ಯಾಕ್‌ಡೋನೆಲ್).

रथासः – ಒಂದನೇ ಮಂತ್ರದಲ್ಲಿ जनासः ಮೇಲಿನ ಟಿಪ್ಪಣಿ ನೋಡಿ.

जजान – ವೈದಿಕ ಧಾತು जन्, लिट्, ಪ್ರ.ಪು.,ಏ.ವ., ಮ್ಯಾಕ್‌ಡೋನೆಲ್ ಅದನ್ನು ವರ್ತಮಾನದ ಅರ್ಥದಲ್ಲಿ ತೆಗೆದುಕೊಂಡಿದ್ದಾರೆ, ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ. (ಸ್ವರದ ವಿಷಯಕ್ಕೆ)

अपां नेता – मेघभेदनद्वारा अपां नेता प्रेरकः, ಮೋಡವನ್ನು ಸೀಳುವ ಮೂಲಕ ನೀರಿನ ಪ್ರೇರಕ (ಹರಿಯುವಂತೆ ಮಾಡುವವನು).

स जनास इन्द्रः – ಒಂದನೇ ಮಂತ್ರದ ಟಿಪ್ಪಣಿ ನೋಡಿ.

---

## 1.4.2.(viii) यं क्रन्दसी संयती, इत्यादि

---

| ಸಂಹಿತಾಪಾಠ | ಪದಪಾಠ |
|---|---|
| यं क्रन्दसी संयती विह्वयेते | यम्। क्रन्दसी इति। संयती इति सम्ऽयती विह्वयेते इति विह्वयेते। |
| परेऽवर उभया अमित्राः। | परे। अवरे। उभयाः। अमित्राः। |
| समानं चिद्रथमातस्थिवांसा | समानम्। चित्। रथम्। आतिस्थिऽवांसा। |
| नाना हवेते स जनास इन्द्रः।।८।। | नाना। हवेते इति। सः। जनासः। इन्द्रः।।८।। |

**ಅನುವಾದ :**

ಎರಡು ಸೇನೆಗಳೂ ಒಟ್ಟು ಸೇರಿ ಆ ಉಭಯ ಶತ್ರುಗಳು, ಸಮೀಪದವರು ಹಾಗೂ

ದೂರದಲ್ಲಿರುವವರು, ಯಾರನ್ನು ವಿವಿಧವಾಗಿ ಆಹ್ವಾನಿಸುತ್ತಾರೋ (ವಿಹ್ವಯೇತೆ); ಇಬ್ಬರೂ ಅದೇ ರಥವನ್ನು (ಸಮಾನಂ ಚಿತ್ ರಥಂ) ಏರಿದವರಾಗಿ (ಯಾರನ್ನು) ಬೇರೆ ಬೇರೆಯಾಗಿ ಆಹ್ವಾನಿಸುತ್ತಾರೋ, ಜನರೇ, ಅವನು ಇಂದ್ರ!

**ಟಿಪ್ಪಣಿ :** क्रन्दसी संयती विह्वयेते – ಒಂದನೇ ಮಂತ್ರದಲ್ಲಿ रोदसी ಮೇಲಿನ ಟಿಪ್ಪಣಿ ನೋಡಿ (ಪ್ರಗೃಹ್ಯತ್ವ ಮತ್ತು ಪದಪಾಠದಲ್ಲಿ ಇತಿಕರಣ) – क्रन्दसी – ಎದುರುಬದುರು ನಿಂತು ಶಬ್ದಮಾಡುತ್ತಿರುವ ಸೇನೆಗಳು, ಒಂದು ಮನುಷ್ಯರದು ಇನ್ನೊಂದು ದೇವತೆಗಳದು (ಸಾಯಣ); "battle-arrays" ಯುದ್ಧಭೂಮಿಯಲ್ಲಿ ನಿಂತ ಸೇನೆಗಳು (ಮ್ಯಾಕ್‌ಡೋನೆಲ್). संयती – परस्परं संगच्छन्त्यौ, ಪರಸ್ಪರ ಎದುರಾಗಿರುವ (ಸಾಯಣ); "coming together" ಜೊತೆಗೆ ಸೇರಿದ (ಮ್ಯಾಕ್‌ಡೋನೆಲ್); सम् + इ + शतृ, ವರ್ತಮಾನ ಕೃದಂತ. विह्वयेते – वि + ह्वे – ವಿವಿಧವಾಗಿ ಕರೆಯುವುದು, लट्, ಪ್ರ.ಪು.,ದ್ವಿ.ವ., ಒಂದನೇ ಮಂತ್ರದಲ್ಲಿ पर्यभूषत् ಎಂಬುದರ ಮೇಲಿನ ಟಿಪ್ಪಣಿ ನೋಡಿ.

परे अवरे – उत्कृष्टाः, अधमाश्च, ಉತ್ತಮರು, ಅಧಮರು (ಸಾಯಣ); "The farther and the nearer", ದೂರದವರು ಮತ್ತು ಹತ್ತಿರದವರು (ಮ್ಯಾಕ್‌ಡೋನೆಲ್).

अमित्राः – ಶತ್ರುಗಳು, ರೂಪದಲ್ಲಿ ಬಹುವ್ರೀಹಿ, न विद्यते मित्रं येषां ते। नञ् ಅನಂತರ ಬಹುವ್ರೀಹಿಯಲ್ಲಿ मित्र ಮುಂತಾದವು ಆದ್ಯುದಾತ್ತ ಆಗುತ್ತವೆ – नञो जरमरमित्रमृता। (ಪಾ. 6.1.116).

आतस्थिवांसा – आतस्थिवांसौ, आ + स्था + क्वसु, आतस्थिवांस् ಶಬ್ದದ ಪ್ರ.ವಿ.,ದ್ವಿ.ವ., औंಗೆ आ ಬರುತ್ತದೆ – सुपां सु लुक् --- । (ಪಾ. 7.1.39). ಮೂರನೇ ಮಂತ್ರದಲ್ಲಿ अपधा ಮೇಲಿನ ಟಿಪ್ಪಣಿ ನೋಡಿ. ಇಲ್ಲಿ ಒಂದೇ ರಥವನ್ನು ಏರಿದವರು ಯೋಧ (ರಥಿಕ) ಮತ್ತು ಸೂತ (ರಥಚಾಲಕ).

स जनास इन्द्रः – ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(ix) यस्मान्न ऋते विजयन्ते, इत्यादि

| ಸಂಹಿತಾಪಾಠ | ಪದಪಾಠ |
|---|---|
| यस्मान्न ऋते विजयन्ते जनासो | यस्मात्। न। ऋते। विऽजयन्ते। जनासः। |

यं युध्यमाना अवसे हवन्ते। यम्। युध्यमानाः। अवसे। हवन्ते।
यो विश्वस्य प्रतिमानं बभूव यः। विश्वस्य। प्रतिऽमानम्। बभूव।
यो अच्युतच्युत्स जनास इन्द्रः॥९॥ यः। अच्युतऽच्युत्। सः। जनासः। इन्द्रः॥९॥

ಅನುವಾದ :

ಯಾರ ವಿನಾ ಜನರು ವಿಜಯಿಗಳಾದರೋ, ಹೋರಾಡುತ್ತಾ ಯಾವನನ್ನು ಸಹಾಯಕ್ಕೆ ಆಹ್ವಾನಿಸುತ್ತಾರೋ, ಯಾರು ಎಲ್ಲಕ್ಕೂಸಮನಾದನೋ, ಅಚಲವಾದ್ದನ್ನು ಚಲಿಸಬಲ್ಲನೋ, ಜನರೇ, ಅವನು ಇಂದ್ರ!

ಟಿಪ್ಪಣಿ : यस्मान्न ऋते - ಲೌಕಿಕ ಸಂಸ್ಕೃತದಲ್ಲಿಯಂತೆ ऋते ಜೊತೆಯಲ್ಲಿ ಪಂಚಮ್ಯಂತ ಬರುತ್ತದೆ - अन्यारादितरर्तेदिक्शब्दाञ्चूत्तरपदाजाहियुक्ते | (ಪಾ. 2.3.39).

विजयन्ते - वि + जि ಗೆಲ್ಲುವುದು, लट्, ಪ್ರ.ಪು.,ಬ.ವ., वि, पर ಎಂಬ ಉಪಸರ್ಗಗಳ ಅನಂತರ जि ಧಾತುವು ಆತ್ಮನೇಪದಿಯಾಗುತ್ತದೆ - विपराभ्यां जेः | (ಪಾ. 1.3.19).ಒಂದನೇ ಮಂತ್ರದಲ್ಲಿ पर्यभूषत् ಮೇಲಿನ ಟಿಪ್ಪಣಿ ನೋಡಿ.

जनासः - ಒಂದನೇ ಮಂತ್ರದ ಟಿಪ್ಪಣಿಯನ್ನು ನೋಡಿ.

युध्यमानाः - युध्, ನಾಲ್ಕನೇ ಗಣದ श्यन् ವಿಕರಣ, शानच् ಪ್ರತ್ಯಯಾಂತ ವರ್ತಮಾನ ಕೃದಂತ. ಯುದ್ಧಮಾಡುತ್ತಿರುವವರು.

अवसे - ವೈದಿಕ ತುಮುನ್ನರ್ಥಕ, अव् + असेन् - तुमर्थे सेसेनसे-असेन्क्सेकसेनध्यैअध्यैन्-कध्यैकध्यैन्शध्यैशध्यैतवैतवेङ्तवेनः | (ಪಾ. 4.4.9). असेन् ಎಂಬುದು नित् ಆದ್ದರಿಂದ ಇದು ಆದ್ಯುದಾತ್ತ - नित्स्वर - ञ्नित्यादिनित्यम् | (ಪಾ. 6.1.157).

हवन्ते - ह्वे ಕರೆಯುವುದು, लट्, ಪ್ರ.ಪು.,ಬ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

प्रतिमानम् - प्रतिनिधिः (ಸಾಯಣ); "match" ಪ್ರತಿಸ್ಪರ್ಧಿ (ಮ್ಯಾಕ್‌ಡೊನೆಲ್).

बभूव - भू ಇರುವುದು, लिट्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

अच्युतच्युत् - क्षयरहितानां पर्वतादीनां च्यावयिता, ನಾಶವಿಲ್ಲದ ಪರ್ವತ ಮುಂತಾದವುಗಳನ್ನೂ ಕ್ಷಯಿಸುವಂತೆ ಮಾಡುವವನು; "who moves the immovable" ಚಲಿಸದವುಗಳನ್ನು ಚಲಿಸುವಂತೆ ಮಾಡುವವನು (ಮ್ಯಾಕ್‌ಡೋನೆಲ್).

स जनास इन्द्रः - ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(x) यः शश्वतो मह्येनो, इत्यादि

| ಸಂಹಿತಾಪಾಠ | ಪದಪಾಠ |
|---|---|
| यः शश्वतो मह्येनो दधानान् | यः। शश्वतः। महि। एनः। दधानान्। |
| अमन्यमानाञ्छर्वा जघान। | अमन्यमानान्। शर्वा। जघान। |
| यः शर्धते नानुददाति शृध्यां | यः। शर्धते। न। अनुऽददाति। शृध्याम्। |
| यो दस्योर्हन्ता स जनास इन्द्रः।।१०।। | यः। दस्योः। हन्ता। सः। जनासः। इन्द्रः।।१०।। |

ಅನುವಾದ :

ಯಾರು ಮಹಾ ಪಾಪವನ್ನು (ಏನಃ) ಹೊತ್ತಿರುವ ಅಜ್ಞರಾದ ಅನೇಕರನ್ನು (ಶಶ್ವತಃ) ಬಾಣದಿಂದ ವಧಿಸಿದನೋ ಗರ್ವಿಷ್ಠನಿಗೆ (ಶರ್ಧತೇ) ಕ್ಷಮೆಯನ್ನು ನೀಡನೋ, ದಸ್ಯುವಿನ ಮಾರಕನೋ, ಜನರೇ, ಅವನು ಇಂದ್ರ !

ಟಿಪ್ಪಣಿ : शश्वतः - बहून् (ಸಾಯಣ); "many" (ಮ್ಯಾಕ್‌ಡೋನೆಲ್).

महि - महत्, एनः (ಪಾಪ) ಎಂಬುದರ ವಿಶೇಷಣ.

दधानान् - धा ಧಾರಣ, ಪೋಷಣ, शानच् ಪ್ರತ್ಯಯಾಂತ ವರ್ತಮಾನ ಕೃದಂತ ದ್ವಿ.ವಿ.,ಬ.ವ.,

अमन्यमानान् - आत्मनमजानतः ತಮ್ಮನ್ನು ತಾವು ತಿಳಿಯದವರನ್ನು ಅಜ್ಞಾನಿಗಳನ್ನು, इन्द्रम् अपूजयतः, ಇಂದ್ರನನ್ನು ಪೂಜಿಸದವರನ್ನು; "the unexpecting", ನಿರೀಕ್ಷಿಸದವರನ್ನು (ಮ್ಯಾಕ್‌ಡೋನೆಲ್), मन् ತಿಳಿಯುವುದು, शानच् ಪ್ರತ್ಯಯಾಂತ ವರ್ತಮಾನ ಕೃದಂತ, ದ್ವಿ.ವಿ.,ಬ.ವ.

शर्वा - ತೃತೀಯಾ ಏ.ವ., शरु ಶಬ್ದ, ಸಾಯಣರ ಪ್ರಕಾರ, शृणाति शत्रून्

अनेन इति शरुः वज्रः (तेन), ಶತ್ರುಗಳನ್ನು ಇದರಿಂದ ಸಂಹರಿಸುತ್ತಾನೆಂದು ಇದಕ್ಕೆ, ಅಂದರೆ ವಜ್ರಕ್ಕೆ शरु ಎಂದು ಹೆಸರು. "ಬಾಣ" (ಮ್ಯಾಕ್‌ಡೋನೆಲ್).

जघान – हन् ಕೊಲ್ಲುವುದು, लिट्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

शर्धते – शृध् ಕಠಿನ ಧೋರಣೆಯಿರುವುದು, शतृ ಪ್ರತ್ಯಯಾಂತ ವರ್ತಮಾನ ಕೃದಂತ, शर्धत्, ಅದರ ಚತುರ್ಥೀ ಏ.ವ., ಸಾಯಣರು ಇದನ್ನು ಎರಡು ರೀತಿಯಲ್ಲಿ ವಿವರಿಸುತ್ತಾರೆ - (1) अनात्मज्ञाय जनाय, ಆತ್ಮಪ್ರಜ್ಞೆಯಿಲ್ಲದ ಮನುಷ್ಯನಿಗೆ; (2) उत्साहं कुर्वते, ಉತ್ಸಾಹವನ್ನು ತೋರುವವನಿಗೆ; "the arrogant", ಗರ್ವಿಗೆ (ಮ್ಯಾಕ್‌ಡೋನೆಲ್).

अनुददाति – अनु + दा ಕೊಡುವುದು (ಮ್ಯಾಕ್‌ಡೋನೆಲ್ "to forgive" ಕ್ಷಮಿಸುವುದು), लट्, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ पर्यभूषत् ಮೇಲಿನ ಟಿಪ್ಪಣಿ ನೋಡಿ. (ದ್ವಿತ್ವ ಹೊಂದಿದ ಧಾತುವಿನ ಮೊದಲನೆಯ ವರ್ಣಕ್ಕೆ ಉದಾತ್ತ ಬರುತ್ತದೆ – अभ्यस्तानामादिः – ಪಾ. 8.1.189; ಹೀಗೆ ददातिಯೆಂಬುದರ ಪ್ರಕೃತಿಸ್ವರ).

शृध्याम् – उत्साहनीयं कर्म, ಪ್ರಚೋದಿಸುವ ಕರ್ಮ (ಸಾಯಣ); "the arrogance" (ಮ್ಯಾಕ್‌ಡೋನೆಲ್)

दस्योः – उपक्षपयतुः शत्रोः, ತಡೆಗಟ್ಟುವ ಶತ್ರುವಿನ; "the demon" (ಮ್ಯಾಕ್‌ಡೋನೆಲ್).

हन्ता – हन् + तृच्, ಪ್ರ.ವಿ.,ಏ.ವ., ಚಿತ್‌ಸ್ವರದಿಂದ ಅಂತೋದಾತ್ತ – चितः । (ಪಾ. 6.1.16).

स जनास इन्द्रः – ಒಂದನೇ ಮಂತ್ರದ ಟಿಪ್ಪಣಿ ನೋಡಿ.

---

## 1.4.2.(xi) यः शम्बरं पर्वतेषु, इत्यादि

---

| ಸಂಹಿತಾಪಾಠ | ಪದಪಾಠ |
|---|---|
| यः शम्बरं पर्वतेषु क्षियन्तं | यः। शम्बरम्। पर्वतेषु। क्षियन्तम्। |
| चत्वारिंश्यां शरद्यन्वविन्दत्। | चत्वारिंऽश्याम्। शरदि। अनुऽअविन्दत्। |

ओजायमानं यो अहिं जघान    ओजायमानम्। यः। अहिम्। जघान।
दानुं शयानं स जनास इन्द्रः ।।११।।   दानुम्। शयानम्। सः। जनासः।
इन्द्रः ।।११।।

**ಅನುವಾದ :**

ಯಾರು ಪರ್ವತದಲ್ಲಿ ವಾಸಿಸುತ್ತಿದ್ದ ಶಂಬರನನ್ನು ನಲವತ್ತನೆಯ ಶರತ್ಕಾಲದಲ್ಲಿ ಕಂಡುಹಿಡಿದನೋ, ಬಲಪ್ರದರ್ಶನ ಮಾಡಿದ ಸುಪ್ತ ದಾನುಪುತ್ರನಾದ ಸರ್ಪವನ್ನು ವಧಿಸಿದನೋ, ಜನರೇ, ಅವನು ಇಂದ್ರ!

**ಟಿಪ್ಪಣಿ : शम्बरम्** – ಆ ಹೆಸರಿನ ರಾಕ್ಷಸ, ಅತ್ಯಂತ ಚತುರ ದಗಾಕೋರನಾದ ರಾಕ್ಷಸ.

पर्वतेषु – पर्वतगुहासु, ಪರ್ವತದ ಗುಹೆಗಳಲ್ಲಿ (ಸಾಯಣ). ಇಂದ್ರನ ಭಯದಿಂದ ಶಂಬರನು ಪರ್ವತ ಗುಹೆಗಳಲ್ಲಿ ಅಡಗಿದ್ದನು.

क्षियन्तम् – क्षि ನೆಲೆಸುವುದು, शतृ ಪ್ರತ್ಯಯಾಂತ ವರ್ತಮಾನ ಕೃದಂತ, ದ್ವಿ.ವಿ.,ಏ.ವ.,

शरदि – ಶರತ್ಕಾಲದಲ್ಲಿ, ವರ್ಷ ಎಂಬ ಸಾಮಾನ್ಯಾರ್ಥದಲ್ಲಿ ಇದರ ಪ್ರಯೋಗ, संवत्सरे (ಸಾಯಣ). चत्वारिंश्यां शरदि – ನಲವತ್ತನೆಯ ವರ್ಷದಲ್ಲಿ.

अनु – अविन्दत् – अन्वविन्दत्, अनु + विद्, ಪ್ರಾಪ್ತ್ಯರ್ಥಕ, लङ्, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ पर्यभूषत् ಮೇಲಿನ ಟಿಪ್ಪಣಿ ನೋಡಿ.

ओजायमानम् – ओजाय ನಾಮಧಾತು (ಓಜಸ್ಸನ್ನು ತೋರುವುದು); कर्तुः क्यन् सलोपश्च । (ಪಾ. 3.1.11) ಎಂಬ ಸೂತ್ರದಂತೆ क्यन् ಮತ್ತು जस् ಎಂಬುದರ सलोप, सलोप ಇಲ್ಲಿ ನಿತ್ಯ – ओजसोऽप्सरसो नित्यम् । (ಪಾ. 3.1.12); ಇದಕ್ಕೆ शानच् ಸೇರಿ ವರ್ತಮಾನ ಕೃದಂತ, ದ್ವಿ.ವಿ.,ಏ.ವ.

जघान – ಹಿಂದಿನ ಮಂತ್ರದ ಟಿಪ್ಪಣಿ ನೋಡಿ.

दानुम् – ತಾಯಿಯ ಹೆಸರಿನಿಂದ ಈ ರಾಕ್ಷಸನಿಗೆ दानु ಎಂದು ಹೆಸರು.

शयानम् – शी ಒರಗಿರುವುದು, शानच् ಪ್ರತ್ಯಯಾಂತ ವರ್ತಮಾನ ಕೃದಂತ, ದ್ವಿ.ವಿ.,ಏ.ವ.

स जनास इन्द्रः – ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(xii) यः सप्तरश्मिर्वृषभः, इत्यादि

| ಸಂಹಿತಾಪಾಠ | ಪದಪಾಠ |
|---|---|
| यः सप्तरश्मिर्वृषभस्तुविष्मान् | यः। सप्तऽरश्मिः। वृषभः। तुविष्मान्। |
| अवासृजत्सर्तवे सप्त सिन्धून्। | अवऽअसृजत्। सर्तवे। सप्त। सिन्धून्। |
| यो रौहिणमस्फुरद्वज्रबाहुर् | यः। रौहिणम्। अस्फुरत्। वज्रऽबाहुः। |
| द्यामारोहन्तं स जनास इन्द्रः।।१२।। | द्याम्। आऽरोहन्तम्। सः। जनासः। इन्द्रः।।१२।। |

ಅನುವಾದ :

ಯಾರು ಸಪ್ತಕಡಿವಾಣಗಳುಳ್ಳ ವೃಷಭವಾಗಿ ಸಪ್ತನದಿಗಳನ್ನೂ, ಹರಿಯಲು (ಸರ್ತವೇ) ಬಿಡಿಸಿದನೋ, ವಜ್ರಬಾಹುವಾದ ಯಾರು ಸ್ವರ್ಗಾರೋಹಣ ಮಾಡುತ್ತಿದ್ದ ರೌಹಿಣನನ್ನು ಸಂಹರಿಸಿದನೋ, ಜನರೇ, ಅವನು ಇಂದ್ರ!

ಟಿಪ್ಪಣಿ : सप्ररश्मिः – सप्त रश्मयःयस्य सः, ಬಹುವ್ರೀಹಿಸಮಾಸ, ಆರನೇ ಮಂತ್ರದಲ್ಲಿ युक्तग्रावणः ಮೇಲಿನ ಟಿಪ್ಪಣಿ ನೋಡಿ. ಸಾಯಣರು रश्मयः ಎಂಬುದನ್ನು ವೃಷ್ಟಿಗಳು ಎಂಬ ಅರ್ಥದಲ್ಲಿ ತೆಗೆದುಕೊಳ್ಳುತ್ತಾರೆ. ಅವರ ಪ್ರಕಾರ ಇಂದ್ರನ ಏಳು ರಶ್ಮಿಗಳು ಏಳು ವೃಷ್ಟಿಗಳು – वराहवः स्वतवसो विद्युन्महसो धूपयः --- | (ತೈತ್ತಿರೀಯ ಆರಣ್ಯಕ, 1.9.45); ಮ್ಯಾಕ್‌ಡೋನೆಲ್ ಏಳು ಸರಪಳಿಗಳುಳ್ಳ, (seven-reined) (ವೃಷಭ) ಎಂದು ವಿವರಿಸುತ್ತಾರೆ. ಈ ವೃಷಭವು ನಿಯಂತ್ರಿಸಲಾಗದು ಎಂದು ಅಭಿಪ್ರಾಯ. वृषभः - वर्षकः ಸುರಿಸುವವನು (ಸಾಯಣ); "the bull" (ಮ್ಯಾಕ್‌ಡೋನೆಲ್).

तुविष्मान् – बुद्धिमान् बलवान् वा (ಸಾಯಣ); ಮ್ಯಾಕ್‌ಡೋನೆಲ್ ಎರಡನೇ ಅರ್ಥ ತೆಗೆದುಕೊಳ್ಳುತ್ತಾರೆ (the mighty).

अवासृजत् – अव + सृज् ಬಿಡುಗಡೆ ಮಾಡುವುದು, लङ्, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ पर्यभूषत् ಮೇಲಿನ ಟಿಪ್ಪಣಿ ನೋಡಿ:

सर्तवे – सृ ಹರಿಯುವುದು, ವೈದಿಕ ತುಮುನ್ನರ್ಥಕ, तवेन् – ಒಂಬತ್ತನೇ ಮಂತ್ರದಲ್ಲಿ अवसे ಮೇಲಿನ ಟಿಪ್ಪಣಿ ನೋಡಿ. चित् स्वर – ಆದ್ಯುದಾತ್ತ.

सप्तसिन्धून् – सर्पणस्वभावः आपः, गङ्गाद्या सप्त मुख्या नदीः, ಹರಿಯುವ

ಸ್ವಭಾವವುಳ್ಳ ನೀರು ಅಥವಾ ಗಂಗಾ ಮುಂತಾದ ಮುಖ್ಯ ನದಿಗಳನ್ನು (ಸಾಯಣ).

रौहिणम् - ಆ ಹೆಸರಿನ ಒಬ್ಬ ರಾಕ್ಷಸನನ್ನು.

अस्फुरत् - स्फुर् ಕಂಪಿಸುವುದು, लङ्, ಪ್ರ.ಪು.,ಏ.ವ., ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

वज्रबाहु - वज्रं बाहौ यस्य सः, ಬಹುವ್ರೀಹಿಸಮಾಸ, ಆರನೇ ಮಂತ್ರದಲ್ಲಿ युक्तग्राव्णः ಮೇಲಿನ ಟಿಪ್ಪಣಿ ನೋಡಿ.

स जनास इन्द्रः - ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(xiii) द्यावा चिदस्मै पृथिवी, इत्यादि

| ಸಂಹಿತಾಪಾಠ | ಪದಪಾಠ |
|---|---|
| द्यावा चिदस्मै पृथिवी नमेते | द्यावा। चित्। अस्मै। पृथिवी इति। नमेते इति। |
| शुष्माच्चिदस्य पर्वता भयन्ते। | शुष्मात्। चित्। अस्य। पर्वताः। भयन्ते। |
| यः सोमपा निचितो वज्रबाहुर् | यः। सोमऽपाः। निऽचितः। वज्रऽबाहुः। |
| यो वज्रहस्तः स जनास इन्द्रः।।१३।। | यः। वज्रऽहस्तः। सः। जनासः। इन्द्रः।।१३।। |

**ಅನುವಾದ :**

ಭೂಸ್ವರ್ಗಗಳು ಕೂಡ (ಅವನನ್ನು) ವಂದಿಸುತ್ತವೆ. ಉಗ್ರಬಲಕ್ಕಾಗಿ ಪರ್ವತಗಳು ಸಹ ಭಯಪಡುತ್ತವೆ. "ಸೋಮಪಾ" ಎಂದು ಖ್ಯಾತನಾದ (ನಿಚಿತಃ) ಯಾರು ವಜ್ರಬಾಹುವೋ ವಜ್ರಾಯುಧವನ್ನು ಕೈಯಲ್ಲಿ ಹಿಡಿದಿರುವನೋ, ಜನರೇ, ಅವನು ಇಂದ್ರ

ಟಿಪ್ಪಣಿ : द्यावा ---- पृथिवी - ಇಲ್ಲಿ ದೇವತಾದ್ವಂದ್ವಸಮಾಸದ ಪೂರ್ವ ಮತ್ತು ಉತ್ತರ ಪದಗಳು ಬೇರೆ ಪದಗಳು ಮಧ್ಯೆ ಬಂದು (ವ್ಯವಹಿತವಾಗಿ) ಬೇರ್ಪಟ್ಟಿವೆ. द्यावापृथिव्यौ ಎಂಬುದಕ್ಕೆ ವೇದದಲ್ಲಿ द्यावापृथिवी - पूर्वसवर्णदीर्घ, ಮೂರನೇ ಮಂತ್ರದಲ್ಲಿ अपधा ಮೇಲಿನ ಟಿಪ್ಪಣಿ ನೋಡಿ. ಇಲ್ಲಿ ಎರಡೂ ಪದಗಳು ಬೇರ್ಪಟ್ಟಿದ್ದರೂ "ಇತರೇತರಾಪೇಕ್ಷೆ'

(ಸಾಯಣ)ಯಿಂದ ದ್ವಿವಚನ. ಒಂದನೇ ಮಂತ್ರದಲ್ಲಿ रोदसी ಮೇಲಿನ ಟಿಪ್ಪಣಿ ನೋಡಿ (ಪ್ರಗೃಹ್ಯ, ಪದಪಾಠದಲ್ಲಿ ಇತಿಕರಣ).

नमेते – नम् ನಮಿಸುವುದು, लट्, ಪ್ರ.ಪು.,ದ್ವಿ.ವ., ಪ್ರಗೃಹ್ಯ, ಪದಪಾಠದಲ್ಲಿ इतिकरण | ನಿಘಾತಸ್ವರ, ಐದನೇ ಮಂತ್ರದಲ್ಲಿ मिनाति ಎಂಬುದರ ಸ್ವರವನ್ನು ನೋಡಿ.

शुष्मात् – ಒಂದನೇ ಮಂತ್ರದ ಟಿಪ್ಪಣಿ ನೋಡಿ.

भयन्ते – भी ಭಯಪಡುವುದು, लट्, ಪ್ರ.ಪು.,ಬ.ವ., ಲೌಕಿಕ ಸಂಸ್ಕೃತದಲ್ಲಿ बिभ्यति ಎಂದು ರೂಪ, जुहोत्यादिभ्यः श्लुः | (ಪಾ. 2.4.75) ಎಂಬ ಸೂತ್ರದಂತೆ श्लु ಬಂದು ಆ ರೂಪ. बहुलं छन्दसि | (ಪಾ. 2.4.76) ಎಂಬಂತೆ ವೇದದಲ್ಲಿ ಬಂದಿಲ್ಲ. ಬದಲಾಗಿ शप् ವಿಕರಣ ಬಂದಿದೆ – व्यत्ययो बहुलम् | (ಪಾ. 3.1.85). ಐದನೇ ಮಂತ್ರದಲ್ಲಿ मिनाति ಎಂಬುದರ ಸ್ವರವನ್ನು ನೋಡಿ.

सोमपाः – सोमं पिबति इति सोमपाः, पाः ಎಂಬುದು क्विबन्त ಕೃದಂತ, ಈ ಕೃದಂತವು ತತ್ಪುರುಷಸಮಾಸದಲ್ಲಿ गति, कारक ಅಥವಾ उपपद ದ ಅನಂತರ ತನ್ನ ಉದಾತ್ತವನ್ನು ಉಳಿಸಿಕೊಳ್ಳುತ್ತದೆ (सोम, ಇಲ್ಲಿ कारक) - गतिकारकोपपदात् कृत् | (ಪಾ. 6.2.139).

निचितः – प्रसिद्धः, अन्येभ्योऽपि देवेभ्यो दृढाङ्गः वा, ಪ್ರಸಿದ್ಧನು ಅಥವಾ ಬೇರೆ ದೇವತೆಗಳಿಗಿಂತ ದೃಢವಾದ ದೇಹವುಳ್ಳವನು (ಸಾಯಣ).

वज्रबाहुः, वज्रहस्तः – ಹನ್ನೆರಡನೆ ಮಂತ್ರದಲ್ಲಿ वज्रबाहुः ಮತ್ತು ಆರನೇ ಮಂತ್ರದಲ್ಲಿ युक्तग्राव्णः ಮೇಲಿನ ಟಿಪ್ಪಣಿಗಳನ್ನು ನೋಡಿ.

स जनास इन्द्रः – ಒಂದನೇ ಮಂತ್ರದ ಟಿಪ್ಪಣಿ ನೋಡಿ.

## 1.4.2.(xiv) यः सुन्वन्तमवति, इत्यादि

| ಸಂಹಿತಾಪಾಠ | ಪದಪಾಠ |
|---|---|
| यः सुन्वन्तमवति यः पचन्तं | यः। सुन्वन्तम्। अवति। यः। पचन्तम्। |
| **यः शंसन्तं यः शशमानमूती।** | यः। **शसन्तम्**। यः। शशमानम्। ऊती। |

यस्य॒ ब्रह्म॒ वर्ध॑नं॒ यस्य॒ सोमो॒ यस्येदं राध॒ः स जना॑स॒ इन्द्रः॥१४॥ यस्य॑। ब्रह्म॑। वर्धनम्। यस्य॑। सोम॑ः। यस्य॑। इ॒दम्। राध॑ः। स॒ः। ज॒ना॒स॒ः। इन्द्र॑ः॥१४॥

ಅನುವಾದ :

ಯಾರು ತನ್ನ ನೆರವಿನಿಂದ (ಊತೀ) ಸೋಮ ಹಿಂಡುವವನನ್ನು, (ಪುರುಡಾಶಾದಿಗಳ) ಪಾಕ ಮಾಡುವವನನ್ನು, ಸ್ತುತಿ ಮಾಡುವವನನ್ನು, ಯಜ್ಞಕರ್ಮಸಿದ್ಧತೆ ಮಾಡುವವನನ್ನು (ಶಶಮಾನಂ) ಸಲಹುತ್ತಾನೋ, ಯಾರಿಗೆ, ಸ್ತುತಿ (ಬ್ರಹ್ಮ) ಸೋಮ, ಈ ಕೊಡುಗೆ (ರಾಧಃ), ವರ್ಧಕವೋ, ಜನರೇ, ಅವನು ಇಂದ್ರ!

ಟಿಪ್ಪಣಿ : सुन्वन्तम् – सू ಹಿಂಡುವುದು, शतृ ಪ್ರತ್ಯಯಾಂತ ವರ್ತಮಾನ ಕೃದಂತ, ದ್ವಿ.ವಿ.,ಏ.ವ. सोमाभिषवं कुर्वन्तम्, ಸೋಮರಸವನ್ನು ಹಿಂಡುವವನನ್ನು (ಸಾಯಣ), ಅಂದರೆ ಯಜಮಾನನನ್ನು.

अवति – अव् ರಕ್ಷಿಸುವುದು, लट्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

पचन्तम्, शंसन्तम् – पच् ಬೇಯಿಸು, शंस् ಸ್ತುತಿಸು, ಇವುಗಳು शतृ ಪ್ರತ್ಯಯಾಂತ ವರ್ತಮಾನ ಕೃದಂತ ರೂಪಗಳು, ದ್ವಿ.ವಿ.,ಏ.ವ.

शशमानम् – स्तोत्रं कुर्वाणम् ಸ್ತೋತ್ರ ಮಾಡುವವನನ್ನು, अर्चन्तम् ಹಾಡುವವನನ್ನು (ನಿಘಂಟು 3.14); शंसमानम् (ನಿರುಕ್ತ. 6.8). ಇಲ್ಲಿ शंस् ಎಂಬ ಧಾತುವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆದರೆ शश् – ಕೊಲ್ಲುವುದು, ಪಶುವನ್ನು ಕೊಲ್ಲುವವನನ್ನು, ಯಜಮಾನನನ್ನು ಎಂದು ಅರ್ಥಮಾಡುವುದು ಯೋಗ್ಯವೆಂದು ತೋರುತ್ತದೆ. शानच् ಪ್ರತ್ಯಯಾಂತ ವರ್ತಮಾನ ಕೃದಂತ ದ್ವಿ.ವಿ.,ಏ.ವ. ಮ್ಯಾಕ್‌ಡೋನೆಲ್ ಪ್ರಕಾರ ಯಜ್ಞವನ್ನು ಸಿದ್ಧಗೊಳಿಸಿ ನಡೆಸುವವನನ್ನು (one who prepares the sacrifice) ಎಂದು ಅರ್ಥ.

ऊती – ऊतये (ಸಾಯಣ); ಇಲ್ಲಿ ಚ.ವಿ.,ಏ.ವ. ಬದಲಾಗಿ ಪೂರ್ವಸವರ್ಣದೀರ್ಘ ಬಂದಿದೆ. ಮೂರನೇ ಮಂತ್ರದಲ್ಲಿ अपधा ಮೇಲಿನ ಟಿಪ್ಪಣಿ ನೋಡಿ. ಮ್ಯಾಕ್‌ಡೋನೆಲ್ ಪ್ರಕಾರ ಅದು ತೃತೀಯಾ ಏ.ವ.

ब्रह्म – परिवृढं स्तोत्रम्, ಪರಿವರ್ಧಿತವಾದ ಸ್ತೋತ್ರ.

राधः - पुरोडाशादिलक्षणम् अन्नम् ಪುರೋಡಾಶ ಮುಂತಾದ ಆಹಾರ, ಮ್ಯಾಕ್‌ಡೋನೆಲ್ ಪ್ರಕಾರ "gift."

अवति - अव् ರಕ್ಷಿಸು, लट्, ಪ್ರ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

स जनास इन्द्रः - ಒಂದನೇ ಮಂತ್ರದ ಟಿಪ್ಪಣಿ ನೋಡಿ.

---

## 1.4.2.(xv) यः सुन्वते पचते, इत्यादि

| ಸಂಹಿತಾಪಾಠ | ಪದಪಾಠ |
|---|---|
| यः सुन्वते पचते दुध्र आ चिद् | यः। सुन्वते। पचते। दुध्रः। आ। चित्। |
| वाजं दर्दर्षि स किलासि सत्यः। | वाजम्। दर्दर्षि। सः। किल। असि। सत्यः। |
| वयं त इन्द्र विश्वहं प्रियासः | वयम्। ते। इन्द्र। विश्वहं। प्रियासः। |
| सुवीरासो विदथमावदेम।। | सुऽवीरासः। विदथम्। आ। वदेम।। |

ಅನುವಾದ :

ಯಾವ ನೀನು ಅಪ್ರತಿಹತನಾಗಿ (ದುಧ್ರಃ) ಸೋಮ ಹಿಂಡುವವನಿಗೆ, ಪುರುಡಾಶಾದಿಪಾಕ ಮಾಡುವವನಿಗೆ ಫಲವನ್ನು ಬಹುವಾಗಿ ಕೊಡುವೆಯೋ ಅಂತಹ ನೀನು (ತಾದೃಶಃ ತ್ವಂ) ಸತ್ಯಾತ್ಮಕನಾಗಿದ್ದೀಯಷ್ಟೆ. ನಿನಗೆ ಸದಾ (ವಿಶ್ವಹ) ಪ್ರಿಯರಾಗಿರುವ ನಾವು, ಇಂದ್ರನೇ ! ಒಳ್ಳೆಯ ಪುತ್ರಾದಿಗಳುಳ್ಳವರಾಗಿ ದೇವಪೂಜೆಯನ್ನು (ವಿದಥಂ) ಪಠಿಸೋಣ.

**ಟಿಪ್ಪಣಿ :** सुन्वते, पचते - ಹಿಂದಿನ ಮಂತ್ರದಲ್ಲಿ सुन्वन्तं, पचन्तम् ಮೇಲಿನ ಟಿಪ್ಪಣಿ ನೋಡಿ. ಇಲ್ಲಿ ಚತುರ್ಥೀ ಏ.ವ.

दुध्रः - दुर्धरः सन्, ನಿಯಂತ್ರಿಸಲು ಆಗದವನು.

वाजम् - अन्नम् (ಸಾಯಣ); "booty" ನಿಧಿ (ಮ್ಯಾಕ್‌ಡೋನೆಲ್).

दर्दर्षि - दृ ಕತ್ತರಿಸುವುದು, लट्, ಮ.ಪು.,ಏ.ವ., ಸ್ವರದ ವಿಷಯಕ್ಕೆ ಒಂದನೇ ಮಂತ್ರದಲ್ಲಿ अभ्यसेताम् ಮೇಲಿನ ಟಿಪ್ಪಣಿ ನೋಡಿ.

इन्द्र - ಆಮಂತ್ರಿಕ ಪದ, ಪಾದದ ಆದಿಯಲ್ಲಿ ಇಲ್ಲದಿರುವುದರಿಂದ ಎಂಟನೇ

ಅಧ್ಯಾಯದ आमन्त्रितस्य च | (ಪಾ. 8.1.19) ಪ್ರಕಾರ ನಿಘಾತಸ್ವರ.

प्रियासः, सुवीरासः - प्रियाः, सुवीराः, ಒಂದನೇ ಮಂತ್ರದಲ್ಲಿ जनासः ಮೇಲಿನ ಟಿಪ್ಪಣಿ ನೋಡಿ.

विदधम् - स्तोत्रम् (ಸಾಯಣ); "divine worship" ದೈವೀಪೂಜೆ. (ಮ್ಯಾಕ್‌ಡೋನೆಲ್).

आवदेम - वद् ಹೇಳುವುದು, विधिलिङ्, ಉ.ಪು.,ಬ.ವ., ಐದನೇ ಮಂತ್ರದಲ್ಲಿ आ मिनाति ಎಂಬುದರ ಮೇಲಿನ ಟಿಪ್ಪಣಿ ನೋಡಿ.

सुवीरसो विदथमा वदेम - ಈ ಸೂಕ್ತಾಂತ ಉಕ್ತಿಯು ಎರಡನೇ ಮಂಡಲದ ಗೃತ್ಸಮದ ವಂಶದ ಋಷಿಗಳ ಸೂಕ್ತಾಂತ ಉಕ್ತಿ - बृहद् वदेम विदथे सुवीराः ಎಂಬುದಕ್ಕೆ ಸಂವಾದಿಯಾಗಿದೆ.

## 1.4.3 ಇಂದ್ರದೇವತೆಯ ಲಕ್ಷಣಗಳು

ಋಗ್ವೇದದ ದೇವತೆಗಳಲ್ಲಿ ಅತ್ಯಂತ ಪ್ರಮುಖ ದೇವತೆಯೆಂದರೆ ಇಂದ್ರ. ಅವನ ಸ್ತುತಿಯು 250 ಸೂಕ್ತಗಳಲ್ಲಿ ಬಂದಿದೆ. ಅವನ ಬಗ್ಗೆ ಬಂದಿರುವ ಆಖ್ಯಾನಗಳ ಸಂಖ್ಯೆಯಲ್ಲಿ ಬೇರೆ ಯಾವುದೇ ದೇವತೆಯ ಬಗ್ಗೆ ಹೇಳಿದ ಆಖ್ಯಾನಗಳಿಗಿಂತ ಬಹಳ ಹೆಚ್ಚಾಗಿವೆ. ಅವನ ಶಾರೀರಿಕ ಬಲವು ಮಹತ್ವಮಾಣದ್ದು ಮತ್ತು ಅನುಪಮವಾದದ್ದು. ಅನೇಕ ವಿಶೇಷಣಗಳು ಅವನ ಈ ಅಂಶವನ್ನೇ ಅಧಿಕವಾಗಿ ಬಿಂಬಿಸುತ್ತವೆ. ಅವನು ಯುವಕ, ಪ್ರಾಚೀನ, ಚಟುವಟಿಕೆಯುವ, ಸಮರ್ಥ, ನಿತ್ಯ, ಶುದ್ಧ, ಸರ್ವಸಂಹಾರಿ, ಎಣೆಯಿಲ್ಲದ ಮೇಧಾಶಕ್ತಿಯುಳ್ಳವನು, ವಜ್ರಧಾರಿ. ಅವನ ರೂಪ ಸುಂದರ, ಅವನ ಬಣ್ಣ ಎಳೆ ಸೂರ್ಯನ ಕೆಂಪು. ನೋಡಿ -

हरित्वता वर्चसा सूर्यस्य श्रेष्ठै रूपैस्तन्व स्पर्शयस्व |
अस्माभिरिन्द्र सखिभिर्हुवानः सध्रीचीनो मादयस्वा निषद्य ||

(ಋ. 10.112.3)

ಇಂದ್ರನ ಸಮಗ್ರ ಆಕಾರವು ಕೆಂಪು ಅಥವಾ ಚಿನ್ನದ ಬಣ್ಣದ್ದು. ಆದ್ದರಿಂದ ಅವನನ್ನು "ಹರಿಪರ್ವಸ್" ಅಥವಾ "ಹಿರಣ್ಮಯ" ಎಂದು ವರ್ಣಿಸುತ್ತಾರೆ. ಯಜ್ಞದಲ್ಲಿ ಹೊಮ್ಮಿದ ಸೂಕ್ತವು ಅವನನ್ನು ಬೆಳೆಯುವಂತೆ ಮಾಡುತ್ತದೆ (ಉಕ್ಥೈರ್ವಾವೃಧಾನಃ, ಋ. 2.11.2).

ಅವನ ಶಾರೀರಿಕ ಲಕ್ಷಣಗಳು ಮತ್ತೆ ಮತ್ತೆ ವರ್ಣಿಸಲ್ಪಟ್ಟಿವೆ. ಸೋಮವನ್ನು ಕುಡಿದಾಗ ಅವನು ತನ್ನ ಹಲ್ಲುಗಳ ಸಾಲುಗಳನ್ನು ಮತ್ತು ಗಡ್ಡವನ್ನು ಅಲುಗಾಡಿಸುತ್ತಾನೆ. ಸೋಮರಸವನ್ನು ಕುಡಿಯುವ ಅವನ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಅವನ ಬೃಹದಾಕಾರದ ಹೊಟ್ಟೆಯು ವರ್ಣಿಸಲ್ಪಡುತ್ತದೆ. ಹುಟ್ಟಿದಾಕ್ಷಣ ಅವನು ಹತ್ತು ಚಷಕಗಳಷ್ಟು ಸೋಮವನ್ನು ಒಂದೇ ಗುಟುಕಿಗೆ ಕುಡಿದನು ಎಂದು ವರ್ಣಿಸಲ್ಪಟ್ಟಿದ್ದಾನೆ. ಅವನು ವರ್ಣದಲ್ಲಿ ಕೆಂಪು, ಅವನ ಕೂದಲು ಕೆಂಪು ಮತ್ತು ಗಡ್ಡವು ಕೆಂಪು. ವಜ್ರವನ್ನು ಧರಿಸಿರುವ ದೃಷ್ಟಿಯಿಂದ ಅವನ ಬಾಹುಗಳನ್ನು ವರ್ಣಿಸುತ್ತಾರೆ. ಅವನು ವಜ್ರಬಾಹು, ಬಾಹುವಿನಲ್ಲಿ ವಜ್ರವನ್ನು ಧರಿಸಿದವನು, ಅವನು ವಜ್ರಿನ್, ವಜ್ರವುಳ್ಳವನು. ಅವನ ವಜ್ರವನ್ನು ಸೃಷ್ಟಿಸಿದವನು ತ್ವಷ್ಟೃ ಎಂದು ವರ್ಣಿತವಾಗಿದೆ. ಕೆಲವು ಸಂದರ್ಭಗಳಲ್ಲಿ ಅವನ ಹಗಲುಗಳೇ ಅವನ ಆಯುಧಗಳು. ಕೆಲವು ಸಂದರ್ಭಗಳಲ್ಲಿ [illegible]ನನ್ನು, ಬಿಲ್ಲು ಬಾಣಗಳನ್ನು, ಅಂಕುಶವನ್ನು ಧರಿಸಿದವನು ಎಂದು ವರ್ಣಿಸುತ್ತಾರೆ. ಅವನು ಚಿ[illegible]ದ ರಥವನ್ನು ಹೊಂದಿದ್ದಾನೆ. ಎರಡು ಕುದುರೆ (ಹರಿ)ಗಳು ಅದನ್ನು ಎಳೆಯುತ್ತದೆ. [illegible]ದ್ಧ ಮಾಡುವಾಗ ಅವನು ರಥದ ಮೇಲೆ ನಿಂತಿರುತ್ತಾನೆ. ಆದ್ದರಿಂದ ಅವನಿಗೆ ರಥೇಷ್ಠಾ [illegible]ಮ ಹೆಸರು. ಅವನ ರಥವನ್ನು ಮತ್ತು ಕುದುರೆಗಳನ್ನು ದೇವಶಿಲ್ಪಿಗಳಾದ ಋಭುಗಳು ಸೃಷ್ಟಿಸಿದರು.

ಅವನ ಜನ್ಮದ ಬಗ್ಗೆ ಸೂಕ್ತಗಳಲ್ಲಿ ಮಾಹಿತಿ ದೊರೆಯುತ್ತದೆ. ಅಗ್ನಿಯ ಹಾಗೆಯೇ ಅವನ ತಂದೆ ದ್ಯೌಸ್ ಮತ್ತು ತಾಯಿ ಅದಿತಿ. ಆದ್ದರಿಂದ ಅಗ್ನಿಯು ಅವನ ಅವಳಿ ಸಹೋದರ, ಪೂಷನ್ ಅವನ ಸಹೋದರ. ಕೆಲವು ಉಲ್ಲೇಖಗಳಿಂದ ಅವನ ತಂದೆ ತ್ವಷ್ಟೃ ಎನ್ನಿಸುತ್ತದೆ, ನೋಡಿ.

परवतीं मातरमन्वचष्ट न नानु गान्यनु नू गमानि |
त्वष्टुगृहे अपिनत् सोममिन्द्रः शतधन्यं चम्वो सुतस्य ||

(ಋ. 4.18.3)

ಇಲ್ಲಿ ಹಿಂದಿರುಗುತ್ತಿದ್ದ ತಾಯಿಯನ್ನು (ಅದಿತಿಯನ್ನು) ನೋಡಿದ ಇಂದ್ರ ಹಿಂಬಾಲಿಸಲೋ ಬೇಡವೋ ಎಂದು ವಿಚಾರಮಾಡಿ ಹಿಂಬಾಲಿಸಲು ನಿರ್ಧರಿಸಿದ, ಅವನು ಹೋದದ್ದು ತ್ವಷ್ಟೃವಿನ ಗೃಹಕ್ಕೆ, ಅಲ್ಲಿ ಎರಡು ಬಾವಿಗಳಲ್ಲಿ ಹಿಂಡಿ ಇಟ್ಟಿದ್ದ ಸೋಮವನ್ನು ಕುಡಿದನು, ಎಂದು ವರ್ಣಿಸಲಾಗಿದೆ. ಅದೇ ತ್ವಷ್ಟೃವು ಅವನಿಗಾಗಿ ಸೀಳುಧ್ವನಿಯ ವಜ್ರವನ್ನು ನಿರ್ಮಿಸಿದನು. त्वष्टाऽस्मै वज्रं स्वर्यं ततक्ष | (ಋ. 1.32.2). ಅವನ ಪತ್ನಿ ಇಂದ್ರಾಣಿ. ಬೇರೆ ದೇವತೆಗಳ ಜೊತೆಯಲ್ಲಿ ಅವನ ಸಂಬಂಧವು ವರ್ಣಿಸಲ್ಪಟ್ಟಿದೆ. ಮರುತರು ಅವನ

ಮುಖ್ಯ ಸಹಚರರು, ವಿಶೇಷವಾಗಿ ವೃತ್ರನ ವಿರುದ್ಧ ಅವನ ಯುದ್ಧದಲ್ಲಿ. ಅವನಿಗೆ मरुत्वान् ಎಂಬುದು ವಿಶೇಷ ವಿಶೇಷಣ. ಅಗ್ನಿಯೊಂದಿಗೆ ಅವನು ದ್ವಂದ್ವ ದೇವತೆಯಾಗಿದ್ದಾನೆ - इन्द्राग्नी | ಅವನು ವರುಣನೊಂದಿಗೆ (ಋ. 7.86), ವಾಯು ಮತ್ತು ಸೋಮರೊಂದಿಗೆ (ಋ. 8.48),ಬೃಹಸ್ಪತಿಯೊಂದಿಗೆ (ಋ. 4.50),ಪೂಷನ್ ಮತ್ತು ವಿಷ್ಣುಗಳೊಂದಿಗೆ ಜೊತೆಯಾಗಿ ಸ್ತುತಿಸಲ್ಪಟ್ಟಿದ್ದಾನೆ.

ಬೇರೆ ದೇವತೆಗಳಿಗೆ ಹೋಲಿಸಿದರೆ, ಇಂದ್ರನು ಸೋಮರಸಕ್ಕೆ ಅತ್ಯಂತ ದಾಸನಾದವನು. ಆದ್ದರಿಂದ सोमपा ಎಂಬ ವಿಶೇಷಣ ಅವನಿಗೆ ಮಾತ್ರ ಸಲ್ಲುತ್ತದೆ. ಸೋಮರಸವು ಅವನನ್ನು ಯುದ್ಧಕ್ಕೆ ಪ್ರಚೋದಿಸುತ್ತದೆ. ವೃತ್ರನನ್ನು ಕೊಲ್ಲಲು ಅವನು ಮೂರು ಸರೋವರಗಳಷ್ಟು ಸೋಮವನ್ನು ಕುಡಿದನಂತೆ. ಒಂದು ಸಮಗ್ರ ಸೂಕ್ತದಲ್ಲಿ (ಋ. 10.119) ಇಂದ್ರನು ಸೋಮರಸದ ಮತ್ತಿನಲ್ಲಿ ತನ್ನ ಮಹತ್ತ್ವವನ್ನು ಸಾಹಸಗಳನ್ನೂ ಕುರಿತು ಹೇಳಿಕೊಳ್ಳುತ್ತಾನೆ.

ಇಂದ್ರನಿಗೆ ಸಂಬಂಧಿಸಿದ ಪ್ರಮುಖ ಆಖ್ಯಾನವೆಂದರೆ ವೃತ್ರನ ವಧೆಗೆ ಸಂಬಂಧಿಸಿದುದು. ಈ ಆಖ್ಯಾನವು ಮತ್ತೆ ಮತ್ತೆ ವೈವಿಧ್ಯಮಯವಾಗಿ ವರ್ಣಿಸಲ್ಪಡುತ್ತದೆ. ಸೋಮರಸದಿಂದ ಮತ್ತನಾಗಿ, ಮರುತರೊಡಗೂಡಿ ಇಂದ್ರನು ಬರಗಾಲವನ್ನು ತರುವ ರಾಕ್ಷಸರಲ್ಲಿ ಪ್ರಮುಖನಾದ ವೃತ್ರನನ್ನು, ಅಹಿಯೆಂದು ಅನೇಕ ವೇಳೆ ಕರೆಯಲ್ಪಡುವನನ್ನು ವಧಿಸುತ್ತಾನೆ. ಪ್ರಾಯಶಃ ಪಿಪ್ರು, ಶಂಬರ, ನಮುಚಿ, ಉರಣ ಮುಂತಾದ ಹೆಸರುಗಳಿಂದಲೂ ವೃತ್ರನನ್ನು ಸೂಕ್ತಗಳಲ್ಲಿ ಕರೆಯುತ್ತಾರೆ. ಇಂದ್ರ ಮತ್ತು ವೃತ್ರನ ಮಧ್ಯೆ ಯುದ್ಧ ನಡೆದಾಗ ಸ್ವರ್ಗ ಮತ್ತು ಭೂಮಿಗಳೆರಡೂ ಕಂಪಿಸುತ್ತವೆ. ತನ್ನ ವಜ್ರಾಯುಧದಿಂದ ಅವನು ವೃತ್ರನನ್ನು ತುಂಡರಿಸುತ್ತಾನೆ. ಹೀಗೆ ನೀರಿನ ಆವರಕನಾದ ವೃತ್ರನ ವಧೆಯಿಂದ ಅವನಿಗೆ ವಿಶೇಷ ಬಿರುದು "ಅಪ್ಸುಜಿತ್" ಎಂದು. ಮತ್ತೆ ಮತ್ತೆ ನಡೆಯುವ ಈ ಸೆಣಸಾಟದ ಪರಿಣಾಮವಾಗಿ ಪರ್ವತಗಳು (ಮೇಘಗಳು) ಭಗ್ನವಾಗುತ್ತವೆ ಮತ್ತು ಅವುಗಳಿಂದ ಬಿಡುಗಡೆ ಹೊಂದಿದ ನೀರಿನ ಪ್ರವಾಹಗಳು ದೊಡ್ಡಿಯಿಂದ ಮುಕ್ತವಾದ ಗೋವುಗಳಂತೆ ಶಬ್ದಮಾಡುತ್ತಾ ಸಮುದ್ರದೆಡೆಗೆ ನುಗ್ಗುತ್ತವೆ.

अहन्नहिं पर्वते शिश्रियाणां त्वष्टास्मै वज्रं स्वर्यं ततक्ष |

वाश्रा इव धेनवः स्यन्दमाना अञ्जः समुद्रमवजगमुरापः ||

(ಋ. 1.32.2)

ಇಂದ್ರ-ವೃತ್ರ ಯುದ್ಧದಲ್ಲಿ ಹಾಸುಹೊಕ್ಕಾದ ಭೌತಿಕ ಅಂಶಗಳೆಂದರೆ ಮಿಂಚು (ಸಿಡಿಲು), ಮೋಡಗಳು, ಮಳೆ, ಇವುಗಳಿಗೆ ವಜ್ರ, ಪರ್ವತಗಳು ಮತ್ತು ನೀರು ಅಥವಾ ಪ್ರವಾಹ ಸಂಕೇತಗಳು. ಮೋಡಗಳೇ ಪರ್ವತಗಳು. ಅವುಗಳಲ್ಲೇ ರಾಕ್ಷಸರು ನೆಲೆಸಿರುವುದು.

ಇಂದ್ರನು ಆ ರಾಕ್ಷಸರನ್ನು ಪರ್ವತಗಳಿಂದ ದೂರ ಮಾಡುವನು, ಮತ್ತು ಪರ್ವತಗಳನ್ನು ಸೀಳಿ ನೀರನ್ನು ಬಿಡುಗಡೆ ಮಾಡುವನು. ಮೋಡಕ್ಕೆ ಒಮ್ಮೊಮ್ಮೆ ಅದ್ರಿ ಎಂದು ಹೆಸರು. ಅದ್ರಿಯು ಗೋವುಗಳನ್ನು ಮುಚ್ಚಿಹಾಕುತ್ತದೆ, ಅಂದರೆ ಮೇಘವು ನೀರನ್ನು ಬಂಧಿಸಿರುತ್ತದೆ. ಮೋಡಗಳನ್ನು ರಾಕ್ಷಸರ ಕೋಟೆಗಳೆಂದು ವರ್ಣಿಸುತ್ತಾರೆ. ಅವುಗಳನ್ನು ಚಲಿಸುವ ಕೋಟೆಗಳೆಂದು ವರ್ಣಿಸುವುದುಂಟು. ಇಂದ್ರನು ಆ ಕೋಟೆಗಳನ್ನು ಧ್ವಂಸ ಮಾಡುತ್ತಾನೆ. ಆದ್ದರಿಂದ ಅವನಿಗೆ "ಪುರಭಿದ್" ಎಂದು ಹೆಸರು ಇವೆಲ್ಲದರ ಮಧ್ಯೆ ಅವನ ಪ್ರಧಾನ ಹೆಸರೆಂದರೆ "ವೃತ್ರಹನ್" (ವೃತ್ರನ ಸಂಹಾರಕ) ಎಂದು. ವೃತ್ರನನ್ನು ಸಂಹರಿಸಿ ನೀರನ್ನು ಬಿಡುಗಡೆ ಮಾಡುವ ಇಂದ್ರನ ವೈಶ್ವಿಕ ಕಾರ್ಯದ ಮಹತ್ತ್ವವನ್ನು ಅದು ಪ್ರತಿನಿಧಿಸುತ್ತದೆ.

ಇನ್ನೊಂದು ಇಂದ್ರನ ವೈಶ್ವಿಕ ಕಾರ್ಯವೆಂದರೆ ಬೆಳಕು, ಸೂರ್ಯ ಮತ್ತು ಉಷಸ್ಸುಗಳನ್ನು ಗೆದ್ದದ್ದು. ಇಂದ್ರನು ವೃತ್ರನನ್ನು ಕೊಂದು ಬೆಳಕನ್ನು ಗೆದ್ದನು ಎಂಬ ವರ್ಣನೆಯನ್ನು ಅನೇಕ ಸಾರಿ ಓದುತ್ತೇವೆ. ಮನುಷ್ಯನಿಗಾಗಿ ನೀರನ್ನು ಬಿಡುಗಡೆ ಮಾಡಿದ ಅನಂತರ ಆಕಾಶದಲ್ಲಿ ಸೂರ್ಯನನ್ನು ಅವನು ಬೆಳಗುವಂತೆ ಸ್ಥಿರಗೊಳಿಸಿದನು. ಅವನು ಸೂರ್ಯ, ಆಕಾಶ ಮತ್ತು ಉಷಸ್ಸುಗಳನ್ನು ಸೃಷ್ಟಿಸಿ ನಿಲ್ಲಿಸಿದನು ಮತ್ತು ಅನಂತರ ಅವನು ಯಾವನೇ ವೈರಿಯನ್ನು ಕಾಣಲಿಲ್ಲ.

यदिन्द्राहन् प्रथमनामहीनाम् आन्मायिना मम्निाः प्रोत मायाः ।

आत् सूर्यं जनयन् द्यामुषासं तादीत्ना शत्रुं न किला विवित्से ।।

(ಋ. 1.32.4)

ಸೂರ್ಯ ಮತ್ತು ಉಷಸ್ಸುಗಳಿಗೆ ಸಂಬಂಧಿಸಿದಂತೆ ಹೇಳುವ ಗೋವುಗಳೆಂದರೆ ಬೆಳಗಿನ ಕಿರಣಗಳು. ಸೋಮರಸದ ಪ್ರಾಪ್ತಿಯು ವೃತ್ರವಧೆ, ಗೋವು ಮತ್ತು ಸೂರ್ಯರನ್ನು ಗೆಲ್ಲುವುದಕ್ಕೆ ಸಂಬಂಧಿಸಿದುದು. ಇಂದ್ರನು ಅಹಿ ವೃತ್ರನನ್ನು ಆಕಾಶದಿಂದ ದೂಡಿದ ಮೇಲೆ ಆಕಾಶ, ಅಗ್ನಿಗಳು, ಸೂರ್ಯ ಮತ್ತು ಸೋಮ ಬೆಳಗಿದವು. ಗೋವು ಮತ್ತು ಸೂರ್ಯರನ್ನು ಗೆದ್ದ ಸಮಕಾಲದಲ್ಲಿಯೇ ಸೋಮನನ್ನು ಗೆದ್ದನು.

ಇದಲ್ಲದೆ ಇಂದ್ರನ ಇನ್ನೂ ಅನೇಕ ವೈಶ್ವಿಕ ಚಟುವಟಿಕೆಗಳು ಪ್ರಸ್ತುತ (ಋ. 2.12) ಸೂಕ್ತದಲ್ಲಿ ವರ್ಣಿಸಲ್ಪಟ್ಟಿವೆ. ಅವನನ್ನು ಚಲಿಸುತ್ತಿದ್ದ ಪರ್ವತಗಳನ್ನು ಸ್ಥಿರಗೊಳಿಸಿದ, ಸ್ವರ್ಗ ಮತ್ತು ಭೂಮಿಗಳನ್ನು ಚರ್ಮವನ್ನು ಹರಡಿದಂತೆ ಹರಡಿದ, ಆ ಎರಡು ಲೋಕಗಳನ್ನು ಅಚ್ಚಿಗೆ ಜೋಡಿಸಿದ ಗಾಲಿಗಳಂತೆ ಬೇರೆ ಬೇರೆಯಾಗಿರಿಸಿದ, ಯುದ್ಧದಲ್ಲಿ ರಾಕ್ಷಸರ ಸಂಹಾರಕನಾದ ಅವನನ್ನು ವಿರುದ್ಧ ಪಕ್ಷಗಳ ಸೇನೆಗಳೆರಡೂ ಕರೆಯುತ್ತವೆ, ಅವನನ್ನು ಸಾಮಾನ್ಯವಾಗಿ

ಯಜಮಾನರ (ಯಜ್ಞಮಾಡುವವರ) ಸಹಾಯಕ ಮತ್ತು ಮಿತ್ರನೆಂದು ವರ್ಣಿಸುತ್ತಾರೆ. ಅವನು ಅವರಿಗೆ ಉದಾರವಾಗಿ ಸಂಪತ್ತನ್ನು ಕೊಡುತ್ತಾನೆ. ಆದ್ದರಿಂದಲೇ ಅವನಿಗೆ "ಮಘವನ್" ಎಂದು ಬಿರುದು.

ಇಂದ್ರ ಎಂಬ ಹೆಸರು इन्द् + रक्‌ನಿಂದ ನಿಷ್ಪನ್ನವಾದುದು ಎಂದು ಗುರುತಿಸಿದರೂ ಅದು ಸಂದೇಹಗ್ರಸ್ತ. ಮ್ಯಾಕ್‌ಡೋನೆಲ್ इन्द् ಎಂಬುದು इन्दु - ಹನಿ (drop) ಎಂಬುದಕ್ಕೆ ಸಂಬಂಧಪಟ್ಟಿದ್ದು ಎಂದು ಊಹಿಸುತ್ತಾರೆ.

## 1.4.4 ಪ್ರಶ್ನೆಗಳು

1.4.4.1. ಇಂದ್ರದೇವತೆಯ ಲಕ್ಷಣಗಳನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

**1.4.4.2.** ವ್ಯಾಕರಣ ದೃಷ್ಟಿಯಿಂದ ವಿವರಿಸಿರಿ

पर्यभूषत्, रोदसी, जनासः, व्यथमानाम्, अपधा, जजान, च्यवना, श्वघ्नीव, सेति, आहुः, आ मिनाति, युक्तग्राव्णः, अविता, आतस्थिवांसा, विजयन्ते, युध्यमानाः, क्षियन्तम्, ओजायमानम्, सर्तवे, द्यावा चिदस्मै पृथिवी, वज्रहस्तः, सुन्वन्तम्, वदेम ।

**1.4.4.3.** ಸ್ವರವನ್ನು ವಿವರಿಸಿ -

जनासः, यः --- अदृं॑हत्, य .... विममे, आ मिनाति, चोदिता, सुशिप्रः, सुतसो॑मस्य, अच्युतच्युत्, यः -- अनुददा॑ति, हन्ता, वज्र॑बाहुः, ते इन्द्र ।

**1.4.4.4.** ಅರ್ಥವನ್ನು ಬರೆಯಿರಿ -

मनस्वान्, क्रतुना, रोदसी, प्रकुपितान्, सप्त सिन्धून्, अश्मनोः, समत्सु, संवृक्, अर्यः, विज इव, रध्रस्य, कृशस्य, संयती, एनलृ, शर्वा, क्षियन्तम्, शरदि, तुविष्मान्, निचितः, राधः, विदथम् ।


**ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-061/2013-14 ದಿನಾಂಕ : 21-12-2013**
**ಒಳಪುಟ : 60 GSM ಮ್ಯಾಪ್ಲಿತೊ ಮತ್ತು ರಕ್ಷಾ ಪುಟ : 170 GSM 'ಮ್ಯಾಟ್ ಆರ್ಟ್ ಕಾರ್ಡ್'**
**ಮುದ್ರಕರು : ಶ್ರೀ ಸುಬ್ರಮಣ್ಯೇಶ್ವರ ಬುಕ್ ಡಿಪೋ, ಬೆಂಗಳೂರು - 560 002, ಪ್ರತಿಗಳು - 200**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸ ಗಂಗೋತ್ರಿ ಮೈಸೂರು – 570 006

ಉನ್ನತ ಶಿಕ್ಷಣದ ಅವಕಾಶಗಳನ್ನು ವೃದ್ಧಿಸಿ ಶಿಕ್ಷಣವನ್ನು ಪ್ರಜಾತಾಂತ್ರಿಕರಿಸುವ ಸಾಧನವಾಗಿ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಅನಾವರಣಗೊಳಿಸಲಾಗಿದೆ.

*ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬*





♣ ಪ್ರಾದೇಶಿಕ ಕೇಂದ್ರಗಳು

- ಬೆಂಗಳೂರು
- ದಾವಣಗೆರೆ
- ಗುಲ್ಬರ್ಗಾ
- ಧಾರವಾಡ
- ಶಿವಮೊಗ್ಗ
- ಮಂಗಳೂರು
- ತುಮಕೂರು
- ಹಾಸನ
- ಚಾಮರಾಜನಗರ
- ಬಳ್ಳಾರಿ
- ಮಂಡ್ಯ
- ಕೋಲಾರ
- ಬಿಜಾಪುರ
- ಬೆಳಗಾಂ
- ರಾಮನಗರ
- ಬೆಂಗಳೂರು (ಮತ್ತೊಂದು)
- ಚಿಕ್ಕಮಗಳೂರು
- ಉಡುಪಿ
- ಕಾರವಾರ
- ಬೀದರ್
- ಮೈಸೂರು

- ✿ ಮುಖ್ಯಕಚೇರಿಗಳು
- ★ ಒಟ್ಟು ಅಧ್ಯಯನ ಕೇಂದ್ರಗಳು: ೧೨೩
- ♣ ಪ್ರಾದೇಶಿಕ ಕೇಂದ್ರಗಳು: ೨೧
- ❄ ಬಿ ಎಡ್ ಅಧ್ಯಯನ ಕೇಂದ್ರಗಳು: ೧೦
- ✦ ಎಂ ಎಡ್ ಅಧ್ಯಯನ ಕೇಂದ್ರಗಳು: ೦೬

# KSOU

Higher Education to everyone everywhere
ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ




ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–570 006

## Karnataka State Open University

Mukthagangothri, Mysore-570 006 Website : www.ksoumysore.edu.in